# ಭಗವದ್ಗೀತೆಯ ಸಾರಾರ್ಥ



1998

# ಭಗವದ್ಗೀತೆಯ ಸಾರಾರ್ಥ

(ಶ್ರೀಯಾಮುನಾಚಾರ್ಯರು ರಚಿಸಿರುವ ಗೀತಾರ್ಥಸಂಗ್ರಹದ ಶ್ಲೋಕಗಳು, ಅವುಗಳ ಅರ್ಥ ಮತ್ತು ವಿವರಣೆ, ಮತ್ತು ಶ್ರೀರಾಮಾನುಜರ ಗೀತಾಭಾಷ್ಯವನ್ನು ಅನುಸರಿಸಿ ಭಗವದ್ಗೀತೆಯ ಸಾರಾರ್ಥ)

★


ಪ್ರಕಾಶಕರು

ಶ್ರೀ ಡಾ. ಎಂ. ಡಿ. ಶ್ರೀನಿವಾಸ್

ಫ್ಲ್ಯಾಟ್ ನಂ. 1, ನಂ.31, ರುಕ್ಮಿಣೀರೋಡು

ಬೆಸೆಂಟ್‌ನಗರ, ಚೆನ್ನೈ-600090

1998

ಪ್ರಥಮ ಮುದ್ರಣ : 1998

ಪ್ರತಿಗಳು : 1000

ಬೆಲೆ : ಹತ್ತು ರೂಪಾಯಿಗಳು

ಲೇಖಕರು : ಶ್ರೀಮತಿ ಎಂ. ಡಿ. ವೇದವಲ್ಲಿ

ಮುದ್ರಕರು : ಶ್ರೀರಾಮ ಪ್ರಿಂಟರ್ಸ್
ಶ್ರೀನಿಧಿ ಲೇಔಟ್
ಬೆಂಗಳೂರು -62.

ಪುಸ್ತಕ ದೊರೆಯುವ ಸ್ಥಳ :

ಶ್ರೀಮತಿ ಎಂ. ಎ. ಸಿಂಗಮ್ಮ
140 ಎ, 13ನೇ ಮೈನ್
3ನೇ ಬ್ಲಾಕ್ ಈಸ್ಟ್, ಜಯನಗರ
ಬೆಂಗಳೂರು -560011
ಫೋನ್ : 6632946

ಶ್ರೀ. ಎಂ. ಡಿ. ರಂಗನಾಥ
ನಂ. 966 (43), 65ನೇ ಕ್ರಾಸ್
5ನೇ ಬ್ಲಾಕು, ರಾಜಾಜಿನಗರ
ಬೆಂಗಳೂರು-560010
ಫೋನ್ : 3358726

ಶ್ರೀ. ಎಂ. ಡಿ. ಜಯಸಿಂಹ
ನಂ. 40/10, 13ನೇ ಕ್ರಾಸ್
6ನೇ ಮೈನ್ ಹತ್ತಿರ, ಮಲ್ಲೇಶ್ವರ
ಬೆಂಗಳೂರು-560003
ಫೋನ್ : 3445252

# ಮುನ್ನುಡಿ

ಭಗವದ್ಗೀತೆ ಸನಾತನಧರ್ಮದ ಒಂದು ಪವಿತ್ರಗ್ರಂಥ. ಇದನ್ನು ಶ್ರೀ ವ್ಯಾಸಮಹರ್ಷಿಯು ಮಹಾಭಾರತದಲ್ಲಿ ರಚಿಸಿದ್ದಾರೆ. ಅವರು ಮಹಾಭಾರತದ ಅನೇಕ ಸಂದರ್ಭಗಳಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಪುರುಷಾರ್ಥಗಳ ವಿಷಯವನ್ನು ವಿವರವಾಗಿ ತಿಳಿಸಿದ್ದಾರೆ. ಮಹಾಭಾರತದಲ್ಲಿ ಶ್ರೀ ಕೃಷ್ಣ ಪರಮಾತ್ಮನು ಇದನ್ನು ಸ್ವತ: ಅರ್ಜುನನಿಗೆ ಉಪದೇಶಿಸಿರುವುದರಿಂದ ಇದಕ್ಕೆ ಭಗವದ್ಗೀತೆ ಎಂದು ಹೆಸರು ಬಂದಿದೆ. ಇದು ಕೇವಲ ಅರ್ಜುನನಿಗೆ ಮಾತ್ರ ಹೇಳಿರುವ ತತ್ತ್ವೋಪದೇಶವಲ್ಲ. ಇದು ಪರಮಾತ್ಮನು ಅರ್ಜುನನನ್ನು ವ್ಯಾಜವಾಗಿ ಹೊಂದಿದ್ದು ಸರ್ವದೇಶ, ಸರ್ವಕಾಲದಲ್ಲೂ ಇರುವ ಸರ್ವಮಾನವರಿಗೂ ನೀಡಿರುವ ಶ್ರೇಷ್ಠವಾದ ಉಪದೇಶವಾಗಿದೆ.

ಆದ್ದರಿಂದ ಬಹಳ ಹಿಂದಿನ ಕಾಲದಿಂದಲೂ ಅನೇಕ ಆಚಾರ್ಯರುಗಳೂ, ಮಹಾಪುರುಷರುಗಳೂ ಇದಕ್ಕೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಶ್ರೀಆದಿಶಂಕರಾಚಾರ್ಯರು, ಶ್ರೀರಾಮಾನುಜಾಚಾರ್ಯರು, ಮತ್ತು ಶ್ರೀಮಧ್ವಾಚಾರ್ಯರು ರಚಿಸಿರುವ ತತ್ತ್ವಾರ್ಥಗಳನ್ನು ಒಳಗೊಂಡ ವ್ಯಾಖ್ಯಾನಗಳು ಬಹಳ ಶ್ರೇಷ್ಠವಾದವುಗಳಾಗಿವೆ. ಇವಲ್ಲದೆ ಮಹಾತ್ಮಗಾಂಧೀ, ಶ್ರೀಬಾಲಗಂಗಾಧರ ತಿಲಕ್, ಜ್ಞಾನದೇವ್ ಮುಂತಾದ ಅನೇಕ ಮಹಾಪುರುಷರುಗಳೂ ಇದರ ವಿಷಯವಾಗಿ ಬರೆದ ಉತ್ತಮವಾದ ಗ್ರಂಥಗಳೂ ಇವೆ.

ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹವೆಂಬ ಚಿಕ್ಕ ಗ್ರಂಥವನ್ನು ರಚಿಸಿದ್ದಾರೆ. ಅದರಲ್ಲಿ ಅವರು ಕೇವಲ 32 ಶ್ಲೋಕಗಳಲ್ಲಿ ಭಗವದ್ಗೀತೆಯ 18 ಅಧ್ಯಾಯಗಳ ಸಾರಾರ್ಥವನ್ನು ಸಂಗ್ರಹವಾಗಿ ತಿಳಿಸಿದ್ದಾರೆ. ಗೀತಾರ್ಥ ಸಂಗ್ರಹವನ್ನು ಆಧಾರವಾಗಿಟ್ಟುಕೊಂಡು ಶ್ರೀರಾಮಾನುಜಾಚಾರ್ಯರು ಭಗವದ್ಗೀತೆಗೆ ವಿಸ್ತಾರವಾದ ವ್ಯಾಖ್ಯಾನವನ್ನೊಳಗೊಂಡ ಗೀತಾಭಾಷ್ಯವೆಂಬ ಗ್ರಂಥವನ್ನು ಬರೆದು ಅನುಗ್ರಹಿಸಿದ್ದಾರೆ. ಅದಕ್ಕೆ ಶ್ರೀವೇದಾಂತದೇಶಿಕರು ಬಹಳ ವಿಸ್ತಾರವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಸಂಸ್ಕೃತ ಭಾಷೆಯಲ್ಲಿರುವ ಈ ಮಹದ್ಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡುವುದು ಬಹಳ ಕಷ್ಟ, ಆದ್ದರಿಂದ ಇಲ್ಲಿ ಶ್ರೀಯಾಮುನಾಚಾರ್ಯರ ಗೀತಾರ್ಥಸಂಗ್ರಹದ ಶ್ಲೋಕಗಳನ್ನು, ಅವುಗಳ ಅರ್ಥವನ್ನು, ಅದನ್ನನುಸರಿಸಿ ಶ್ರೀರಾಮಾನುಜಭಾಷ್ಯದ ಪ್ರಕಾರ ಭಗವದ್ಗೀತೆಯ

18 ಅಧ್ಯಾಯಗಳ ಸಾರಾರ್ಥವನ್ನು ಆದಷ್ಟು ಸುಲಭವಾಗಿ, ಸಂಗ್ರಹವಾಗಿ, ತಿಳಿಸುವ ಪ್ರಯತ್ನಮಾಡಲ್ಪಟ್ಟಿದೆ.

ನನ್ನ ಪೂಜ್ಯ ತಂದೆಯವರಾದ ದಿವಂಗತ ಶ್ರೀ ಎಂ. ಎ. ನಾರಾಯಣ ಐಯ್ಯಂಗಾರ್ (Retd. DDPI) ರವರು ಅಧ್ಯಾತ್ಮ ಗ್ರಂಥಗಳನ್ನು ಬಹಳ ಶ್ರದ್ಧೆಯಿಂದ ವ್ಯಾಸಂಗ ಮಾಡುತ್ತಿದ್ದರು ಮತ್ತು ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರು ಶ್ರೀಯಾಮುನಾಚಾರ್ಯರ ಗೀತಾರ್ಥಸಂಗ್ರಹದ ಶ್ಲೋಕಗಳನ್ನು ಅರ್ಥತಾತ್ಪರ್ಯಗಳೊಂದಿಗೆ ಪ್ರಕಟಿಸಬೇಕೆಂಬ ಸದುದ್ದೇಶ ಹೊಂದಿದ್ದರು. ಆದರೆ ಅವರ ಕಾಲದಲ್ಲಿ ಅದು ಕಾರ್ಯಗತವಾಗಲಿಲ್ಲ. ಅವರ ಆಸೆಯನ್ನು ಸಫಲಗೊಳಿಸುವ ಸಲುವಾಗಿ ಅವರ ಹಸ್ತಲಿಖಿತ ಲೇಖನಗಳ ಮತ್ತು ಮುಂದೆ ತಿಳಿಸಿರುವ ವಿದ್ವಾಂಸರ ಪುಸ್ತಕಗಳ ಸಹಾಯ ಪಡೆದು ಗೀತಾರ್ಥ ಸಂಗ್ರಹದ ಶ್ಲೋಕಗಳನ್ನು ಅರ್ಥ ಸಹಿತ ಬರೆದು ಪ್ರಕಟಿಸಿದ್ದೇನೆ. ಅದನ್ನು ಆಧಾರವಾಗಿ ಇಟ್ಟುಕೊಂಡು ಭಗವದ್ಗೀತೆಯ ಸಾರಾರ್ಥವನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ಶ್ರೀಮತಿ ಗೀತಾರಾಮರತ್ನಂರವರ ತಮಿಳು ಲೇಖನಗಳು ''ಗೀತಾಸಾರಸಂಗ್ರಹಂ'' ಎಂಬ ಹೆಸರಿನಲ್ಲಿ ಡಾ|| ಶ್ರೀ ಎಂ. ಎ. ವೆಂಕಟಕೃಷ್ಣನ್‌ರವರ ''ಗೀತಾಚಾರ್ಯನ್'' ಎಂಬ ತಮಿಳು ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ.

ಈ ಪುಸ್ತಕವನ್ನು ಬರೆಯಲು ನನ್ನ ಸಹೋದರಿ ಶ್ರೀಮತಿ ಎಂ. ಎ. ಸಿಂಗಮ್ಮನವರು ಸಹಾಯ ಮಾಡಿದ್ದಾರೆ. ಅವರು 'ಉಭಯವೇದ' ಪತ್ರಿಕೆಯಲ್ಲಿ ಪ್ರಕಟಿಸಿರುವ ''ಭಗವದ್ಗೀತೆಯ ಸರಳಾನುವಾದ'' ಎಂಬ ಲೇಖನಗಳಿಂದ ನನಗೆ ಬಹಳ ಉಪಯೋಗವಾಗಿದೆ. ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ಮಗ ಶ್ರೀ ಡಾ ಎಂ. ಡಿ. ಶ್ರೀನಿವಾಸ್‌ರವರು ನನ್ನ ಹಸ್ತಲಿಖಿತ ಪ್ರತಿಗಳನ್ನು ಓದಿ ಪರಿಷ್ಕರಿಸಿ ಕೊಟ್ಟು ನನಗೆ ಸಹಾಯ ಮಾಡಿದ್ದಾರೆ.

ಈ ಕೃತಿಗೆ ಆಶೀರ್ವಚನ ಬರೆದುಕೊಟ್ಟು ಅನುಗ್ರಹಿಸಿರುವ ಶ್ರೀ ಶ್ರೀ ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರರಾಮಾನುಜಜೀಯರ್ ಸ್ವಾಮಿಗಳು, ಮೇಲುಕೋಟೆ (ತಿರುನಾರಾಯಣಪುರ) ಅವರಿಗೆ ನನ್ನ ಅನಂತ ಪ್ರಣಾಮವನ್ನು ಸಮರ್ಪಿಸುತ್ತೇನೆ.

ಶ್ರೀಮಂಡಯಂ ಅಣ್ಣಾಧೊರೆ ಶ್ರೀನಿವಾಸಯ್ಯಂಗಾರ್ ಯದುಗಿರಿಯಮ್ಮ

ಟ್ರಸ್ಟ್‌ನ ಸಹಾಯದಿಂದ ಈ ಪುಸ್ತಕವು ಮುದ್ರಿಸಲ್ಪಟ್ಟಿದೆ. ಈ ಟ್ರಸ್ಟಿನವರಿಗೆ ನನ್ನ ಕೃತಜ್ಞತೆಯನ್ನೂ ವಂದನೆಗಳನ್ನೂ ಅರ್ಪಿಸುತ್ತೇನೆ.

ಇದನ್ನು ಸಕಾಲಕ್ಕೆ ಅಂದವಾಗಿ ಅಚ್ಚುಹಾಕಿಕೊಟ್ಟು ಸಹಾಯಮಾಡಿದ ಶ್ರೀರಾಮ ಪ್ರಿಂಟರ್ಸ್‌ರವರಿಗೂ ಈ ಕೃತಿ ಹೊರಬರಲು ಸಹಕರಿಸಿದ ಶ್ರೀ. ಸತ್ಯನಾರಾಯಣರವರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ

ಭಗವದ್ಗೀತೆಯ ವಿಷಯವಾಗಿ ಬರೆಯಲು ಅದರ ತತ್ತ್ವೋಪದೇಶಗಳ ಆಚರಣೆಯಲ್ಲಿ ಅಶಕ್ತಳಾದ ನನಗೆ ಅರ್ಹತೆ ಇಲ್ಲದಿದ್ದಾಗ್ಯೂ, ಇದು ಒಂದು ಭಗವತ್ಕೈಂಕರ್ಯವೆಂಬ ಭಾವನೆಹೊಂದಿ, ಹಿರಿಯರ ವ್ಯಾಖ್ಯಾನಗಳನ್ನು ಓದಿ, ಗೀತೆಯ ಸಾರಾರ್ಥವನ್ನು ಆದಷ್ಟು ಸಂಗ್ರಹವಾಗಿಯೂ, ಸುಲಭವಾಗಿಯೂ ಬರೆದು ಪ್ರಕಟಿಸಿದ್ದೇನೆ. ಇದರ ರಚನೆಗೆ ಮೂಲಸೂತ್ರಧಾರನಾದ ಭಗವಂತನ ಪಾದಾರವಿಂದಗಳಲ್ಲಿ ಈ ಗ್ರಂಥಪುಷ್ಪವನ್ನು ಸಮರ್ಪಿಸುತ್ತೇನೆ.

ಎಂ. ಡಿ. ವೇದವಲ್ಲಿ

ದಿನಾಂಕ : 8.6.1998

ಬೆಂಗಳೂರು



# ಶ್ರೀಶ್ರೀಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ ಸ್ವಾಮಿಗಳು, ಮೇಲುಕೋಟೆ (ತಿರುನಾರಾಯಣಪುರ) ಅವರ

## ಆಶೀರ್ವಚನ

ಧರ್ಮೋ ರಕ್ಷತಿ ರಕ್ಷಿತಃ

ಧರ್ಮಹಾನಿರ್ನಕರ್ತವ್ಯಾ ಕರ್ತವ್ಯೋ ಧರ್ಮಸಂಗ್ರಹಃ ।
ಧರ್ಮಾಧರ್ಮೌ ಹಿ ಸರ್ವೇಷಾಂ ಸುಖದುಃಖೋಪಪಾದಿಕಾ ।

ಸನಾತನ ಹಿಂದೂಧರ್ಮವನ್ನು ಕಾಪಾಡಬೇಕು. ವೇದಧರ್ಮಕ್ಕೆ ವಿರೋಧವಾಗಿ ಹೋಗಬಾರದು. ವೇದಧರ್ಮದಂತೆ ನಡೆಯಬೇಕು. ಧರ್ಮಾಧರ್ಮವೇ ನಮ್ಮ ಸುಖದುಃಖಕ್ಕೆ ಕಾರಣವಾಗಿರುವುದು.

ನಮ್ಮ ಭರತಖಂಡದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ, ತನ್ನ ಧರ್ಮ, ಸಂಪ್ರದಾಯ, ನಂಬಿಕೆಗಳಿಗೆ ಅನುಗುಣವಾಗಿ ಭಗವಂತನ ಯಾವದಾದರೊಂದು ರೂಪಸ್ಮರಣೆಯನ್ನು, ದಾನ ಪೂಜಾದಿಗಳನ್ನು ಮಾಡುವುದಲ್ಲದೆ, ಸಾರ್ವಜನಿಕರು ಸಾಮೂಹಿಕವಾಗಿ ಒಂದೆಡೆಸೇರಿ ಭಗವಂತನ ಆರಾಧನೆಗಳಲ್ಲಿ ಭಾಗವಹಿಸಿ ತಮ್ಮ ಐಹಿಕ, ಆಮುಷ್ಮಿಕ ಪ್ರಯೋಜನಗಳನ್ನು ಪಡೆಯುವುದು ಭಾರತದ ಸಂಸ್ಕೃತಿಯ ಒಂದು ಅಂಗವಾಗಿದೆ.

ಕಲಿಯುಗದಲ್ಲಿ ಭಗವಂತನು ಅರ್ಚಾವತಾರಮಾಡಿ ಮೂರ್ತಿಗಳ ರೂಪದಲ್ಲಿ ಭಕ್ತರನ್ನು ಅನುಗ್ರಹಿಸುವನಾದ್ದರಿಂದ ಆ ಮೂರ್ತಿಗಳಿಗೆ ಆಲಯಗಳನ್ನು ನಿರ್ಮಿಸಿ ಸೇವಾವಕಾಶ ದೊರಕುವಂತೆ ರಾಜರುಗಳು, ಧರ್ಮದೃಷ್ಟಿಯುಳ್ಳ ಶ್ರೀಮಂತರು, ಆವಿಧವಾದ ಅವಕಾಶಗಳನ್ನು ಕಲ್ಪಿಸುವುದು ರೂಢಿಯಾಗಿ ಅಲ್ಲಲ್ಲಿ ದೇವಸ್ಥಾನಗಳನ್ನು ಕಟ್ಟಿ ವಿಗ್ರಹಗಳನ್ನು ಪ್ರತಿಷ್ಠಿಸಿ ಪೂಜಿಸಿಬರುವರು.

## ವಿದ್ಯಾ

ವಿದ್ಯೆ ಎಂದರೆ ಜ್ಞಾನ ಎಂದರ್ಥವು. ಯಾವ ವಸ್ತುವಿನಿಂದ ಜ್ಞಾನವು ಉಂಟಾಗುವುದೋ ಅದಕ್ಕೆ ವಿದ್ಯೆಯೆಂದು ಹೆಸರು. ಆ ವಿದ್ಯೆ ಎನ್ನುವುದನ್ನು ಕೈಯಲ್ಲಿ ಬರೆದು ತೋರಿಸಿದರೆ ಅದಕ್ಕೆ ಕಲೆ ಎನ್ನುತ್ತಾರೆ. ಇತರ ವಿದ್ಯಾಜ್ಞಾನಗಳು ವಿದ್ಯೆಯೆಂದು ಪರಿಗಣಿಸಲ್ಪಡುವುದಿಲ್ಲ. ಅವುಗಳು ಕೇವಲ ಉದರಭರಣಕ್ಕಾಗಿ ಏರ್ಪಟ್ಟವು. ಆದುದರಿಂದಲೇ ವೇದಶಾಸ್ತ್ರಕ್ಕೆ ವಿದ್ಯೆಯೆಂದು ಹೆಸರು. ಆ ವಿದ್ಯೆಯು ಅಷ್ಟಾದಶವೆಂದು ಹೇಳುವರು.

ವೇದಗಳು ೪- ಋಕ್, ಯಜುಸ್, ಸಾಮ, ಅಥರ್ವ.

ವೇದಾಂಗಗಳು ೬ - ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ.

ತರ್ಕ, ಮೀಮಾಂಸ, ಪುರಾಣ, ಧರ್ಮಶಾಸ್ತ್ರ - ಇವು ೪

ಉಪವೇದಗಳು ೪- ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥಶಾಸ್ತ್ರ.

ಈ ೧೮ ವಿದ್ಯೆಗಳಲ್ಲಿ ಉಪವೇದಗಳಾದ ನಾಲ್ಕೂ ಸಹ ವೇದದಲ್ಲೇ ಅಂತರ್ಗತವಾಗುವುದರಿಂದ ಪ್ರಧಾನವಾಗಿ ೧೪ (ಹದಿನಾಲ್ಕು) ವಿದ್ಯೆಗಳೆಂದೇ ನಿರ್ಣಯವು. ಈ ಸಂಖ್ಯಾಶಾಸ್ತ್ರವನ್ನು ಅನುಸರಿಸಿಯೇ ಈಶ್ವರನು 'ನನಾದಢಕ್ಕಾಂನವಪಂಚವಾರಂ' ಎಂಬುದಾಗಿ ೧೪ ವಿದ್ಯೆಗಳೆಂದು ಸ್ಥಿರಪಡಿಸಿರುವನು.

ಈ ೧೪ ವಿದ್ಯೆಗಳನ್ನು ಇಟ್ಟುಕೊಂಡೇ ವ್ಯಾಸರು ಭಾರತ, ೧೮ ಪುರಾಣ, ಧರ್ಮಶಾಸ್ತ್ರ, ಬ್ರಹ್ಮಸೂತ್ರವನ್ನು ಬರೆದಿರುವರು.

ಎಲ್ಲಾ ವಿದ್ಯೆಗಳ ಸಾರಾಂಶವೂ ಈ ಭಗವದ್ಗೀತೆಯಲ್ಲಿ ಅಡಗಿವೆ. ಈ ಗ್ರಂಥಕ್ಕೆ ಮತತ್ರಯಆಚಾರ್ಯರುಗಳೆಲ್ಲಾ ಅವರವರ ವೇದಾಂತವನ್ನು ಅನುಸರಿಸಿ ವ್ಯಾಖ್ಯಾನ ಮಾಡಿರುತ್ತಾರೆ.

## ಅದ್ವೈತ

ಶ್ರೀಶಂಕರಾಚಾರ್ಯರು - ಬ್ರಹ್ಮಸತ್ಯಂ ಜಗನ್ಮಿಥ್ಯಾಜೀವೋಬ್ರಹ್ಮೈವ ನಾಪರಃ - ಎಂದರೆ ಬಹ್ಮ ಒಂದೇ ಸತ್ಯ, ಜಗತ್ತು ಮಿಥ್ಯಾರೂಪವಾದುದು ಎಂಬುದೂ, ಜೀವನು ಬ್ರಹ್ಮನೇ - ಜೀವ ಬ್ರಹ್ಮನಿಂದ ಬೇರೆಯಲ್ಲ ಎಂಬುದೂ, ಅದ್ವೈತರೂಪ.

## ವಿಶಿಷ್ಟಾದ್ವೈತ

ಶ್ರೀರಾಮಾನುಜಾಚಾರ್ಯರು - ಭೇದಾಭೇದವನ್ನು ಎರಡನ್ನೂ ಶ್ರುತಿಯು ತಿಳಿಸುತ್ತದೆ. ಎರಡೂ ಮುಖ್ಯವು. ಪ್ರಪಂಚ ಮತ್ತು ದೇವರು ಬೇರೆ ಎಂಬುದು ನಿಜ. ಆತ್ಮ ಎನ್ನುವುದು ಬ್ರಹ್ಮನಿಗೆ ಶರೀರೋಪಾದಿಯಲ್ಲಿ ಇರುವುದು. ಇನ್ನೊಂದು ಅಚಿತ್ತತ್ವ ಜಡ ನಿರ್ಜೀವವಸ್ತು - ಇವುಗಳೆಲ್ಲವೂ ಸತ್ಯ

## ದ್ವೈತ

ಶ್ರೀಮಧ್ವಾಚಾರ್ಯರು - ಜಗತ್ತು ಸತ್ಯ, ಜೀವ - ಜೀವ, ಜೀವ - ಜಡ, ಜೀವ - ಪರಮಾತ್ಮ, ಜಡ-ಜಡ, ಜಡ - ಪರಮಾತ್ಮ, ಈ ರೀತಿ ಐದು ವಿಧಗಳು - ಭಕ್ತಿಯಿರಬೇಕು.

ಭಾರತೀಯರಿಗೆ ಸನಾತನ ಹಿಂದೂಧರ್ಮಮತವೇ ಮುಖ್ಯವಾಗಿರುವುದು ಎಂಬುದನ್ನು ಭಗವದ್ಗೀತೆಯಲ್ಲಿ ಯಾವ ರೀತಿಯಲ್ಲಿ ಕಾಣಬಹುದು ವಿಮರ್ಶಿಸೋಣ.

ಭಾರತ ಯುದ್ಧದಲ್ಲಿ ಕೌರವರು ಪಾಂಡವರು ಯುದ್ಧ ಸನ್ನದ್ಧರಾಗಿ ನಿಂತಿರುವಾಗ ಆ ಸಮಯದಲ್ಲಿ ಹರಿಕಥೆ, ಭಗವಂತನ ಗುಣಗಾನ, ಸ್ತೋತ್ರ ಇವುಗಳನ್ನು ನಡೆಸುವುದು ಸರಿಯೇ? ಯುದ್ಧಭೂಮಿಯಲ್ಲಿ ಧರ್ಮಶಾಸ್ತ್ರಚಿಂತನೆ ಮಾಡುವುದು ಸರಿಯೇ? ಕಾರಣವೇನು?

ಪಾಂಡವರು ಕೌರವರು ವೇದಾಂತಕಾಲಕ್ಷೇಪ ಕೇಳಲು ಬಂದಿರುವರೇ? ಇತ್ಯಾದಿ ಪ್ರಶ್ನೆಗಳಿವೆ. ಭಾರತಯುದ್ಧ ಯಾರುಯಾರಿಗೆ ನಡೆಯಿತು? ಏತಕ್ಕಾಗಿ? ವಿಚಾರಿಸೋಣ.

ಪಾಂಡವರೂ, ಕೌರವರೂ ಅಣ್ಣತಮ್ಮಂದಿರ ಮಕ್ಕಳು, ದಾಯಾದಿಗಳು. ಸ್ವಭಾವಜನ್ಯವಾದ ದಾಯಾದಿ ಮತ್ಸರದಿಂದ ರಾಜ್ಯಕ್ಕಾಗಿ ಯುದ್ಧವು.

ಹಾಗಿದ್ದಲ್ಲಿ, ಭಗವದ್ಗೀತೆ, ಧರ್ಮಶಾಸ್ತ್ರ ವೇದಾಂತಪ್ರಕ್ರಿಯೆ ಹೇಳಲು ಕಾರಣವೇನು ? ಭಾರತಯುದ್ಧ ಧರ್ಮವನ್ನು ಕಾಪಾಡುವುದಕ್ಕಾಗಿಯೇ ಯುದ್ಧವು. ಅರ್ಜುನನು ಪ್ರತಿಪಕ್ಷಸೈನ್ಯವನ್ನು ನೋಡಿ, ಅಣ್ಣ, ತಮ್ಮ, ಮಾವ, ಭಾವ, ಅಳಿಯ, ತಾತ, ಗುರುಗಳು ಇವರಲ್ಲಿ ಸಂಬಂಧಪಟ್ಟವರನ್ನೆಲ್ಲಾ ಕೊಂದರೆ

ಪಾಪವು ಬರುವುದಿಲ್ಲವೆ? ಎಂಬುದಾಗಿ ಶ್ರೀಕೃಷ್ಣನನ್ನು ಕೇಳಿದನು. ಅದಕ್ಕೆ ಉತ್ತರ ಧರ್ಮಶಾಸ್ತ್ರವನ್ನು ಹೇಳಲಿಲ್ಲ - ಕಾರಣವೇನು?

ಭಾರತೀಯ ಹಿಂದೂಧರ್ಮವನ್ನು ಕಾಪಾಡುವುದು ಶ್ರೀಕೃಷ್ಣನ ಕಾರ್ಯವಾದ್ದರಿಂದ ಅದನ್ನು ಯಾವ ರೀತಿಯಲ್ಲಿ ಕಾಪಾಡುವುದು ಎಂದು ಆಲೋಚಿಸಿ ಅರ್ಜುನನು ಕೇಳಿದ ಪ್ರಶ್ನೆಗೆ ಧರ್ಮಶಾಸ್ತ್ರವನ್ನು ಹೇಳದೆ ವೇದಾಂತ

ಶಾಸ್ತ್ರವನ್ನು ತಿಳಿಸಲು ಆರಂಭಿಸಿದನು. ಧರ್ಮಶಾಸ್ತ್ರವನ್ನು ಹೇಳಿದ್ದಲ್ಲಿ ಯುದ್ಧವು ನಡೆಯುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ, ಶ್ರೀಕೃಷ್ಣನು ತನ್ನ ಅವತಾರ ಉದ್ದೇಶಕಾರಣವಾದ ದುಷ್ಟಶಿಕ್ಷಣ, ಶಿಷ್ಟಪರಿಪಾಲನ, ಧರ್ಮಸಂಸ್ಥಾಪನ ಇವುಗಳನ್ನೆಲ್ಲಾ ಆಲೋಚಿಸಿ ಅದಕ್ಕೆ ಮೂಲಕಾರಣವಾದ ಭಗವದ್ಗೀತೆ ಎಂಬ ವೇದಾಂತ ವಿಷಯವನ್ನು ತಿಳಿಯಪಡಿಸಿದನು.

ಇನ್ನು ಅನ್ಯಾಯ, ಅಧರ್ಮದಲ್ಲಿ ಮುಳುಗಿರುವ ಕೌರವರ ಪಕ್ಷವನ್ನು ವಿಮರ್ಶಿಸೋಣ. ಕೌರವ ಪಕ್ಷದಲ್ಲಿ ಭೀಷ್ಮ, ದ್ರೋಣ, ಕರ್ಣ, ಕೃಪ, ಅಶ್ವತ್ಥಾಮ, ಇತ್ಯಾದಿ ಮಹಾವೀರರೆಲ್ಲರ ಅಭಿಪ್ರಾಯಗಳಲ್ಲೂ ಧರ್ಮವನ್ನು ಕಾಪಾಡುವ ಉದ್ದೇಶ ಕಾಣಬರುವುದು - ವಿಮರ್ಶಿಸೋಣ.

೧ ಭೀಷ್ಮ : ಬೀಷ್ಮಾಚಾರ್ಯರಿಗೆ ಕೌರವರ ಸೇನಾಪತಿ ಅಧಿಕಾರವು. ಯುದ್ಧವು ಆರಂಭವಾದೊಡನೆ ನಾಲ್ಕೈದು ದಿನಗಳು ಅವರು ಪ್ರಬಲ ಯುದ್ಧ ನಡೆಸಿದುದರ , ಪಲವಾಗಿ ಪಾಂಡವರು ಭಯಪಟ್ಟರು. ಭೀಷ್ಮಾಚಾರ್ಯರು ಅದೇ ರೀತಿಯಲ್ಲಿ ಆ ಯುದ್ಧವನ್ನು ಮಾಡಿದ್ದಲ್ಲಿ ಪಾಂಡವರು ಪರಾಜಿತರಾಗುತ್ತಿದ್ದರು.

ಆದರೆ ಆ ಕಾಲದಲ್ಲಿ ನಡೆಯುವುದು ಧರ್ಮ. ಆ ಧರ್ಮಯುದ್ಧದ ರೀತಿ ನೀತಿ ನಿಯಮಗಳೇ ಬೇರೆ. ರಾಮಾಯಣಕಾಲದಲ್ಲಿ ಹಗಲುರಾತ್ರಿ ಯುದ್ಧವುಂಟು, ಮಹಾಭಾರತ ಕಾಲದಲ್ಲಿ ಸೂರ್ಯಾಸ್ತಮಯವಾದ ಮೇಲೆ ಯುದ್ಧವಿರಾಮ, ಯುದ್ಧವಿರುವುದಿಲ್ಲ, ಕಾರಣ - ಅಧಿಕಾರಿಗಳೆಲ್ಲರೂ ಸ್ನಾನ, ಸಂಧ್ಯಾ, ಜಪ, ತಪ, ದೇವತಾಪೂಜೆ ಮಾಡಬೇಕಾಗಿದ್ದಿತು. ಆ ಕಾಲದಲ್ಲಿ ಶತ್ರುಮಿತ್ರರೆಲ್ಲರೂ ಒಂದೆಡೆಸೇರಿ ಮಾತನಾಡಬಹುದಾಗಿದ್ದಿತು. ಧರ್ಮ, ನ್ಯಾಯ, ಅನ್ಯಾಯಗಳನ್ನು ವಿಮರ್ಶಿಸುತ್ತಿದ್ದರು. ಅದನ್ನನುಸರಿಸಿ ಪಾಂಡವರು ಭೀಷ್ಮರಲ್ಲಿಗೆ

ಬಂದು, ನೀವು ಈ ರೀತಿ ಪ್ರಬಲ ಯುದ್ಧಮಾಡಿದಲ್ಲಿ ನ್ಯಾಯ, ಧರ್ಮದಲ್ಲಿ ನಡೆಯುವ ನಾವು ಹೇಗೆ ಜಯಿಸುವುದು? ಎಂದು ಕೇಳಿದರು.

ಭೀಷ್ಮರು ಭಾರತೀಯ ಸಂಸ್ಕೃತಿ, ಧರ್ಮವನ್ನು ಕಾಪಾಡುವವರಾದ್ದರಿಂದ ಪಾಂಡವರನ್ನು ಕುರಿತು, ನಾಳೆಯ ಯುದ್ಧದಲ್ಲಿ ಶಿಖಂಡಿ ಎಂಬುವವರನ್ನು ನನ್ನ ಮುಂದೆ ನಿಲ್ಲಿಸಿ. ನಾನು ಯುದ್ಧದಿಂದ ವಿರಮಿಸುತ್ತೇನೆ, ಎಂದು ಹೇಳಿದರು. ಅದರಂತೆಯೇ ಮಾರನೆಯ ದಿನ ಶಿಖಂಡಿ ಎಂಬುವವರನ್ನು ಭೀಷ್ಮರ ಮುಂದೆ ನಿಲ್ಲಿಸಲು ಭೀಷ್ಮರು ಯುದ್ಧದಿಂದ ವಿಮುಖರಾದರು.

ಈ ವಿಷಯವು ತಿಳಿದು ಕೌರವ ದುರ್ಯೋಧನನು ಭೀಷ್ಮರ ಬಳಿಗೆ ಬಂದು, ನೀವು ನಮ್ಮವರಾಗಿದ್ದು ಯುದ್ಧರಹಸ್ಯವನ್ನು ಶತ್ರುಪಕ್ಷದವರಿಗೆ ತಿಳಿಸುವುದು ನ್ಯಾಯಧರ್ಮಸಮ್ಮತವಾದುದೇ? ಎಂದು ಕೇಳಿದನು. ಭೀಷ್ಮರು ಅನ್ಯಾಯ, ಅಧರ್ಮದಲ್ಲಿ ನೀನು ಹೋಗುತ್ತಿರುವೆ. ಪಾಂಡವರು ನ್ಯಾಯಧರ್ಮದಲ್ಲಿ ಹೋಗುತ್ತಿರುವರು. ಈಗ ನೀನು ನ್ಯಾಯ ಧರ್ಮವನ್ನು ಕೇಳುವುದು ಆಶ್ಚರ್ಯವಾಗಿದೆ ಎನಲು ದುರ್ಯೋಧನನು ಮಾತನಾಡದೆ ಮೌನವಾಗಿ ಹೊರಟು ಹೋದನು.

೨. ಕರ್ಣ : ಕರ್ಣನು ದುರ್ಯೋಧನನ ಪರಮಮಿತ್ರ, ದುರ್ಯೋಧನನ ಮೇಲ್ಮೆಯನ್ನೇ ಕೋರುವವನು. ಅಲ್ಲದೆ ಅರ್ಜುನನಿಗೆ ಪ್ರತಿಸ್ಪರ್ಧಿ. ಕರ್ಣನು ಅರ್ಜುನನೊಂದಿಗೆ ಯುದ್ಧಮಾಡುತ್ತಿರುವಾಗ ತನ್ನಲ್ಲಿದ್ದ ಸರ್ಪಾಸ್ತ್ರ ಎಂಬ ಪ್ರಬಲ ಅಸ್ತ್ರವನ್ನು ಪ್ರಯೋಗಿಸಿದನು. ಅರ್ಜುನನು ಇದರಿಂದ ಹತನಾಗಿ ಪಾಂಡವರಿಗೆ ಸೋಲುಂಟಾಗಬೇಕಿದ್ದಿತು. ಆದರೆ ಚಾಣಕ್ಯ ಶ್ರೀಕೃಷ್ಣನ ಯುದ್ಧತಂತ್ರದಿಂದ ಅಪಾಯವು ತಪ್ಪಿಹೋಯಿತು, ಕೌರವನು ಕರ್ಣನ ಬಳಿಗೆ ಬಂದು ಆ ಅಸ್ತ್ರವನ್ನು ಪುನಃ ಪ್ರಯೋಗಿಸೆಂದನು. ಕರ್ಣನು ದುರ್ಯೋಧನನಿಗೆ ಎಷ್ಟೇ ಮಿತ್ರನಾಗಿದ್ದುದಲ್ಲದೆ ಅರ್ಜುನನಿಗೆ ವಿರೋಧಿಯಾಗಿದ್ದರೂ, ತಾನು ಧರ್ಮಬದ್ಧನು, ಪುನಃ ಉಪಯೋಗಿಸುವುದಿಲ್ಲವೆಂದನು. ಧರ್ಮವನ್ನು ಕಾಪಾಡುವುದೇ ಉದ್ದೇಶವು.

೩. **ಅಶ್ವತ್ಥಾಮ** - ಇವರು ಕೌರವ ಪಕ್ಷದಲ್ಲಿ ಪ್ರಬಲ ಯೋಧರು. ಇವರಲ್ಲಿ ನಾರಾಯಣಾಸ್ತ್ರ ಎಂಬ ಪ್ರಬಲವಾದ ಆಯುಧವಿದ್ದಿತು. ಅದನ್ನು ಪ್ರಯೋಗಿಸಿದ್ದಿದ್ದರೆ ಕೃಷ್ಣಾರ್ಜುನರಾದಿಯಾಗಿ ಪಾಂಡವರೆಲ್ಲಾ

ವಿನಾಶವಾಗುತ್ತಿದ್ದರು. ಏಕೆ ಪ್ರಯೋಗಿಸಲಿಲ್ಲ? ಪ್ರಯೋಗಿಸಿದ್ದಿದ್ದರೆ ಧರ್ಮದ ಪಕ್ಷವು ನಾಶವಾಗಿ ಅಧರ್ಮದ ಪಕ್ಷವು ಜಯಿಸುತ್ತಿದ್ದಿತು. ಅಶ್ವತ್ಥಾಮನು ಇದನ್ನು ತಿಳಿದೇ ಅಸ್ತ್ರಪ್ರಯೋಗ ಮಾಡಲಿಲ್ಲ - ಎಂದರೆ ಧರ್ಮವನ್ನು ಕಾಪಾಡುವುದೇ ಉದ್ದೇಶವು.

ಪ್ರಕೃತ ವಿದುಷೀಮಣಿ ಶ್ರೀಮತಿ ವೇದವಲ್ಲಿಯವರು ಭಗವದ್ಗೀತೆಯ ಸಾರಾರ್ಥ - ಶ್ರೀಯಾಮುನಾಚಾರ್ಯರ ಗೀತಾರ್ಥಸಂಗ್ರಹ ಮತ್ತು ವಿವರಣೆ, ಶ್ರೀರಾಮಾನುಜಾಚಾರ್ಯರ ಗೀತಾಭಾಷ್ಯ ಇವುಗಳನ್ನು ಅನುಸರಿಸಿ ಈ ಗ್ರಂಥವನ್ನು ಲೋಕೋಪಕಾರವಾಗಿ ಬರೆದಿರುವರು. ಶ್ರೀಮತಿ ವೇದವಲ್ಲಿ ಯವರ ಉಪಕಾರ ಚಿರಸ್ಮರಣೀಯ. ಇದೇ ರೀತಿಯಲ್ಲಿ ನಮ್ಮ ವೇದಾಂತ ಗ್ರಂಥಗಳನ್ನು ಸುಲಭರೀತಿಯಲ್ಲಿ, ಸುಲಭ ಶೈಲಿಯಲ್ಲಿ ಬರೆದು ನಮ್ಮ ಹಿಂದೂ ಸಂಸ್ಕೃತಿಯನ್ನು ಬೆಳಕಿಗೆ ತರಲೆಂದು ಅವರಿಗೆ ಭಗವಂತನು ಆಯುರಾರೋಗ್ಯಐಶ್ವರ್ಯಜ್ಞಾನಗಳನ್ನು ಅನುಗ್ರಹಿಸಲಿ ಎಂದು ಶ್ರೀಮಠದ ಲಕ್ಷ್ಮೀನರಸಿಂಹಸ್ವಾಮಿಯವರಲ್ಲಿ ಪ್ರಾರ್ಥಿಸಿ ಮಂಗಳಾಶಾಸನವನ್ನು ಮಾಡುತ್ತೇವೆ.

श्रीरामानुज

ಶ್ರೀಯೈನಮಃ

ಶ್ರೀನಿವಾಸಾಯನಮಃ

ಪ್ರಪನ್ನಪಾರಿಜಾತಾಯ
ತೋತ್ರವೇತ್ರೈಕಪಾಣಯೇ ।
ಜ್ಞಾನಮುದ್ರಾಯ ಕೃಷ್ಣಾಯ
ಗೀತಾಮೃತದುಹೇನಮಃ ॥

ವಸುದೇವಸುತಂ ದೇವಂ
ಕಂಸಚಾಣೂರಮರ್ದನಮ್ ।
ದೇವಕೀ ಪರಮಾನಂದಂ
ಕೃಷ್ಣಂ ವಂದೇ ಜಗದ್ಗುರುಂ ॥

ಯತ್ಪದಾಂಭೋರುಹಧ್ಯಾನ
ವಿಧ್ವಸ್ತಾಶೇಷಕಲ್ಮಷಃ ।
ವಸ್ತುತಾಮುಪಯಾತೋಽಹಂ
ಯಾಮುನೇಯಂ ನಮಾಮಿ ತಂ ॥

ಶ್ರೀಮದ್ಯಾಮುನಮುನಯೇನಮಃ

ಯೋನಿತ್ಯಮಚ್ಯುತಪದಾಂಬುಜಯುಗ್ಮರುಕ್ಮ
ವ್ಯಾಮೋಹತಸ್ತದಿತರಾಣಿ ತೃಣಾಯ ಮೇನೇ ।
ಅಸ್ಮದ್ಗುರೋರ್ಭಗವತೋಽಸ್ಯ ದಯೈಕಸಿಂಧೋಃ
ರಾಮಾನುಜಸ್ಯ ಚರಣೌ ಶರಣಂಪ್ರಪದ್ಯೇ ॥

ಶ್ರೀಮತೇರಾಮಾನುಜಾಯನಮಃ

"ಕೃಷ್ಣಂ ವಂದೇ ಜಗದ್ಗುರುಂ"

ಶ್ರೀಯಾಮುನಮುನಯೇನಮಃ

ಶ್ರೀಮತೇರಾಮಾನುಜಾಯನಮಃ

# ಗೀತಾರ್ಥಸಂಗ್ರಹ

ಶ್ರೀಯಾಮುನಾಚಾರ್ಯರು ಅನುಗ್ರಹಿಸಿರುವ ಗೀತಾರ್ಥಸಂಗ್ರಹದಲ್ಲಿ 32 ಶ್ಲೋಕಗಳಿವೆ. ಇದರ ಮೊದಲನೆಯ ಶ್ಲೋಕದಲ್ಲಿ ಸಮಗ್ರ ಭಗವದ್ಗೀತೆಯ ಅಂದರೆ 18 ಅಧ್ಯಾಯಗಳ ಸಾರಾರ್ಥವು ತಿಳಿಸಲ್ಪಟ್ಟಿದೆ. ಭಗವದ್ಗೀತೆಯ 18 ಅಧ್ಯಾಯಗಳನ್ನು 3 ಷಟ್ಕಗಳಾಗಿ (ಅಂದರೆ ಮೂರು 6 ಅಧ್ಯಾಯಗಳಾಗಿ) ವಿಂಗಡಿಸಿ ಗೀತಾರ್ಥಸಂಗ್ರಹದ 2, 3, ಮತ್ತು 4ನೆಯ ಶ್ಲೋಕಗಳಲ್ಲಿ ಕ್ರಮವಾಗಿ ಅವುಗಳ ಸಾರಾರ್ಥವು ತಿಳಿಸಲ್ಪಟ್ಟಿದೆ. ಅನಂತರ ಗೀತಾರ್ಥಸಂಗ್ರಹದ 5ನೆಯ ಶ್ಲೋಕದಿಂದ 22ನೆಯ ಶ್ಲೋಕದವರೆಗಿನ 18 ಶ್ಲೋಕಗಳಲ್ಲಿ ಒಂದು ಅಧ್ಯಾಯಕ್ಕೆ ಒಂದು ಶ್ಲೋಕದಂತೆ ಗೀತೆಯ ಪ್ರತಿಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ. ಗೀತಾರ್ಥಸಂಗ್ರಹದ 23ನೇ ಶ್ಲೋಕದಿಂದ 32ರ ವರೆಗಿನ 10 ಶ್ಲೋಕಗಳಲ್ಲಿ ಕರ್ಮ, ಜ್ಞಾನ, ಭಕ್ತಿ ಮತ್ತು ಶರಣಾಗತಿಯೋಗಗಳ ಸ್ವರೂಪವೂ, ಭಕ್ತಿ ಮತ್ತು ಶರಣಾಗತಿಯೋಗಗಳ ಪ್ರಾಮುಖ್ಯತೆಯೂ ತಿಳಿಸಲ್ಪಟ್ಟಿವೆ. ಈ 32 ಶ್ಲೋಕಗಳನ್ನು ಆಧಾರವಾಗಿ ಹೊಂದಿ ಭಗವದ್ಗೀತೆಯ 18 ಅಧ್ಯಾಯಗಳನ್ನು ವ್ಯಾಸಂಗ ಮಾಡಿದರೆ ಭಗವದ್ಗೀತೆಯ ಸಂದೇಶದ ಸಾರಾರ್ಥವನ್ನು ಚೆನ್ನಾಗಿ ತಿಳಿಯಬಹುದು.

ಮುಂದೆ ಗೀತಾರ್ಥಸಂಗ್ರಹದ ಶ್ಲೋಕಗಳನ್ನು ಅರ್ಥಸಹಿತ ತಿಳಿಸಿ, ಅದನ್ನನುಸರಿಸಿ ಭಗವದ್ಗೀತೆಯ 18 ಅಧ್ಯಾಯಗಳ ಸಾರಾರ್ಥವನ್ನು ಸಂಗ್ರಹವಾಗಿ ತಿಳಿಸುವ ಪ್ರಯತ್ನ ಮಾಡಿದೆ.

# ಗೀತಾರ್ಥಸಂಗ್ರಹ ಶ್ಲೋಕ 1

**ಸ್ವಧರ್ಮಜ್ಞಾನವೈರಾಗ್ಯಸಾಧ್ಯಭಕ್ತ್ಯೇಕಗೋಚರಃ।**
**ನಾರಾಯಣಃ ಪರಂಬ್ರಹ್ಮ ಗೀತಾಶಾಸ್ತ್ರೇ ಸಮೀರಿತಃ॥**

ಈ ಮೊದಲನೆಯ ಶ್ಲೋಕದಲ್ಲಿ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಸ್ವಧರ್ಮಜ್ಞಾನವೈರಾಗ್ಯಸಾಧ್ಯಭಕ್ತ್ಯೇಕಗೋಚರಃ =**

ಸ್ವಧರ್ಮಾನುಷ್ಠಾನಾದಿ ಕರ್ಮಯೋಗ, ಆತ್ಮಧ್ಯಾನಾದಿ ಜ್ಞಾನಯೋಗ ಮತ್ತು ಭಗವದ್ವ್ಯತಿರಿಕ್ತವಾದ ವಿಷಯಗಳಲ್ಲಿ ವೈರಾಗ್ಯ ಇವುಗಳಿಂದ ಸಾಧಿಸಲ್ಪಡುವ ಭಕ್ತಿ ಒಂದಕ್ಕೇ ಗೋಚರಿಸುವವನು,

**ನಾರಾಯಣಃ ಪರಂಬ್ರಹ್ಮ ಗೀತಾಶಾಸ್ತ್ರೇ ಸಮೀರಿತಃ** - ನಾರಾಯಣನೆಂಬ ಪರಬ್ರಹ್ಮನು ಎಂದು ಗೀತಾಶಾಸ್ತ್ರದಲ್ಲಿ ಸ್ಪಷ್ಟವಾಗಿ ಬೋಧಿಸಲ್ಪಟ್ಟಿದೆ. ಅಂದರೆ ಸ್ವಧರ್ಮಾನುಷ್ಠಾನಾದಿ ಕರ್ಮಯೋಗ, ವಿಷಯವೈರಾಗ್ಯದಿಂದ ಕೂಡಿದ ಜ್ಞಾನಯೋಗ ಇವುಗಳಿಂದ ಸಾಧಿಸಲ್ಪಡುವ ಭಕ್ತಿಯೋಗಾಭ್ಯಾಸದಿಂದ ಪರಬ್ರಹ್ಮನಾದ ಶ್ರೀಮನ್ನಾರಾಯಣನನ್ನು ಹೊಂದಬಹುದು. ಕರ್ಮಯೋಗ, ಜ್ಞಾನಯೋಗ, ವಿಷಯವೈರಾಗ್ಯಾದಿಗಳಿಂದ ಭಕ್ತಿಯೋಗವು ಸಾಧಿಸಲ್ಪಡುತ್ತದೆ. ಆ ಭಕ್ತಿಯೋಗ ಒಂದೇ ಪರಬ್ರಹ್ಮನನ್ನು ಹೊಂದಲು ಮಾರ್ಗವಾಗಿದೆ ಎಂಬುದೇ ಭಗವದ್ಗೀತೆಯ 18 ಅಧ್ಯಾಯಗಳಲ್ಲಿ ಶ್ರೀಕೃಷ್ಣಪರಮಾತ್ಮನು ತಿಳಿಸಿರುವ ಸಾರವಾದ ಉಪದೇಶ.

# ಗೀತಾರ್ಥಸಂಗ್ರಹ ಶ್ಲೋಕ 2

**ಜ್ಞಾನಕರ್ಮಾತ್ಮಿಕೇ ನಿಷ್ಠೇ ಯೋಗಲಕ್ಷ್ಯೇ ಸುಸಂಸ್ಕೃತೇ।**
**ಆತ್ಮಾನುಭೂತಿಸಿದ್ಧ್ಯರ್ಥೇ ಪೂರ್ವಷಟ್ಕೇನ ಚೋದಿತೇ॥**

ಈ 2ನೆಯ ಶ್ಲೋಕದಲ್ಲಿ ಭಗವದ್ಗೀತೆಯ ಮೊದಲನೆಯ ಷಟ್ಕದ (ಅಂದರೆ 1ರಿಂದ 6ರವರಿಗಿನ ಆರು ಅಧ್ಯಾಯಗಳ) ಸಾರಾರ್ಥವು ತಿಳಿಸಲ್ಪಟ್ಟಿದೆ.

**ಆತ್ಮಾನುಭೂತಿ ಸಿದ್ಧ್ಯರ್ಥೇ ಸುಸಂಸ್ಕೃತೇಯೋಗಲಕ್ಷ್ಯೇ** = ಆತ್ಮಾನುಭವದ ಸಿದ್ಧಿಗಾಗಿ ಪರಿಶುದ್ಧವಾದ ಯೋಗಾಭ್ಯಾಸವನ್ನು ಲಕ್ಷ್ಯವಾಗಿ ಹೊಂದಿರುವ.

**ಜ್ಞಾನಕರ್ಮಾತ್ಮಿಕೇನಿಷ್ಠೇ** = ಜ್ಞಾನಯೋಗ ಕರ್ಮಯೋಗ ಸಾಧನೆಗಳು

**ಪೂರ್ವಷಟ್ಕೇನ ಚೋದಿತೇ** = ಭಗವದ್ಗೀತೆಯ ಮಾದಲನೆಯ ಆರು ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ.

ಜ್ಞಾನಯೋಗ, ಕರ್ಮಯೋಗ ಇವೆರಡೂ ಸ್ಥಿತಪ್ರಜ್ಞತೆಗೂ, ತನ್ಮೂಲಕ ಆತ್ಮಸಾಕ್ಷಾತ್ಕಾರಕ್ಕೂ ಸಾಧನವಾಗಿವೆ. ಅಂದರೆ ಕರ್ಮ, ಜ್ಞಾನ, ವೈರಾಗ್ಯಾದಿ ಅಭ್ಯಾಸಗಳಿಂದ ಸ್ಥಿತಪ್ರಜ್ಞತೆ ಉಂಟಾಗಿ ಅದರಿಂದ ಆತ್ಮಸಾಕ್ಷಾತ್ಕಾರವು ಸಾಧಿಸಲ್ಪಡುತ್ತದೆ ಎಂಬ ವಿಚಾರವು ಗೀತೆಯ ಮೊದಲನೆಯ ಆರು ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿವೆ.

# ಗೀತಾರ್ಥಸಂಗ್ರಹ ಶ್ಲೋಕ 3

ಮಧ್ಯಮೇ ಭಗವತತ್ತ್ವಯಾಥಾತ್ಮ್ಯಾವಾಪ್ತಿಸಿದ್ಧಯೇ ।
ಜ್ಞಾನಕರ್ಮಾಭಿನಿರ್ವರ್ತ್ಯೋ ಭಕ್ತಿಯೋಗಃ ಪ್ರಕೀರ್ತಿತಃ ॥

ಈ ಮೂರನೆಯ ಶ್ಲೋಕದಲ್ಲಿ ಗೀತೆಯ ಮಧ್ಯಮಷಟ್ಕದ ಅಂದರೆ 7 ರಿಂದ 12 ರವರೆಗಿನ ಆರು ಅಧ್ಯಾಯಗಳ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಭಗವತ್ತತ್ತ್ವಯಾಥಾತ್ಮ್ಯಾವಾಪ್ತಿಸಿದ್ಧಯೇ** - ಭಗವಂತನ ಯಥಾರ್ಥಸ್ವರೂಪವನ್ನು ಸಾಕ್ಷಾತ್ಕರಿಸಿ ಭಗವದನುಭವಪಡೆಯುವುದಕ್ಕಾಗಿ

**ಜ್ಞಾನಕರ್ಮಾಭಿನಿರ್ವರ್ತ್ಯೋಭಕ್ತಿಯೋಗಃ ಮಧ್ಯಮೇ ಪ್ರಕೀರ್ತಿತಃ** - ಜ್ಞಾನಯೋಗ ಕರ್ಮಯೋಗಗಳಿಂದ ಸಾಧಿಸಲ್ಪಡುವ ಭಕ್ತಿಯೋಗವು ಭಗವದ್ಗೀತೆಯ ಮಧ್ಯಮಷಟ್ಕದಲ್ಲಿ (ಅಂದರೆ 7 ರಿಂದ 12 ರವರೆಗಿನ ಆರು ಅಧ್ಯಾಯಗಳಲ್ಲಿ) ಹೇಳಲ್ಪಟ್ಟಿದೆ.

# ಗೀತಾರ್ಥಸಂಗ್ರಹ ಶ್ಲೋಕ 4

**ಪ್ರಧಾನಪುರುಷವ್ಯಕ್ತಸರ್ವೇಶ್ವರವಿವೇಚನಂ ।**

**ಕರ್ಮಧೀರ್ಭಕ್ತಿರಿತ್ಯಾದಿಃ ಪೂರ್ವಶೇಷೋಽಂತಿಮೋದಿತಃ ।**

ಈ ನಾಲ್ಕನೆಯ ಶ್ಲೋಕದಲ್ಲಿ ಭಗವದ್ಗೀತೆಯ ಕೊನೆಯ ಷಟ್ಕದ (ಅಂದರೆ 13ರಿಂದ 18 ರವರೆಗಿನ ಆರು ಅಧ್ಯಾಯಗಳ) ಸಾರಾರ್ಥವು ತಿಳಿಸಲ್ಪಟ್ಟಿದೆ.

**ಪ್ರಧಾನಪುರುಷವ್ಯಕ್ತಸರ್ವೇಶ್ವರವಿವೇಚನಂ** - ಜೀವಾತ್ಮ, ಜಗತ್ತು ಸರ್ವೇಶ್ವರನಾದ ಪರಮಾತ್ಮ (ಚಿತ್ತು ಅಚಿತ್ತು ಈಶ್ವರ) ಇವರುಗಳ ಸ್ವರೂಪವೂ,

**ಕರ್ಮಧೀಭಕ್ತಿರಿತ್ಯಾದಿಃ ಪೂರ್ವಶೇಷೋಽನ್ತಿಮೋದಿತಃ** - ಕರ್ಮಯೋಗ ಜ್ಞಾನಯೋಗ, ಭಕ್ತಿಯೋಗ ಮೊದಲಾದವುಗಳ ವಿಚಾರವೂ ಹಿಂದಿನ ಅಧ್ಯಾಯಗಳಲ್ಲಿ ಹೇಳಲ್ಪಡದ ಇತರ ವಿಷಯಗಳೊಂದಿಗೆ ಮತ್ತೆ ವಿವರವಾಗಿ ಭಗವದ್ಗೀತೆಯ ಕೊನೆಯ ಷಟ್ಕದಲ್ಲಿ (ಅಂದರೆ 13 ರಿಂದ 18 ರವರೆಗಿನ ಆರು ಅಧ್ಯಾಯಗಳಲ್ಲಿ ತಿಳಿಸಲ್ಪಟ್ಟಿದೆ.)

ಮುಂದೆ ಗೀತಾರ್ಥಸಂಗ್ರಹದ 5 ರಿಂದ 22ರವರೆಗಿನ 18 ಶ್ಲೋಕಗಳಲ್ಲಿ ಒಂದು ಅಧ್ಯಾಯಕ್ಕೆ ಒಂದು ಶ್ಲೋಕದಂತೆ ಭಗವದ್ಗೀತೆಯ 18 ಅಧ್ಯಾಯಗಳ ಸಾರಾರ್ಥವೂ, ಅನಂತರ 23 ರಿಂದ 32ರವರೆಗಿನ 10 ಶ್ಲೋಕಗಳಲ್ಲಿ ಸಮಗ್ರ ಭಗವದ್ಗೀತೆಯ ಒಟ್ಟು ತಾತ್ಪರ್ಯಾರ್ಥವೂ ಸಂಗ್ರಹವಾಗಿ ತಿಳಿಸಲ್ಪಡುತ್ತದೆ.

# ಭಗವದ್ಗೀತೆಯ ಸಾರಾರ್ಥ

## ಭಗವದ್ಗೀತೆ ಅಧ್ಯಾಯ 1

### ಅರ್ಜುನ ವಿಷಾದಯೋಗ

### ಗೀತಾರ್ಥಸಂಗ್ರಹ ಶ್ಲೋಕ ೫

ಅಸ್ಥಾನಸ್ನೇಹಕಾರುಣ್ಯ
ಧರ್ಮಾಧರ್ಮಧಿಯಾಕುಲಮ್
ಪಾರ್ಥಂ ಪ್ರಪನ್ನಮುದ್ದಿಶ್ಯ
ಶಾಸ್ತ್ರಾವತರಣಂ ಕೃತಮ್ ॥

ಗೀತಾರ್ಥಸಂಗ್ರಹದ ಈ ೫ನೆಯ ಶ್ಲೋಕದಲ್ಲಿ ಭಗವದ್ಗೀತೆಯ ಒಂದನೆಯ ಅಧ್ಯಾಯದ, ಮತ್ತು ಎರಡನೆಯ ಅಧ್ಯಾಯದ ಮೊದಲ ೧೦ ಶ್ಲೋಕಗಳ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಅಸ್ಥಾನ ಸ್ನೇಹಕಾರುಣ್ಯ** - ಕರುಣೆಗೆ ಯೋಗ್ಯಸ್ಥಾನವಲ್ಲದ ರಣರಂಗದಲ್ಲಿ, ಸ್ನೇಹಕ್ಕೂ ಕರುಣೆಗೂ ಯೋಗ್ಯರಲ್ಲದ ಕೌರವರ ವಿಷಯದಲ್ಲಿ ಪ್ರೀತಿ ಮತ್ತು ಕರುಣೆ ಹೊಂದಿ,

**ಧರ್ಮಾಧರ್ಮಧಿಯಾಕುಲಂ** - ಕ್ಷತ್ರಿಯನಾದ ತಾನು ಅವಶ್ಯವಾಗಿ ಮಾಡಬೇಕಾದ ಧರ್ಮಯುದ್ಧವನ್ನು ಅಧರ್ಮವಾಗಿ ಭಾವಿಸಿ ವ್ಯಾಕುಲಗೊಂಡ, **ಪಾರ್ಥಂ ಪ್ರಪನ್ನಂ ಉದ್ದಿಶ್ಯ** - ತನ್ನಲ್ಲಿ ಶರಣಾದ ಅರ್ಜುನನನ್ನು ಕುರಿತು

# ಭಗವದ್ಗೀತೆಯ ಸಾರಾರ್ಥ

## ಭಗವದ್ಗೀತೆ ಅಧ್ಯಾಯ 1

### ಅರ್ಜುನ ವಿಷಾದಯೋಗ

### ಗೀತಾರ್ಥಸಂಗ್ರಹ ಶ್ಲೋಕ ೫

ಅಸ್ಥಾನಸ್ನೇಹಕಾರುಣ್ಯ
ಧರ್ಮಾಧರ್ಮಧಿಯಾಕುಲಮ್
ಪಾರ್ಥಂ ಪ್ರಪನ್ನಮುದ್ದಿಶ್ಯ
ಶಾಸ್ತ್ರಾವತರಣಂ ಕೃತಮ್ ॥

ಗೀತಾರ್ಥಸಂಗ್ರಹದ ಈ ೫ನೆಯ ಶ್ಲೋಕದಲ್ಲಿ ಭಗವದ್ಗೀತೆಯ ಒಂದನೆಯ ಅಧ್ಯಾಯದ, ಮತ್ತು ಎರಡನೆಯ ಅಧ್ಯಾಯದ ಮೊದಲ ೧೦ ಶ್ಲೋಕಗಳ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಅಸ್ಥಾನ ಸ್ನೇಹಕಾರುಣ್ಯ** - ಕರುಣೆಗೆ ಯೋಗ್ಯಸ್ಥಾನವಲ್ಲದ ರಣರಂಗದಲ್ಲಿ, ಸ್ನೇಹಕ್ಕೂ ಕರುಣೆಗೂ ಯೋಗ್ಯರಲ್ಲದ ಕೌರವರ ವಿಷಯದಲ್ಲಿ ಪ್ರೀತಿ ಮತ್ತು ಕರುಣೆ ಹೊಂದಿ,

**ಧರ್ಮಾಧರ್ಮಧಿಯಾಕುಲಂ** - ಕ್ಷತ್ರಿಯನಾದ ತಾನು ಅವಶ್ಯವಾಗಿ ಮಾಡಬೇಕಾದ ಧರ್ಮಯುದ್ಧವನ್ನು ಅಧರ್ಮವಾಗಿ ಭಾವಿಸಿ ವ್ಯಾಕುಲಗೊಂಡ, **ಪಾರ್ಥಂಪ್ರಪನ್ನಂ ಉದ್ದಿಶ್ಯ** - ತನ್ನಲ್ಲಿ ಶರಣಾದ ಅರ್ಜುನನನ್ನು ಕುರಿತು

ಶಾಸ್ತ್ರಾವತರಣಂಕೃತಂ - ಭಗವದ್ಗೀತೆ ಎಂಬ ಅಧ್ಯಾತ್ಮಶಾಸ್ತ್ರದ ಉಪದೇಶವು ಪ್ರಾರಂಭಿಸಲ್ಪಟ್ಟಿತು.

ಭಗವದ್ಗೀತೆಯ ಈ ಮೊದಲನೆಯ ಅಧ್ಯಾಯದಲ್ಲಿ ಭಗವದ್ಗೀತಾಶಾಸ್ತ್ರವು ಯಾವಾಗ, ಎಲ್ಲಿ, ಏತಕ್ಕಾಗಿ ಮತ್ತು ಹೇಗೆ ಅವತರಿಸಿತು ಎಂಬುದು ತಿಳಿಸಲ್ಪಟ್ಟಿದೆ. ವ್ಯಾಸಮಹರ್ಷಿಗಳು ರಚಿಸಿರುವ ಮಹಾಭಾರತದಲ್ಲಿ ಭಗವದ್ಗೀತೆಯು ಉಪದೇಶಿಸಲ್ಪಟ್ಟಿದೆ. ಅಣ್ಣತಮ್ಮಂದಿರ ಮಕ್ಕಳಾದ ಕೌರವರಿಗೂ ಪಾಂಡವರಿಗೂ ಕುರುಕ್ಷೇತ್ರದಲ್ಲಿಯುದ್ಧವು ನಡೆಯುತ್ತದೆ. ಅಂಧನಾದ ಧೃತರಾಷ್ಟ್ರನಿಗೆ, ದಿವ್ಯಚಕ್ಷುಸ್ಸನ್ನು ಪಡೆದ ಸಂಜಯನು ಯುದ್ಧದಲ್ಲಿ ನಡೆದ ವಿಷಯಗಳನ್ನೆಲ್ಲಾ ವಿವರಿಸಿ ತಿಳಿಸುತ್ತಾನೆ. ಇಲ್ಲಿಂದ ಶ್ರೀಮದ್ಭಗವದ್ಗೀತಾಶಾಸ್ತ್ರವು ಪ್ರಾರಂಭವಾಗುತ್ತದೆ.

ರಣರಂಗದಲ್ಲಿ ಎರಡು ಕಡೆಯವರೂ ತಮ್ಮ ತಮ್ಮ ದಿವ್ಯಶಂಖಗಳನ್ನು ಊದಿ, ಸಿಂಹನಾದ ಮಾಡಿ ಯುದ್ಧ ಮಾಡಲು ಸಿದ್ಧರಾಗಿ ನಿಂತಿದ್ದಾರೆ. ಇನ್ನೇನು, ಯುದ್ಧವು ಪ್ರಾರಂಭವಾಗಬೇಕು. ಆಗ ಅರ್ಜುನನ ಪ್ರಾರ್ಥನೆಯಂತೆ ಅವನ ಸಾರಥಿಯಾಗಿದ್ದ ಶ್ರೀಕೃಷ್ಣಪರಮಾತ್ಮನು ಎರಡು ಸೈನ್ಯಗಳ ನಡುವೆ ಭೀಷ್ಮ ದ್ರೋಣರ ಎದುರಿನಲ್ಲಿ ತನ್ನ ರಥವನ್ನು ತಂದು ನಿಲ್ಲಿಸುತ್ತಾನೆ. ಆಗ ಅರ್ಜುನನು ತನ್ನ ಎದುರಿನಲ್ಲಿ ಯುದ್ಧ ಮಾಡಲು ಸಿದ್ಧರಾಗಿ ಬಂದು ನಿಂತಿದ್ದ ತನ್ನ ಪಿತಾಮಹ ಭೀಷ್ಮರನ್ನೂ, ಆಚಾರ್ಯ ದ್ರೋಣರನ್ನೂ, ಕೃಪಾಚಾರ್ಯರನ್ನೂ, ಅಣ್ಣ ತಮ್ಮಂದಿರು, ಬಂಧುಗಳು ಮಿತ್ರರು ಎಲ್ಲರನ್ನೂ ನೋಡುತ್ತಾನೆ. ಅವರನ್ನೆಲ್ಲಾ ನೋಡುತ್ತಲೇ ಗುರುಹಿರಿಯರೂ ಬಂಧುಬಾಂಧವರೂ ಆದ ಅವರೆಲ್ಲರೊಂದಿಗೆ ಯುದ್ಧಮಾಡಲು ಇಷ್ಟಪಡದೆ ಮನೋವ್ಯಾಕುಲ ಹೊಂದುತ್ತಾನೆ.

ಅಷ್ಟು ಮಾತ್ರವಲ್ಲದೆ ಈ ಯುದ್ಧದಿಂದ ಕುಲಕ್ಷಯವೂ, ವರ್ಣಸಂಕರವೂ ಉಂಟಾಗಿ, ಕುಲಧರ್ಮವು ನಾಶವಾಗಿ, ಅಧರ್ಮವು ಪ್ರಬಲವಾಗಿ, ವರ್ಣಸಂಕರ, ದುರಾಚಾರಾದಿಗಳು ಉಂಟಾಗಿ ಕುಲಧರ್ಮದ ಪವಿತ್ರತೆಯೇ ನಾಶವಾಗುತ್ತದೆ ಎಂದು ಅರ್ಜುನನು ಭಾವಿಸುತ್ತಾನೆ. ಇಂತಹ ಪಾಪಕಾರ್ಯವನ್ನು ತಾನು ಮಾಡಲಾರೆನೆಂದು ಹೇಳುತ್ತಾ ಧನುರ್ಬಾಣಗಳನ್ನೆಲ್ಲಾ ಕೆಳಗೆ ಬಿಸುಟು, ವ್ಯಸನದಿಂದ ಕೂಡಿದ ಮನಸ್ಸುಳ್ಳವನಾಗಿ "ಕೃಷ್ಣ ನಾನು ಯುದ್ಧ ಮಾಡುವುದಿಲ್ಲ " ಎಂದು ಹೇಳಿ ರಣರಂಗದಲ್ಲಿ ರಥದಲ್ಲಿ ಸುಮ್ಮನೆ ಕುಳಿತುಬಿಡುತ್ತಾನೆ.

★ ★ ★ ★

# ಭಗವದ್ಗೀತೆ ಅಧ್ಯಾಯ 2

## 'ಸಾಂಖ್ಯಯೋಗ

### ವ್ಯಾಕುಲಚಿತ್ತನಾದ ಅರ್ಜುನನು ಪರಮಾತ್ಮನಲ್ಲಿ ಶರಣಾಗತಿ ಮಾಡುತ್ತಾನೆ. (ಶ್ಲೋಕ ೧-೧೦)

ಮೋಹಪರವಶನಾಗಿ ಧರ್ಮಯುದ್ಧವನ್ನು ಅಧರ್ಮವೆಂದು ಭಾವಿಸಿ ರಣರಂಗದಲ್ಲಿ ಧನುರ್ಬಾಣಗಳನ್ನು ಕೆಳಗೆ ಬಿಸುಟು ದುಃಖಿಸುತ್ತಾ ಕುಳಿತ ಅರ್ಜುನನನ್ನು ನೋಡಿ ಪರಮಾತ್ಮನು ಅವನಿಗೆ ಧೈರ್ಯ ಹೇಳುತ್ತಾನೆ. ಅಪಕೀರ್ತಿ ತರುವಂಥಹ, ಇಹಪರಗಳೆರಡರಲ್ಲೂ ಸದ್ಗತಿ ಉಂಟಾಗದಂತೆ ಮಾಡುವ, ಇಂತಹ ಮನೋವ್ಯಾಕುಲವನ್ನು ಹೊಂದಿ, ಯುದ್ಧವು ಪ್ರಾರಂಭವಾಗುವ ವಿಷಮ ಗಳಿಗೆಯಲ್ಲಿ ಎದೆಗುಂದುವುದು ಅರ್ಜುನನಂತಹ ವೀರಕ್ಷತ್ರಿಯನಿಗೆ ಯೋಗ್ಯವಲ್ಲವೆಂದು ಹೇಳಿ ಈ ಮನೋದುರ್ಬಲತೆಯಿಂದ ಉಂಟಾದ ಈ ಶೋಕವನ್ನು ಬಿಟ್ಟು ಯುದ್ಧಮಾಡಲು ಸಿದ್ಧನಾಗುವಂತೆ ಅವನನ್ನು ಪ್ರೇರೇಪಿಸುತ್ತಾನೆ. ಆಗ ಅರ್ಜುನನು " ನನ್ನ ಮನಸ್ಸು ಸ್ನೇಹ, ದಯೆ, ಧರ್ಮಾಧರ್ಮಗಳ ಭಯ ಇವುಗಳಿಂದ ಅತ್ಯಂತ ವ್ಯಾಕುಲಗೊಂಡಿದೆ. ನನಗೆ ಶ್ರೇಯಸ್ಸು ಉಂಟಾಗುವ ದಾರಿಯನ್ನು ನೀನೇ ನಿಶ್ಚಯಿಸಿ ನನಗೆ ಉಪದೇಶ ಮಾಡುವಂತೆ ಪ್ರಾರ್ಥಿಸುತ್ತೇನೆ. ನಾನು ನಿನಗೆ ಶಿಷ್ಯನಾಗಿ ನಿನ್ನಲ್ಲಿ ಶರಣಾಗಿದ್ದೇನೆ.

ನನ್ನನ್ನು ಕಾಪಾಡು'' ಎಂದು ಪ್ರಾರ್ಥಿಸುತ್ತಾ ಕೃಷ್ಣಪರಮಾತ್ಮನಲ್ಲಿ ಶರಣಾಗುತ್ತಾನೆ. (ಅಧ್ಯಾಯ ೨ - ಶ್ಲೋಕ ೭)

ಹೀಗೆ ಪ್ರೀತಿಗೂ ಕರುಣೆಗೂ ಯೋಗ್ಯರಲ್ಲದವರನ್ನು ಕುರಿತು ಪ್ರೀತಿ ಮತ್ತು ಕರುಣೆ ಹೊಂದಿದವನಾಗಿ, ಕ್ಷತ್ರಿಯನಾದ ತಾನು ಕರ್ತವ್ಯಕರ್ಮವಾಗಿ ಮಾಡಬೇಕಾಗಿರುವ ಧರ್ಮಯುದ್ಧವನ್ನು ಅಧರ್ಮವೆಂದು ಭಾವಿಸಿ, ಯುದ್ಧರಂಗದಲ್ಲಿ ವ್ಯಾಕುಲಚಿತ್ತನಾಗಿ ಪರಮಾತ್ಮನಲ್ಲಿ ಶರಣಾದ ಅರ್ಜುನನಿಗೆ ಶ್ರೀಕೃಷ್ಣಪರಮಾತ್ಮನು ಈ ಗೀತಾಶಾಸ್ತ್ರವನ್ನು ಉಪದೇಶ ಮಾಡುತ್ತಾನೆ.

ಗೀತೋಪದೇಶದ ಪ್ರಾರಂಭ

ಭಗವದ್ಗೀತೆಯ ೨ನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕದಿಂದ ಶ್ರೀಕೃಷ್ಣಪರಮಾತ್ಮನ ಗೀತೋಪದೇಶವು ಪ್ರಾರಂಭವಾಗುತ್ತದೆ.

ಗೀತಾರ್ಥ ಸಂಗ್ರಹ ಶ್ಲೋಕ 6

ನಿತ್ಯಾತ್ಮಾಸಂಗಕರ್ಮೇಹ
ಗೋಚರಾ ಸಾಂಖ್ಯಯೋಗಧೀಃ ।
ದ್ವಿತೀಯೇ ಸ್ಥಿತಧೀರ್ಲಕ್ಷಾ
ಪ್ರೋಕ್ತಾ ತನ್ಮೋಹಶಾಂತಯೇ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ ಎರಡನೆಯ ಅಧ್ಯಾಯದ ಉಪದೇಶದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ನಿತ್ಯಾತ್ಮಗೋಚರಾ ಸಾಂಖ್ಯ ಧೀಃ** - ಆತ್ಮನು ನಿತ್ಯನು ಎಂಬ ಜ್ಞಾನ ವಿಷಯವಾದ ಸಾಂಖ್ಯ ಬುದ್ಧಿಯೂ, **ಅಸಂಗ ಕರ್ಮೇಹಗೋಚರಾ ಯೋಗಧೀಃ** ಫಲಸಂಗರಹಿತವಾಗಿ ಮಾಡುವ ಕರ್ಮಯೋಗ ವಿಷಯವಾದ ಜ್ಞಾನವೂ,

**ಸ್ಥಿತೇಧೀರ್ಲಕ್ಷಾ**-ಇವೆರಡರಿಂದ ಸಾಧಿಸಲ್ಪಡುವ ಸ್ಥಿತಪ್ರಜ್ಞ ಎಂಬ ಜ್ಞಾನಾಭ್ಯಾಸವೂ, **ದ್ವಿತೀಯೇ ತನ್ಮೋಹಶಾಂತಯೇ ಪ್ರೋಕ್ತಾ** - ಅರ್ಜುನನ ಮೋಹವನ್ನು ಹೋಗಲಾಡಿಸುವದಕ್ಕಾಗಿ ಗೀತೆಯ ೨ನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಭಗವದ್ಗೀತೆಯ ಈ ಎರಡನೇ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

I ಆತ್ಮನು ನಿತ್ಯನು, ದೇಹವು ಅನಿತ್ಯವಾದುದು ಎಂಬ ತತ್ತ್ವಜ್ಞಾನವನ್ನು ಪರಮಾತ್ಮನು ಮೊದಲು ಉಪದೇಶಮಾಡಿದ್ದಾನೆ. (ಶ್ಲೋಕಗಳು ೧೧-೩೦)

ಗುರುಹಿರಿಯರನ್ನೂ ಬಂಧುಗಳನ್ನೂ ಯುದ್ಧರಂಗದಲ್ಲಿ ಎದುರಿನಲ್ಲಿ ನೋಡಿ ಮೋಹಪರವಶನಾದ ಅರ್ಜುನನ ಮೋಹವನ್ನು ನಾಶಗೊಳಿಸಲು ಪರಮಾತ್ಮನು ಅವನಿಗೆ ಮೊದಲು ಆತ್ಮತತ್ತ್ವವಿಚಾರವಾದ ಸಾಂಖ್ಯಬುದ್ಧಿಯನ್ನು ತಿಳಿಸುತ್ತಾನೆ.

## ಆತ್ಮ ಸ್ವರೂಪ

ಆತ್ಮನು ನಿತ್ಯನಾದವನು. ದೇಹವು ಅನಿತ್ಯವಾದುದು. ನಿತ್ಯನಾದ ಆತ್ಮನಿಗೆ ನಶ್ವರವಾದ ಶರೀರ ಸಂಬಂಧದಿಂದ ಬಾಲ್ಯ, ಯೌವನ, ಮುಪ್ಪು ಉಂಟಾಗುವಂತೆ ದೇಹಾಂತರ ಪ್ರಾಪ್ತಿಯೂ ಉಂಟಾಗುತ್ತದೆ. ಅದಕ್ಕಾಗಿ ಶೋಕಿಸಬೇಕಾಗಿಲ್ಲ. (ಶ್ಲೋಕ ೧೩. ಅಧ್ಯಾಯ ೨) ಜೀವಾತ್ಮನಿಗೆ ಪ್ರಕೃತಿ ಸಂಬಂಧದಿಂದ ಶೀತೋಷ್ಣ ಸುಖದುಃಖಗಳ ಅನುಭವ ಉಂಟಾಗುತ್ತದೆ. ಅವುಗಳು ಆಗಾಗ ಬಂದು ಬಂದು ಹೋಗುವಂತಹವುಗಳು ಆಗಿರುವುದರಿಂದ ಅವನ್ನು ಧೈರ್ಯವಾಗಿ ಸಹಿಸಿಕೊಳ್ಳಬೇಕೆಂದು ಪರಮಾತ್ಮನು ಉಪದೇಶಿಸುತ್ತಾನೆ. ನಿತ್ಯನಾದ ಆತ್ಮನಿಗೆ ನಾಶವಿಲ್ಲ, ಆತ್ಮನು ಜನ್ಮರಹಿತನಾಗಿ, ನಿತ್ಯನಾಗಿ, ಶಾಶ್ವತನಾಗಿ ಇದ್ದಾನೆ. ಅವನು ಜೀರ್ಣವಾದ ಹಳೆಯ ಶರೀರವನ್ನು ತ್ಯಜಿಸಿ ಹೊಸ ಶರೀರವನ್ನು ಧರಿಸುತ್ತಾನೆ. ಅವನನ್ನು ಯಾರೂ, ಯಾವ ಅಸ್ತ್ರವೂ ಕೊಲ್ಲಲಾರದು; ಕತ್ತಿಯು ಕತ್ತರಿಸಲಾರದು; ಬೆಂಕಿಯು ಸುಡಲಾರದು; ನೀರು ತೋಯಿಸಲಾರದು; ಅವನು ಇಂದ್ರಿಯಗಳಿಗೂ, ಮನಸ್ಸಿಗೂ ನಿಲುಕದವನಾಗಿ, ಅವ್ಯಕ್ತನೂ, ಅಚಿಂತ್ಯನೂ, ವಿಕಾರರಹಿತನೂ ಆಗಿದ್ದಾನೆ. ಆದ್ದರಿಂದ ಎಂದಿದ್ದರೂ ಸಾಯುವ ದೇಹವನ್ನು ಕುರಿತಾಗಲೀ, ಎಂದೆಂದೂ ನಿತ್ಯನಾಗಿ ಶಾಶ್ವತನಾಗಿರುವ ಜೀವಾತ್ಮನನ್ನು ಕುರಿತಾಗಲೀ ದುಃಖಿಸುವುದು ಉಚಿತವಲ್ಲವೆಂದು ಕೃಷ್ಣನು ಉಪದೇಶ ಮಾಡುತ್ತಾನೆ.

II ಫಲಾಸಕ್ತಿಯಿಲ್ಲದೆ ಕರ್ಮ ಮಾಡುವ ಕರ್ಮಯೋಗವನ್ನು ಪರಮಾತ್ಮನು ಉಪದೇಶ ಮಾಡುತ್ತಾನೆ. (ಶ್ಲೋಕ ೩೧ ರಿಂದ ೫೩.)

ಎಲ್ಲರೂ ಅವರವರ ಸ್ವಧರ್ಮವನ್ನು ಕರ್ಮಯೋಗವಾಗಿ ಮಾಡಬೇಕು. ಧರ್ಮಯುದ್ಧವನ್ನು ಮಾಡುವುದು ಕ್ಷತ್ರಿಯನಾದ ಅರ್ಜುನನ ಸ್ವಧರ್ಮವಾಗಿರುವುದರಿಂದ ಅದನ್ನು ಅವನು ಮಾಡದೇ ಇದ್ದರೆ ಅವನು ಧರ್ಮವನ್ನೂ ಕೀರ್ತಿಯನ್ನೂ ಕಳೆದುಕೊಂಡು ಪಾಪವನ್ನು

ಹೊಂದುವನು. ಈ ಧರ್ಮಯುದ್ಧದಲ್ಲಿ ಸತ್ತರೆ ಅವನು ಕೀರ್ತಿಯನ್ನೂ ರಾಜ್ಯದ ಸುಖವನ್ನೂ ಪಡೆಯುವನು. ಆದ್ದರಿಂದ ಯುದ್ಧವನ್ನು ಮಾಡಲು ಮನಸ್ಸುಮಾಡಿ ಎದ್ದೇಳುವಂತೆ ಅರ್ಜುನನನ್ನು ಪರಮಾತ್ಮನು ಪ್ರೇರೇಪಿಸುತ್ತಾನೆ.

''ಸುಖದುಃಖಗಳನ್ನೂ, ಲಾಭಾಲಾಭಗಳನ್ನೂ, ಜಯಾಪಜಯಗಳನ್ನೂ ಸಮನಾಗಿ ಭಾವಿಸಿ, ಕೇವಲ ಕರ್ತವ್ಯಬುದ್ಧಿಯಿಂದ ಯುದ್ಧವನ್ನು ಮಾಡು. ಆಗ ನೀನು ಪಾಪವನ್ನು ಹೊಂದುವುದಿಲ್ಲ'' ಎಂದು ಪರಮಾತ್ಮನು (ಈ ಅಧ್ಯಾಯದ ೩೮ನೇ ಶ್ಲೋಕದಲ್ಲಿ) ಉಪದೇಶ ಮಾಡುತ್ತಾನೆ.

ಕರ್ಮಯೋಗದಲ್ಲಿ ನಿಶ್ಚಯಾತ್ಮಕಬುದ್ಧಿಯು ಮೋಕ್ಷ ಒಂದನ್ನೇ ಗುರಿಯಾಗಿ ಹೊಂದಿರುತ್ತದೆ. ಭೋಗೈಶ್ವರ್ಯಸ್ವರ್ಗಾದಿ ಫಲಾಸಕ್ತಿ ಹೊಂದಿ ಕರ್ಮಮಾಡುವ ಕಾಮ್ಯಕರ್ಮಿಗಳ ಬುದ್ಧಿಯು ನಾನಾ ಶಾಖೆಗಳುಳ್ಳದ್ದಾಗಿ ಅನಂತವಾಗಿ ಇರುತ್ತದೆ. ಆದ್ದರಿಂದ ಅರ್ಜುನನು ತನಗೆ ಸ್ವಧರ್ಮವಾದ ಈ ಧರ್ಮಯುದ್ಧವನ್ನು ಮಾಡಬೇಕೆಂಬ ನಿಶ್ಚಯಾತ್ಮಕಬುದ್ಧಿಯಿಂದ ಕೂಡಿದವನಾದರೆ ಅವನ ಬುದ್ಧಿಯು ಇತರ ಯಾವ ಭೋಗೈಶ್ವರ್ಯಗಳನ್ನು ಪಡೆಯಬೇಕೆಂಬ ಆಸೆಯನ್ನು ಹೊಂದುವುದಿಲ್ಲ. ಈ ರೀತಿ ಕರ್ಮಯೋಗವಾಗಿ ಯುದ್ಧ ಮಾಡುವಂತೆ ಪರಮಾತ್ಮನು ಉಪದೇಶ ಮಾಡಿದ್ದಾನೆ.

ಶ್ರೀಕೃಷ್ಣಪರಮಾತ್ಮನು ಕರ್ಮಯೋಗದ ಅತಿ ಮುಖ್ಯವಾದ ಅಭ್ಯಾಸವನ್ನು ಇಲ್ಲಿ (೨ನೇ ಅಧ್ಯಾಯದ ೪೭ ಶ್ಲೋಕದಲ್ಲಿ) ತಿಳಿಸಿದ್ದಾನೆ - **''ಅರ್ಜುನ ! ನಿನಗೆ ಕರ್ಮ ಮಾಡಲು ಅಧಿಕಾರವಿದೆ. ಆದರೆ ಅದರ ಫಲದಲ್ಲಿ ಎಂದಿಗೂ ನಿನಗೆ ಅಧಿಕಾರವಿಲ್ಲ. ಕರ್ಮಕ್ಕೂ ಅದರ ಫಲಕ್ಕೂ ನೀನೇ ಕಾರಣನೆಂದು ತಿಳಿಯಬೇಡ. ಆದರೆ ಕರ್ಮಮಾಡದೆ ಇರಬೇಡ''** - ಅಂದರೆ ಕರ್ಮವನ್ನು ಮಾಡಲೇಬೇಕು. ಆದರೆ ಅದನ್ನು ಮಾಡುವಾಗ ಕರ್ಮದ ಕರ್ತೃ ತಾನಲ್ಲ ಎಂಬ ಅಕರ್ತೃತ್ವಾನುಸಂಧಾನವೂ, ಕರ್ಮದ ಫಲವು ತನ್ನದಲ್ಲ ಎಂಬ ಫಲಾಭಿಸಂಧಿರಹಿತತ್ವವೂ ಇರಬೇಕು ಎಂಬುದೇ ಕರ್ಮಯೋಗದ ಉಪದೇಶ. ಕರ್ಮವೂ, ಅದರ ಫಲವೂ ತನ್ನದು ಎಂಬ ಅಭಿಮಾನವನ್ನು ಬಿಟ್ಟು, ಕರ್ಮಕ್ಕೆ ಫಲವು ಸಿದ್ಧಿಸಲಿ, ಸಿದ್ಧಿಸದೇ ಇರಲಿ ಎರಡನ್ನೂ

ಸಮನಾಗಿ ಭಾವಿಸಿ, ಚಿತ್ತಸ್ಥೈರ್ಯದಿಂದ ನಿಶ್ಯಸ್ವಾರ್ಥಿ ಕರ್ತವ್ಯ ಕರ್ಮಗಳನ್ನು ಮಾಡುವದೇ ಕರ್ಮಯೋಗವು. ಫಲಾಸಕ್ತಿಯಿಂದ ಮಾಡುವ ಕರ್ಮವು ನಿಕೃಷ್ಟವಾದುದು. ಆದ್ದರಿಂದ ಆತ್ಮಸ್ವರೂಪದ್ಧ್ಯಾನಾನುಸಂಧಾನದೊಂದಿಗೆ, ಸಿದ್ಧಿ ಅಸಿದ್ಧಿಗಳಲ್ಲಿ ಸಮತ್ವ ಭಾವನೆಹೊಂದಿ ಕರ್ಮವನ್ನು ಮಾಡುವ ಬುದ್ಧಿಯೋಗವನ್ನು ಆಶ್ರಯಿಸಬೇಕು. ಈ ಸಮತ್ವಭಾವನೆ ಪಡೆಯುವುದು ಕಷ್ಟವಾದರೂ ಸ್ಥಿರವಾಗಿ ಅಭ್ಯಾಸ ಮಾಡುತ್ತಿದ್ದರೆ ಎಲ್ಲದರಲ್ಲೂ ವಿರಕ್ತಿ ಉಂಟಾಗುತ್ತದೆ. ಕರ್ಮಯೋಗದ ಆಚರಣೆಯಿಂದ ಯಾವಾಗ ಮನಸ್ಸು ಚಂಚಲವಾಗದೇ ಸ್ಥಿರವಾಗಿ ನಿಲ್ಲುವುದೋ ಆಗ ಸ್ಥಿತಪ್ರಜ್ಞ ಎಂಬ ಜ್ಞಾನನಿಷ್ಠೆಯು ಉಂಟಾಗುತ್ತದೆ ಮತ್ತು ಅದರಿಂದ ಆತ್ಮಸಾಕ್ಷಾತ್ಕಾರವು ಸಾಧಿಸಲ್ಪಡುತ್ತದೆ.

## III ಸ್ಥಿತಪ್ರಜ್ಞನ ವಿಷಯವನ್ನು ಪರಮಾತ್ಮನು ತಿಳಿಸುತ್ತಾನೆ (ಶ್ಲೋಕಗಳು ೫೪-೭೨)

ಮನಸ್ಸಿನಲ್ಲಿ ಉಂಟಾಗುವ ಸಮಸ್ತ ಕಾಮಗಳನ್ನೂ ಸಂಪೂರ್ಣವಾಗಿ ತ್ಯಜಿಸಿ, ಆತ್ಮ ಸ್ವರೂಪ ಚಿಂತನೆ ಒಂದರಲ್ಲೇ ಮನಸ್ಸುಳ್ಳವನಾಗಿ ಸಂತುಷ್ಟನಾಗಿ ಇರುವವನೇ ಸ್ಥಿತಪ್ರಜ್ಞನು. ಇದು ಸ್ಥಿತಪ್ರಜ್ಞತೆಯ ಮೇಲಿನ ಹಂತ. ಇದನ್ನು ಪಡೆಯುವುದು ಬಹಳ ಕಷ್ಟ. ಮೊದಲು ಚೇತನನು ಕೂರ್ಮವು ತನ್ನ ಅಂಗಗಳನ್ನು ಒಳಕ್ಕೆ ಎಳೆದುಕೊಳ್ಳುವಂತೆ ತನ್ನ ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆಯೂ ಮತ್ತು ಮನಸ್ಸನ್ನು ವಿಷಯಚಿಂತನೆ ಮಾಡದಂತೆಯೂ ತಡೆಯಬೇಕು. ಇದು ಸ್ಥಿತಪ್ರಜ್ಞತೆ ಪಡೆಯಲು ಮೊಟ್ಟಮೊದಲನೆಯ ಹಂತ. ಆಗ ಮನಸ್ಸು ಅಹಂಕಾರ ಮಮಕಾರ ರಹಿತವಾಗಿ, ನಿರ್ಮಲವಾಗಿ, ಸುಖವು ಪ್ರಾಪ್ತವಾದಾಗ ಅತಿಯಾಗಿ ಸಂತೋಷಗೊಳ್ಳದೆ, ದುಃಖವು ಪ್ರಾಪ್ತವಾದಾಗ ಅತಿಯಾಗಿ ಮನಸ್ಸು ಕಲಕಿ ದುಃಖಿಸದೆ ಇರುವ ಸ್ಥಿತಿಯನ್ನು ಹೊಂದುತ್ತದೆ. ಇದು ಸ್ಥಿತಪ್ರಜ್ಞತೆ ಹೊಂದಲು ೨ನೆಯ ಹಂತ. ಇದರಿಂದ ಚೇತನನು ಕಾಲಕ್ರಮದಲ್ಲಿ ಸುಖದುಃಖಗಳನ್ನು ಸಮಭಾವದಿಂದ ಕಾಣುವ ಶಕ್ತಿಯನ್ನು ಪಡೆಯುತ್ತಾನೆ ಮತ್ತು ಕೋಪ, ಭಯ ಮತ್ತು ಆಸೆ ಇವುಗಳನ್ನು ತ್ಯಜಿಸಿದವನಾಗುತ್ತಾನೆ. ಇದು ಸ್ಥಿತಪ್ರಜ್ಞತೆಯ ಮೂರನೆಯ ಹಂತ. ಅನಂತರ ಅವನು

ಸುಖದುಃಖಗಳಿಂದ ವಿಕಾರರಹಿತನಾಗಿ ಶಾಂತಚಿತ್ತನಾಗಿರುವ ಅರ್ಹತೆ ಹೊಂದಿ, ಸಮಸ್ತ ಕಾಮನೆಗಳನ್ನೂ ತ್ಯಜಿಸಿ, ಕೇವಲ ಆತ್ಮಜ್ಞಾನ ಒಂದರಲ್ಲೇ ನೆಲೆಸಿ ಸಂತುಷ್ಟನಾಗಿರುವ ಸ್ಥಿತಪ್ರಜ್ಞತೆಯ ಮೇಲಿನ ಹಂತವನ್ನು ಪಡೆಯುತ್ತಾನೆ ಮತ್ತು ಆತ್ಮಸಾಕ್ಷಾತ್ಕಾರ ಪಡೆಯಲು ಅರ್ಹನಾಗುತ್ತಾನೆ.

ಆದರೆ ಈ ಸ್ಥಿತಪ್ರಜ್ಞತೆಯನ್ನು ಪಡೆಯುವುದು ಬಹಳ ಕಷ್ಟ, ಅದನ್ನು ಪಡೆಯಬೇಕಾದರೆ ಮೊದಲು ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸಬೇಕು. ಇದು ಸುಲಭವಾದ ಕೆಲಸವಲ್ಲ, ಪ್ರಯತ್ನಪಟ್ಟು ಇಂದ್ರಿಯಗಳನ್ನು ವಿಷಯಗಳಿಂದ ನಿಗ್ರಹಿಸಿದರೂ, ಮನಸ್ಸಿನಲ್ಲಿ ವಿಷಯದ ಮೇಲಿನ ಆಸೆ ಹೋಗುವುದಿಲ್ಲ, ಮನಸ್ಸು ವಿಷಯ ಚಿಂತನೆ ಮಾಡುತ್ತಿದ್ದರೆ ಆಯಾ ವಿಷಯಗಳ ಮೇಲೆ ಕಾಮವು ಉತ್ಪನ್ನವಾಗುತ್ತದೆ. ಕಾಮದಿಂದ ಕ್ರೋಧವೂ, ಕ್ರೋಧದಿಂದ ಮೋಹವೂ (ಅಂದರೆ ಕೃತ್ಯಾಕೃತ್ಯವಿವೇಕ ಶೂನ್ಯತೆಯೂ) ಮೋಹದಿಂದ ಸ್ಮೃತಿಭ್ರಂಶವೂ (ತನ್ನ ಕರ್ಮವು ಏನು ಎಂಬುದರ ಅರಿವಿಲ್ಲದಿರುವಿಕೆ ) ಸ್ಮೃತಿಭ್ರಂಶದಿಂದ ಬುದ್ಧಿನಾಶವೂ ಉಂಟಾಗಿ ಕೊನೆಗೆ ಅವನು ನಾಶಹೊಂದುತ್ತಾನೆ. ಆದ್ದರಿಂದ ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸುವುದು ಬಹಳ ಕಷ್ಟ, ಆದರೂ ಅದಕ್ಕೆ ಒಂದು ಮಾರ್ಗವುಂಟೆಂದು ಇಲ್ಲಿ ಪರಮಾತ್ಮನು ತಿಳಿಸಿದ್ದಾನೆ. ''ಇಂದ್ರಿಯಗಳನ್ನು ವಿಷಯಗಳಿಂದ ನಿಗ್ರಹಿಸಿ, ಮನಸ್ಸನ್ನು ವಿಷಯಚಿಂತನೆ ಮಾಡದಂತೆ ತಡೆದು, ಶುಭಾಶ್ರಯನಾದ ಪರಮಾತ್ಮನಾದ ನನ್ನಲ್ಲಿ ನೆಲೆಗೊಳಿಸು.'' ಎಂದು ಹೇಳಿದ್ದಾನೆ. ಅಂದರೆ ಮನಸ್ಸಿನಲ್ಲಿ ಪರಮಾತ್ಮನನ್ನು ಸ್ಮರಿಸುತ್ತಾ ಇರಬೇಕು. ಆಗ ಭಗವಂತನ ಸ್ಮರಣೆಯಿಂದ ಮನಸ್ಸಿನ ಕಲ್ಮಷಗಳೂ, ವಿಷಯ ವಾಸನೆಗಳೂ ನಾಶವಾಗಿ, ಇಂದ್ರಿಯಗಳೂ ಮನಸ್ಸೂ ಸ್ವಾಧೀನವಾಗಿ ವ್ಯಕ್ತಿಯು ಶಾಂತಚಿತ್ತನಾಗಬಲ್ಲನು. ಅವನು ಪ್ರಶಾಂತವಾದ ಮನಸ್ಸನ್ನು ಹೊಂದಿ ಕೊನೆಗೆ ಸ್ಥಿತಪ್ರಜ್ಞನಾಗಿ ಆತ್ಮ ಸಾಕ್ಷಾತ್ಕಾರವನ್ನು ಹೊಂದುವನು.

ಈ ಅಧ್ಯಾಯದಲ್ಲಿ ಆತ್ಮಸ್ವರೂಪವಿಷಯವಾದ ಸಾಂಖ್ಯಬುದ್ಧಿಯೂ, ಕರ್ಮಯೋಗ ವಿಚಾರವೂ, ಸ್ಥಿತಪ್ರಜ್ಞತೆಯ ವಿಷಯವೂ ತಿಳಿಸಲ್ಪಟ್ಟಿದೆ.

★★★★

# ಭಗವದ್ಗೀತೆ - ಅಧ್ಯಾಯ 3

## ಕರ್ಮಯೋಗ

### ಗೀತಾರ್ಥಸಂಗ್ರಹ ಶ್ಲೋಕ - 7

ಅಸಕ್ತ್ಯಾ ಲೋಕರಕ್ಷಾಯೈ
ಗುಣೇಷ್ವಾರೋಪ್ಯ ಕರ್ತೃತಾಮ್।
ಸರ್ವೇಶ್ವರೇ ವಾ ನ್ಯಸ್ಯೋಕ್ತಾ
ತೃತೀಯೇ ಕರ್ಮಕಾರ್ಯತಾ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ 3ನೇಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ

ಅಸಕ್ತ್ಯಾ = ಅಸಕ್ತಿ ರಹಿತನಾಗಿಯೂ ಲೋಕ ರಕ್ಷಾಯೈ = ಲೋಕರಕ್ಷಣೆಗಾಗಿಯೂ ; ಗುಣೇಷು ಕರ್ತೃತಾಂ ಆರೋಪ್ಯ = ಕರ್ಮದ ಕರ್ತೃತ್ವವು ತ್ರಿಗುಣಗಳಿಗೆ ಸೇರಿದೆ ಎಂದೂ, ವಾ ಸರ್ವೇಶ್ವರೇ ನ್ಯಸ್ಯ = ಅಷ್ಟು ಮಾತ್ರವಲ್ಲದೆ ಕರ್ಮದ ಕರ್ತೃತ್ವವು ಸರ್ವೇಶ್ವರನಾದ ಪರಮಾತ್ಮನಿಗೆ ಸೇರಿದೆ ಎಂಬ ಭಾವನೆಯಿಂದಲೂ - ತೃತೀಯೇ ಕರ್ಮ ಕಾರ್ಯತಾ ಉಕ್ತಾ = ಕರ್ಮ ಮಾಡಬೇಕೆಂದು ಮೂರನೆಯ ಅಧ್ಯಾಯದಲ್ಲಿ ಹೇಳಿದೆ.

ಭಗವದ್ಗೀತೆಯ ಈ ಮೂರನೆಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

ಕರ್ಮಯೋಗಕ್ಕಿಂತ ಜ್ಞಾನ ಯೋಗವು ಶ್ರೇಷ್ಠವೆನ್ನುವುದಾದರೆ ನನ್ನನ್ನೇಕೆ ಈ ಘೋರವಾದ ಯುದ್ಧ ಕರ್ಮವನ್ನು ಮಾಡುವಂತೆ ಹೇಳುತ್ತೀಯೆ

ಎಂದು ಅರ್ಜುನನು ಪರಮಾತ್ಮನನ್ನು ಕೇಳುತ್ತಾನೆ. ಅವನ ಪ್ರಶ್ನೆಗೆ ಉತ್ತರವಾಗಿ ಪರಮಾತ್ಮನು ಕರ್ಮಯೋಗದ ಶ್ರೇಷ್ಠತೆಯನ್ನು ತಿಳಿಸುತ್ತಾನೆ. ಈ ಮೂರನೆಯ ಅಧ್ಯಾಯದಲ್ಲಿ ಕರ್ಮವನ್ನು ಕರ್ಮಯೋಗವಾಗಿ ಹೇಗೆ ಮಾಡಬೇಕು ಎಂಬುದನ್ನು ವಿವರಿಸಿ ಪರಮಾತ್ಮನು ಉಪದೇಶ ಮಾಡಿದ್ದಾನೆ.

## I. ಫಲಾಸಕ್ತಿರಹಿತವಾಗಿ ಕರ್ಮ ಮಾಡಬೇಕು (ಶ್ಲೋಕಗಳು- ೧ರಿಂದ೯)

ಕರ್ಮಯೋಗ, ಜ್ಞಾನಯೋಗಗಳೆಂಬ ಎರಡು ಮಾರ್ಗಗಳಿವೆ. ಜ್ಞಾನಯೋಗವು ಕಷ್ಟಸಾಧ್ಯವಾದುದು. ಅದನ್ನು ಎಲ್ಲರೂ ಆಚರಿಸಲಾಗುವುದಿಲ್ಲ, ಅದರಲ್ಲಿ ಪ್ರಮಾದವುಂಟಾಗುವ ಸಂಭವವೂ ಇದೆ. ಕರ್ಮಯೋಗವು ಅದಕ್ಕಿಂತ ಸುಲಭವಾದುದೂ ಸುಖಕರ ವಾದುದೂ ಪ್ರಮಾದರಹಿತವಾದುದೂ ಆಗಿದೆ.

ಪ್ರಕೃತಿಸಂಬಂಧ ಪಡೆದ ಮೇಲೆ ಪ್ರಕೃತಿಯ ಸತ್ತ್ವರಜಸ್ತಮೋಗುಣಗಳ ಪ್ರಕಾರ ಎಲ್ಲರೂ ಕರ್ಮಗಳಲ್ಲಿ ಪ್ರವರ್ತಿತರಾಗುತ್ತಾರೆ. ಕರ್ಮಮಾಡದೇ ಇರಲು ಯಾರಿಗೂ ಸಾಧ್ಯವಿಲ್ಲ, ಶರೀರಪೋಷಣೆಗೂ ಸಹ ಪ್ರತಿಯೊಬ್ಬರೂ ಕರ್ಮಗಳನ್ನು ಮಾಡಲೇಬೇಕಾಗುತ್ತದೆ. ಆದರೆ ನ್ಯಾಯಾರ್ಜಿತ ಧನದಿಂದ ಭಗವಂತನನ್ನು ಆರಾಧಿಸಿ ಆ ಯಜ್ಞಶೇಷದಿಂದ ತಮ್ಮ ಶರೀರಯಾತ್ರೆ ನಡೆಸುವವರು ಸರ್ವಪಾಪಗಳಿಂದ ಮುಕ್ತರಾಗುವರು. ಪರಮಪುರುಷನಿಂದ ಕೊಡಲ್ಪಟ್ಟವುಗಳನ್ನು, ಅವನನ್ನು ಆರಾಧಿಸಿ ಅವನಿಗೆ ಸಮರ್ಪಿಸದೆ ಕೇವಲ ತಮಗೋಸ್ಕರ ಪಕ್ವಗೊಳಿಸಿ ಭುಜಿಸುವವರು ಪಾಪವನ್ನೇ ಭೋಗಿಸುತ್ತಾರೆ ಎಂದು ಪರಮಾತ್ಮನು ತಿಳಿಸಿದ್ದಾನೆ. ಜ್ಞಾನಯೋಗಿಯೂ ಕೂಡ ಸಾಧನ ಸಮಾಪ್ತಿ ಆಗುವವರೆಗೆ ತನ್ನ ಶರೀರಧಾರಣೆಗಾಗಿ ನ್ಯಾಯಾರ್ಜಿತವಾದ ಧನದಿಂದ ಭಗವದಾರಾಧನವಾಗಿ, ಯಜ್ಞಾರ್ಥವಾಗಿ ಕರ್ಮಗಳನ್ನು ಮಾಡುತ್ತಿರಬೇಕಾಗುತ್ತದೆ. ಕರ್ಮ ಯೋಗದಲ್ಲೂ ಆತ್ಮಸ್ವರೂಪಾನುಸಂಧಾನವೂ, ಅಕರ್ತೃತ್ವಾನುಸಂಧಾನವೂ ಅಂತರ್ಗತವಾಗಿವೆ.

ಭಗವದಾರಾಧನ ರೂಪವಾದ ಯಜ್ಞಾದಿಕರ್ಮಗಳಿಂದ ಮಳೆಯೂ, ಮಳೆಯಿಂದ ಅನ್ನಪಾನಾದಿಗಳೂ, ಅನ್ನಪಾನಾದಿಗಳಿಂದ ಸರ್ವ ಭೂತಗಳ ಶರೀರ ಪೋಷಣೆಯೂ ಆಗುತ್ತದೆ. ಅನಂತರ ಸಜೀವಶರೀರದ ಮೂಲಕ ಮತ್ತೆ ಯಜ್ಞಾರ್ಥವಾಗಿ ಭಗವದಾರಾಧನ ರೂಪವಾಗಿ ಕರ್ಮಗಳನ್ನು ಮಾಡುತ್ತಿರಬೇಕು. ಇದು ಬಾಳಿನ ಚಕ್ರ. ಸರ್ವೇಶ್ವರನಿಂದ ಪ್ರವರ್ತಿತವಾದ ಈ ಚಕ್ರವನ್ನು ಅನುವರ್ತಿಸದವನು ನಿರರ್ಥಕವಾಗಿ ಜೀವಿಸುವನು ಎಂದು ಪರಮಾತ್ಮನು ಹೇಳಿದ್ದಾನೆ. ಆದ್ದರಿಂದ ಫಲಾಸಕ್ತಿ ರಹಿತನಾಗಿ, ಯಜ್ಞಾರ್ಥವಾಗಿ ಭಗವದಾರಾಧನ ರೂಪವಾಗಿ, ನಿನ್ನ ಕರ್ತವ್ಯ ಕರ್ಮಗಳನ್ನು ಕರ್ಮಯೋಗವಾಗಿ ಮಾಡುವುದು ನಿನಗೆ ಉತ್ತಮವಾದ ಮಾರ್ಗ ಎಂದು ಪರಮಾತ್ಮನು ಅರ್ಜುನನಿಗೆ ಉಪದೇಶ ನೀಡಿದ್ದಾನೆ.

## II ಲೋಕ ಕಲ್ಯಾಣಕ್ಕಾಗಿ ಮುಕ್ತ ಪುರುಷರುಗಳೂ ಕರ್ಮ ಮಾಡಬೇಕು- (ಶ್ಲೋಕಗಳು - 20 - 26)

ಜಗತ್ತಿನ ಮತ್ತು ಜೀವಿಗಳ ಮೇಲ್ಮೆಗಾಗಿಯೂ ಮತ್ತು ಮಹಾತ್ಮರ ನಡೆನುಡಿಗಳನ್ನು ಲೋಕದ ಜನರು ಅನುಸರಿಸುವುದರಿಂದ ಅವರಿಗೆ ಕರ್ಮ ಮಾಡಲು ಆದರ್ಶ ನೀಡುವುದಕ್ಕಾಗಿಯೂ, ಜ್ಞಾನಿಗಳಾದ ಮುಕ್ತಪುರುಷರುಗಳೂ ಕರ್ಮ ಮಾಡಬೇಕು ಎಂದೂ, ಜನಕಾದಿ ಮಹರ್ಷಿಗಳೂ ಕರ್ಮ ಮಾಡಿದರು ಎಂದೂ, ಲೋಕಕಲ್ಯಾಣಕ್ಕಾಗಿ ಮತ್ತು ಲೋಕರಕ್ಷಣೆಗಾಗಿ ಪರಮಾತ್ಮನಾದ ತಾನೂ ಕರ್ಮ ಮಾಡುತ್ತಿರುವುದಾಗಿಯೂ ಪರಮಾತ್ಮನು ತಿಳಿಸಿದ್ದಾನೆ. ಜ್ಞಾನಿಯಾದವನು ತನಗೆ ಕರ್ಮಫಲದಲ್ಲಿ ಆಸೆ ಇಲ್ಲದಿದ್ದರೂ ಲೋಕಸಂಗ್ರಹಕ್ಕಾಗಿ ಅಕ್ಕರೆಯಿಂದ ಕರ್ಮಗಳನ್ನು ಮಾಡಬೇಕು

## III ಕರ್ಮದ ಕರ್ತೃತ್ವ ತ್ರಿಗುಣಗಳಿಗೆ ಸೇರಿದೆ ಎಂದು ಅರಿತು ಕರ್ಮ ಮಾಡಬೇಕು- (ಶ್ಲೋಕಗಳು: 27-29)

ಕರ್ತೃತ್ವವು ಆತ್ಮನಿಗೆ ಸ್ವರೂಪ ಪ್ರಯುಕ್ತವಾದುದಲ್ಲ, ಆತ್ಮನಿಗೆ ಪ್ರಕೃತಿ ಸಂಬಂಧ ಉಂಟಾದರೆ ಆಗ ಅವನಿಗೆ ಸತ್ತ್ವರಜಸ್ತಮೋಗುಣಗಳ ಸಂಪರ್ಕ ಉಂಟಾಗುತ್ತದೆ. ಆ ಗುಣಗಳಿಂದ ಪ್ರೇರಿತನಾಗಿ ಅವನು

ಕರ್ಮದಲ್ಲಿ ಪ್ರವರ್ತಿಸುತ್ತಾನೆ. ಆದ್ದರಿಂದ ಕರ್ಮದ ಕರ್ತೃತ್ವವು ಅವನಿಗೆ ಸ್ವರೂಪದಿಂದ ಬಂದುದಲ್ಲ; ಪ್ರಕೃತಿ ಕಾರ್ಯವಾದ ತ್ರಿಗುಣಗಳಿಂದ ಬಂದುದು ಎಂಬುದನ್ನು ಅರಿತು ಕರ್ಮ ಮಾಡಬೇಕು. ತತ್ತ್ವಜ್ಞಾನಿಯಾದವನು ಕರ್ಮಗಳಿಗೆ ತಾನು ಕರ್ತಾ ಎಂಬ ಅಭಿಮಾನವನ್ನು ಪಡೆಯುವುದಿಲ್ಲ.

**IV ಕರ್ಮದ ಕರ್ತೃತ್ವವು ಪರಮಾತ್ಮನಿಗೆ ಸೇರಿದೆ ಎಂಬುದನ್ನು ಅರಿತು ಕರ್ಮ ಮಾಡಬೇಕು- (ಶ್ಲೋಕಗಳು 30-32)**

ಸರ್ವರಲ್ಲೂ ಅಂತರಾತ್ಮನಾಗಿರುವ ಪರಮಾತ್ಮನೇ ಕರ್ಮಗಳ ಕರ್ತೃ ಎಂದರಿತು ಕರ್ಮಗಳನ್ನು ಮಾಡಬೇಕು. 2ನೆಯ ಅಧ್ಯಾಯದಲ್ಲಿ ಪರಮಾತ್ಮನು ಕರ್ಮದ ಫಲವು ನಿನಗೆ ಸೇರಿದ್ದಲ್ಲ ಎಂದು ಅರ್ಜುನನಿಗೆ ತಿಳಿಸಿದನು. ಈಗ ಕರ್ಮದ ಕರ್ತೃತ್ವವೂ ನಿನಗೆ ಸೇರಿದ್ದಲ್ಲ ಎಂಬುದನ್ನು ತಿಳಿಸುತ್ತಾನೆ. ತ್ರಿಗುಣಗಳಿಂದ ಕೂಡಿದ ಶರೀರದ ಮೂಲಕ ಕರ್ಮ ಮಾಡಿಸುವವನು ಆ ಶರೀರದಲ್ಲಿ ಅಂತರಾತ್ಮನಾಗಿರುವ ಪರಮಾತ್ಮನೇ ಆಗಿದ್ದಾನೆ. ಕರ್ಮದ ಕರ್ತೃತ್ವವೂ, ಕರ್ಮದ ಫಲವೂ ಎಲ್ಲವೂ ಪರಮಾತ್ಮನಿಗೆ ಸೇರಿದ್ದು ಎಂದರಿತು ಕರ್ಮ ಮಾಡಬೇಕು. ಕರ್ಮಯೋಗದ ಈ ಅತಿ ಮುಖ್ಯವಾದ ಅಭ್ಯಾಸವನ್ನು ಈ ಅಧ್ಯಾಯದ "ಮಯಿ ಸರ್ವಾಣಿ ಕರ್ಮಾಣಿ ಎಂಬ 30ನೇಯ ಶ್ಲೋಕದಲ್ಲಿ ಈ ರೀತಿ ತಿಳಿಸಿದ್ದಾನೆ- "ಅರ್ಜುನ ! ನೀನು ಆತ್ಮಪರಮಾತ್ಮ ಸ್ವರೂಪ ವಿವೇಕ ಜ್ಞಾನದಿಂದ ಕೂಡಿದವನಾಗಿ, ನಿನ್ನ ಯುದ್ಧಾದಿಸಮಸ್ತ ವಿಹಿತ ಕರ್ತವ್ಯ ಕರ್ಮಗಳೆಲ್ಲವನ್ನೂ, ಸರ್ವೇಶ್ವರನಾದ ಪರಮಾತ್ಮನಾದ ನನಗೆ ಸಮರ್ಪಿಸಿ, ಫಲಾಸಕ್ತಿರಹಿತನಾಗಿ, ಅಹಂಕಾರ ಮಮಕಾರ ರಹಿತನಾಗಿ, ಫಲವು ಲಭಿಸುವುದೋ ಇಲ್ಲವೋ ಎಂಬ ಕಳವಳವಿಲ್ಲದೆ ನಿಶ್ಚಿಂತನಾಗಿ ಮಾಡು" ಎಂದು ಪರಮಾತ್ಮನು ಉಪದೇಶ ಮಾಡಿದ್ದಾನೆ. ಆದ್ದರಿಂದ ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳೆಲ್ಲವೂ ಪರಮಾತ್ಮನ ಪೂಜೆ, ಆರಾಧನೆ ಎಂಬ ಭಕ್ತಿಭಾವ ಹೊಂದಿ ಕರ್ಮಗಳನ್ನು ಮಾಡಬೇಕು. ಕರ್ಮವು ತನ್ನದು ಎಂಬ ಮಮಕಾರವನ್ನೂ, ಕರ್ಮದ ಕರ್ತೃ ತಾನು ಎಂಬ ಅಹಂಕಾರವನ್ನೂ, ಕರ್ಮದ ಫಲ ತನಗೇ

ಎಂಬ ಫಲಾಸಕ್ತಿಯನ್ನು ತ್ಯಜಿಸಿ ಶಾಂತ ಚಿತ್ತನಾಗಿ ಭಗವಂತನ ಆರಾಧನೆ ಎಂದು ಸಂತೋಷದಿಂದಲೂ ಭಕ್ತಿಯಿಂದಲೂ ಕರ್ಮ ಮಾಡುವುದೇ ಕರ್ಮಯೋಗವು. ಸರ್ವಶೇಷಿಯಾದ ಪರಮಾತ್ಮನು ತನ್ನವನೇ ಆದ ಚೇತನನ ಮೂಲಕ, ತನ್ನ ಪ್ರಯೋಜನಕ್ಕಾಗಿ,ತನ್ನ ಕರ್ಮವನ್ನು ಮಾಡಿಸುತ್ತಿದ್ದಾನೆ ಎಂಬ ಪವಿತ್ರ ಭಾವನೆ ಹೊಂದಿ ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳನ್ನು ಭಕ್ತಿಯಿಂದಲೂ ಸಂತೋಷ ದಿಂದಲೂ ಕಳವಳ ರಹಿತನಾಗಿ ಮಾಡಬೇಕು ಎಂದು ಕೃಷ್ಣ ಪರಮಾತ್ಮನು ಇಲ್ಲಿ ಉಪದೇಶ ಮಾಡಿದ್ದಾನೆ.

**V ಕರ್ಮಯೋಗಾಚರಣೆಯ ಮೂಲಕ ಕಾಮಕ್ರೋಧಾದಿಗಳನ್ನು ಜಯಿಸಿ ಜ್ಞಾನ ಯೋಗಕ್ಕೆ ಅರ್ಹತೆ ಪಡೆಯಬೇಕು ಎಂದು ಪರಮಾತ್ಮನು ತಿಳಿಸುತ್ತಾನೆ- (ಶ್ಲೋಕಗಳು 36-42)**

ಪ್ರಕೃತಿ ಸಂಬಂಧದಿಂದ ಬಂಧಿತನಾದ ಬದ್ಧ ಚೇತನನಿಗೆ, ತನ್ನ ಪ್ರಕೃತಿ ವಾಸನೆಗೆ ವಿರೋಧವಾಗಿ ಇಂದ್ರಿಯನಿಗ್ರಹಾದಿಗಳನ್ನು ಮಾಡಿ ಜ್ಞಾನಯೋಗ ಅಭ್ಯಾಸಗಳನ್ನು ಮಾಡುವುದು ಬಹಳ ಕಷ್ಟ, ಆದ್ದರಿಂದ ತನಗೆ ಯೋಗ್ಯವಾದ ತನ್ನ ಸ್ವಧರ್ಮವಾದ ಕರ್ಮಯೋಗವನ್ನು ಮೊದಲು ಅನುಷ್ಠಿಸಿ, ತನ್ಮೂಲಕ ಇಂದ್ರಿಯಗಳನ್ನು ಜಯಿಸಿ, ಕಾಮಕ್ರೋಧಾದಿಗಳನ್ನು ನಾಶ ಮಾಡಿ, ತನಗೆ ಪರಧರ್ಮವಾದ ಜ್ಞಾನ ಯೋಗಕ್ಕೆ ಅರ್ಹತೆಯನ್ನು ಪಡೆಯಬೇಕು. ತದನಂತರ ಜ್ಞಾನಯೋಗವನ್ನು ಅನುಷ್ಠಿಸುವುದು ಉತ್ತಮವಾದ ಮಾರ್ಗ. ರಜೋಗುಣದಿಂದ ಉತ್ಪನ್ನವಾಗುವ ಕಾಮಕ್ರೋಧಾದಿಗಳು ಜ್ಞಾನಯೋಗಾಭ್ಯಾಸಕ್ಕೆ ವೈರಿಗಳು. ಕಾಮವು ಎಷ್ಟು ಅನುಭವಿಸಿದರೂ ತೃಪ್ತಿಯಾಗದೆ, ಮೇಲಿ ಮೇಲೆ ವಿಷಯೋಪಭೋಗಗಳನ್ನು ಹೆಚ್ಚುಹೆಚ್ಚಾಗಿ ಅನುಭವಿಸುವಂತೆ ಬಲವಂತಪಡಿಸುತ್ತದೆ. ಕ್ರೋಧವು ಚೇತನನಿಂದ ಅನೇಕ ಪಾಪಗಳನ್ನು ಮಾಡಿಸುತ್ತದೆ. ಆದರೆ ಹೊಗೆಯಿಂದ ಬೆಂಕಿಯೂ, ಕೊಳೆಯಿಂದ ಕನ್ನಡಿಯೂ ಆವರಿಸಲ್ಪಟ್ಟಿರುವಂತೆ ಈ ಕಾಮವು ಜ್ಞಾನವನ್ನು ಆವರಿಸಿಕೊಂಡಿದೆಯೋ ವಿನಃ ಅದನ್ನು ನಾಶಗೊಳಿಸುವುದಿಲ್ಲ, ಆದ್ದರಿಂದ ಕನ್ನಡಿಯನ್ನು ಒರೆಸಿ ಕೊಳೆಯನ್ನು ಹೋಗಲಾಡಿಸುವಂತೆ ಈ ಕಾಮವನ್ನು

ನಾಶಪಡಿಸಿದರೆ ಆತ್ಮ ಜ್ಞಾನವು ಪ್ರಕಾಶಿಸುತ್ತದೆ. ಆದರೆ ಕಾಮವು ಬಹಳ ಪ್ರಬಲವಾದುದು. ಅದು ಚೇತನನ ಬುದ್ಧಿ, ಮನಸ್ಸು, ಇಂದ್ರಿಯಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆದ್ದರಿಂದ ಮೊದಲು ಬುದ್ಧಿಯ ಮೂಲಕ ಇಂದ್ರಿಯಗಳನ್ನೂ, ಮನಸ್ಸನ್ನೂ ಕರ್ಮಯೋಗದಲ್ಲಿ ನಿಯಮಿಸಿ ಕಾಮವೆಂಬ ಈ ಪ್ರಬಲ ವೈರಿಯನ್ನು ನಾಶ ಮಾಡಬೇಕು. ತದನಂತರ ಸ್ಥಿತಪ್ರಜ್ಞತೆ ಹೊಂದಿ ಆತ್ಮಸಾಕ್ಷಾತ್ಕಾರ ಹೊಂದಲು ಪ್ರಯತ್ನಿಸಬೇಕು. ಆದ್ದರಿಂದ ಬುದ್ಧಿಯ ಮೂಲಕ ಮನಸ್ಸು ಮತ್ತು ಇಂದ್ರಿಯಗಳನ್ನು ಕರ್ಮಯೋಗಾಚರಣೆಯಲ್ಲಿ ನೆಲೆಗೊಳಿಸಿ, ಕಾಮಕ್ರೋಧಗಳನ್ನು ಜಯಿಸು ಎಂದು ಪರಮಾತ್ಮನು ಇಲ್ಲಿ ಅರ್ಜುನನಿಗೆ ಉಪದೇಶ ಮಾಡಿದ್ದಾನೆ.

ಈ ಅಧ್ಯಾಯದಲ್ಲಿ ಕರ್ಮಯೋಗದ ವಿಷಯವು ವಿವರವಾಗಿ ತಿಳಿಸಲ್ಪಟ್ಟಿದೆ.

****

# ಭಗವದ್ಗೀತೆ ಅಧ್ಯಾಯ 4

## ಜ್ಞಾನಯೋಗ

### ಗೀತಾರ್ಥಸಂಗ್ರಹ ಶ್ಲೋಕ 8

ಪ್ರಸಂಗಾತ್ಸ್ವಸ್ವಭಾವೋಕ್ತಿ
ಕರ್ಮಣೋಽಕರ್ಮತಾಸ್ಯಚ ।
ಭೇದಾಃ ಜ್ಞಾನಸ್ಯ ಮಾಹತ್ಮ್ಯಂ
ಚತುರ್ಥಾಧ್ಯಾಯ ಉಚ್ಯತೇ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ ೪ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

ಪ್ರಸಂಗಾತ್ ಸ್ವಸ್ವಭಾವೋಕ್ತಿ - ಕರ್ಮ ಯೋಗವು ಬಹಳ ಪ್ರಾಚೀನವಾದುದು ಎಂದು ಹೇಳುವ ಪ್ರಸಂಗದಲ್ಲಿ - ಪರಮಾತ್ಮನ ಅವತಾರ ವಿಷಯವು ಹೇಳಲ್ಪಟ್ಟಿದೆ.

ಕರ್ಮಣೋ ಅಕರ್ಮತಾ - ಕರ್ಮದಲ್ಲಿ ಅಂತರ್ಗತವಾಗಿರುವ ಕರ್ಮಕ್ಕಿಂತ ಬೇರೆಯಾದ ಜ್ಞಾನಾಂಶದ ಇರುವಿಕೆಯೂ,

ಅಸ್ಯಚ ಭೇದಾಃ - ಈ ಕರ್ಮದ ಭೇದಗಳೂ,

ಜ್ಞಾನಸ್ಯ ಮಾಹಾತ್ಮ್ಯಂ - ಕರ್ಮದಲ್ಲಿ ಅಡಗಿರುವ ಜ್ಞಾನಾಂಶದ ಶ್ರೇಷ್ಠತೆಯೂ,

ಚತುರ್ಥಾಧ್ಯಾಯ ಉಚ್ಯತೇ - ನಾಲ್ಕನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿತು - ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

I ಕರ್ಮಯೋಗದ ಪರಮ ಪ್ರಾಚೀನತೆ ಮತ್ತು ಭಗವದವತಾರ ವಿಷಯ - ಕರ್ಮಯೋಗವು ಬಹಳ ಪ್ರಾಚೀನವಾದುದು - (ಶ್ಲೋಕಗಳು ೧ ರಿಂದ ೧೫)

ಕರ್ಮಯೋಗವು ಬಹಳ ಪ್ರಾಚೀನ ಕಾಲದಿಂದಲೂ ಇದೆ ಎಂದೂ, ಅದನ್ನು ತಾನು ಹಿಂದೆಯೇ ವಿವಸ್ವಂತನಿಗೆ ಉಪದೇಶ ಮಾಡಿದ್ದನೆಂದೂ, ವಿವಸ್ವಂತನು ಮನುವಿಗೂ, ಮನುವು ಇಕ್ಷ್ವಾಕುವಿಗೂ, ಪರಂಪರೆಯಾಗಿ ಉಪದೇಶಮಾಡುತ್ತಾ ಅದು ಇಂದಿನವರೆಗೂ ಬಂದಿರುವ ಉತ್ತಮವಾದ ಜ್ಞಾನವಾಗಿದೆ ಎಂದೂ ಕರ್ಮಯೋಗದ ಹಿರಿಮೆಯನ್ನು ಪರಮಾತ್ಮನು ತಿಳಿಸುತ್ತಾನೆ. ಇಂದು ಇರುವ ಶ್ರೀಕೃಷ್ಣಪರಮಾತ್ಮನು ಹಿಂದೆ ಇದನ್ನು ವಿವಸ್ವಂತನಿಗೆ ಉಪದೇಶ ಮಾಡಿರುವುದು ಹೇಗೆ ಸಾಧ್ಯ ಎಂಬ ಅರ್ಜುನನ ಪ್ರಶ್ನೆಗೆ ಉತ್ತರ ಹೇಳುವ ಪ್ರಸಂಗದಲ್ಲಿ ಪರಮಾತ್ಮನು ತನ್ನ ಅವತಾರ ರಹಸ್ಯವನ್ನು ತಿಳಿಸುತ್ತಾನೆ.

ಧರ್ಮವು ನಶಿಸಿ ಅಧರ್ಮವು ತಲೆ ಎತ್ತಿರುವ ಕಾಲಗಳಲ್ಲಿ ದುಷ್ಟ ಶಿಕ್ಷಣ, ಶಿಷ್ಟ ಪರಿಪಾಲನೆ ಮಾಡಿ ಧರ್ಮ ಸಂಸ್ಥಾಪನೆ ಮಾಡುವುದಕ್ಕಾಗಿ ಪರಮಾತ್ಮನು ಅವತರಿಸುತ್ತಾನೆ. "ನನ್ನ ದಿವ್ಯವಾದ ಅವತಾರಗಳನ್ನೂ ಅವತಾರಕಾಲಗಳಲ್ಲಿ ನಾನು ಮಾಡಿರುವ ದಿವ್ಯವಾದ ಕಾರ್ಯಗಳನ್ನೂ ಭಕ್ತಿಯಿಂದ ಅರಿತು ಅನುಸಂಧಾನ ಮಾಡುವವರಿಗೆ ಪುನರ್ಜನ್ಮವಿಲ್ಲವೆಂದು" (೯ನೆಯ ಶ್ಲೋಕದಲ್ಲಿ ) ತಿಳಿಸಿದ್ದಾನೆ. ಜಗತ್ತಿನ ಸೃಷ್ಟಿಗೆ ಪರಮಾತ್ಮನು ತಾನು ಕಾರಣನೆಂದೂ, ಆದರೆ ಅದರ ವೈಚಿತ್ರ್ಯಕ್ಕೆಲ್ಲಾ ಚೇತನರು ಅವರವರು ಮಾಡಿರುವ ಕರ್ಮವೇ ಕಾರಣವೆಂದೂ ತಿಳಿಸಿದ್ದಾನೆ. ಮಾನವರನ್ನು ಅವರವರ ಪೂರ್ವಜನ್ಮದ ಗುಣ ಮತ್ತು ಕರ್ಮಗಳಿಗೆ ಅನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರರೆಂಬ ನಾಲ್ಕು ವಿಧವಾದ ವರ್ಣಗಳಲ್ಲಿ ಸೃಷ್ಟಿಸಿರುವುದಾಗಿ ಪರಮಾತ್ಮನು ತಿಳಿಸಿದ್ದಾನೆ. ಪರಮಾತ್ಮನ ಅವತಾರ ಮಹಿಮೆಗಳನ್ನೂ, ಸೃಷ್ಟಿ ವೈಚಿತ್ರ್ಯಕ್ಕೆಲ್ಲಾ ಪರಮಾತ್ಮನು ಕಾರಣ ನಲ್ಲವೆಂಬುದನ್ನೂ ತಿಳಿದುಕೊಂಡು ಕರ್ಮಯೋಗಾಚರಣೆಗೆ ಪ್ರತಿ

ಬಂಧಕಗಳಾದ ಪಾಪಗಳನ್ನು ಹೋಗಲಾಡಿಸಿಕೊಂಡು ಕರ್ಮ ಯೋಗವನ್ನು ಆಚರಿಸುವಂತೆ ಅರ್ಜುನನಿಗೆ ಪರಮಾತ್ಮನು ಉಪದೇಶ ಮಾಡಿದ್ದಾನೆ.

## II ಕರ್ಮದಲ್ಲಿರುವ ಜ್ಞಾನಾಕಾರತೆ - ಕರ್ಮ, ಅಕರ್ಮ ಮತ್ತು ವಿಕರ್ಮಗಳ ವಿಚಾರ (೧೬-೨೪)

ಕರ್ಮಯೋಗದಲ್ಲಿ ಅಡಗಿರುವ ಜ್ಞಾನಾಂಶದ ಪ್ರಧಾನತೆಯನ್ನು ತಿಳಿಸುತ್ತಾನೆ. ಒಂದು ಕರ್ಮವು ಮಾಡಲ್ಪಡಬೇಕಾದರೆ ಅದರಲ್ಲಿ ಕರ್ಮ, ಅಕರ್ಮ ಮತ್ತು ವಿಕರ್ಮ ಎಂಬ ಮೂರು ಅಂಶಗಳಿವೆ. ಕ್ರಿಯಾರೂಪವಾದ ಕರ್ಮಾನುಷ್ಠಾನವೇ ಕರ್ಮವು. ಆ ಕರ್ಮವನ್ನು ಮಾಡಲು ಸಹಾಯಕವಾಗಿರಬೇಕಾದ ನಿತ್ಯ, ನೈಮಿತ್ತಿಕ, ಕಾಮ್ಯ ದ್ರವ್ಯಾರ್ಜನೆ ಮುಂತಾಗಿ ವಿಧವಿಧವಾಗಿರುವ ಇತರ ಕರ್ಮಗಳು ವಿಕರ್ಮವು. ಕರ್ಮದಲ್ಲಿ ಅಡಗಿರುವ ಜ್ಞಾನಭಾಗವೇ ಅಕರ್ಮವು. ಅಂದರೆ ಕರ್ಮ ಮಾಡುವಾಗ ಯಾವ ಮನೋಭಾವನೆಯಿಂದ ಕರ್ಮ ಮಾಡಲ್ಪಡುತ್ತದೆ ಎಂಬುದೇ ಕರ್ಮದಲ್ಲಿರುವ ಜ್ಞಾನಭಾಗ.

ಕರ್ಮಯೋಗದಲ್ಲಿ ಜ್ಞಾನಭಾಗಕ್ಕೆ ಪ್ರಧಾನತೆ ಹೆಚ್ಚು, ಕರ್ಮದಲ್ಲಿ ಎರಡು ವಿಧವಾದ ಜ್ಞಾನಾಕಾರತೆ ಇದೆ.

೧. ಎರಡು ಮತ್ತು ಮೂರನೆಯ ಅಧ್ಯಾಯಗಳಲ್ಲಿ ತಿಳಿಸಿರುವಂತೆ ಆತ್ಮಪರಮಾತ್ಮಸ್ವರೂಪಜ್ಞಾನಾನುಸಂಧಾನದೊಂದಿಗೆ ಕರ್ಮ ಮಾಡುವ ಜ್ಞಾನಾಕಾರತೆ ಒಂದು. ಅಂದರೆ ಕರ್ಮವು ಪರಮಾತ್ಮನದು; ಅವನೇ ಅವನ ಕರ್ಮವನ್ನು ತನ್ನಿಂದ ಮಾಡಿಸುತ್ತಿದ್ದಾನೆ; ಆದ್ದರಿಂದ ಕರ್ಮವೂ, ಕರ್ಮದ ಫಲವೂ ಅವನದೇ ಎಂಬ ಭಾವನೆ ಹೊಂದಿ ಅಹಂಕಾರ, ಮಮಕಾರ ರಹಿತವಾಗಿ ಅಕರ್ತೃತ್ವಾನು ಸಂಧಾನದೊಂದಿಗೆ, ಫಲಾಭಿಸಂಧಿರಹಿತವಾಗಿ, ಕರ್ಮವು ಭಗವದಾರಾಧನೆ ಎಂದು ಭಕ್ತಿಯಿಂದಲೂ, ಸಂತೋಷದಿಂದಲೂ ಕರ್ಮಮಾಡುವ ಜ್ಞಾನಾಕಾರತೆಯು ಒಂದು ವಿಧ.

೨. ಜಗತ್ತಿನಲ್ಲಿರುವ ಸಮಸ್ತ ವಸ್ತುಗಳಲ್ಲೂ ಪರಮಾತ್ಮನು ಅಂತರಾತ್ಮನಾಗಿ ಇರುವುದರಿಂದ ಕರ್ಮವೂ, ಕರ್ಮಮಾಡುವ ತಾನೂ, ಕರ್ಮ ಮಾಡುವ ಸಲಕರಣೆಗಳೂ ಎಲ್ಲವೂ ಭಗವಂತನೇ ಆಗಿದ್ದಾನೆ.

ಸಮಸ್ತವೂ ಬ್ರಹ್ಮಾತ್ಮಕವಾದುದು, ಬ್ರಹ್ಮಮಯವಾದುದು ಎಂಬ ಬ್ರಹ್ಮ ಕರ್ಮಸಮಾಧಿಜ್ಞಾನವು ಮತ್ತೊಂದು ವಿಧ. ಇದು ಈ ಅಧ್ಯಾಯದ ''ಬ್ರಹ್ಮಾರ್ಪಣಂ ಬ್ರಹ್ಮಹವಿಃ'' ಎಂಬ (೨೪ನೆಯ ಶ್ಲೋಕದಲ್ಲಿ) ತಿಳಿಸಲ್ಪಟ್ಟಿದೆ.

ಕರ್ಮದಲ್ಲಿ ಅಡಗಿರುವ ಈ ಜ್ಞಾನಭಾಗಕ್ಕೆ ಪ್ರಧಾನತೆ ಕೊಟ್ಟು ಭಗವದರ್ಪಣವಾಗಿ ಕರ್ಮವನ್ನು ಮಾಡಬೇಕು ಎಂದು ಪರಮಾತ್ಮನು ತಿಳಿಸಿದ್ದಾನೆ.

III ಕರ್ಮದ ನಾನಾಪ್ರಕಾರಗಳು (ಶ್ಲೋಕಗಳು ೨೫ ರಿಂದ ೩೨)

ಯಜ್ಞ, ಯಾಗ, ದೇವತಾರಾಧನೆ, ಇಂದ್ರಿಯನಿಗ್ರಹ, ಮನೋನಿಗ್ರಹ ತೀರ್ಥಯಾತ್ರೆ, ಸ್ವಾಧ್ಯಾಯ, ಪ್ರಾಣಾಯಾಮ ಮುಂತಾಗಿ ಅನೇಕ ವಿಧವಾದ ಯೋಗಭ್ಯಾಸಗಳಿವೆ. ಅವೆಲ್ಲವನ್ನೂ ಮೇಲೆ ತಿಳಿಸಿದ ಎರಡು ವಿಧವಾದ ಜ್ಞಾನಾನುಸಂಧಾನದೊಂದಿಗೆ, ಭಗವದಾರಾಧನವಾಗಿ, ಕರ್ಮಯೋಗವಾಗಿ ಆಚರಿಸಿ, ಭಗವದ್ಭಕ್ತಿಹೊಂದಿ ಮುಕ್ತನಾಗಿ ಭಗವದನುಭವ ಪಡೆಯಬಹುದು ಎಂದು ಪರಮಾತ್ಮನು ಉಪದೇಶ ಮಾಡಿದ್ದಾನೆ.

IV ಕರ್ಮದಲ್ಲಿ ಅಡಗಿರುವ ಜ್ಞಾನಭಾಗವೇ ಪ್ರಧಾನವಾದುದು (ಶ್ಲೋಕ ೩೩-೪೨)

ಕರ್ಮದ ಕ್ರಿಯಾರೂಪವಾದ ಕರ್ಮಭಾಗಕ್ಕಿಂತ ಅದರಲ್ಲಿ ಅಂತರ್ಗತವಾಗಿ ಅಡಗಿರುವ ಆತ್ಮಪರಮಾತ್ಮಸ್ವರೂಪಾನುಸಂಧಾನ, ಅಕರ್ತೃತ್ವಾನು ಸಂಧಾನ, ಫಲಾಭಿಸಂಧಿರಹಿತತ್ವ ಮತ್ತು ಸಮಸ್ತವೂ ಬ್ರಹ್ಮಾತ್ಮಕವಾದುದು ಎಂಬ ಜ್ಞಾನಾನುಸಂಧಾನಾದಿ ಜ್ಞಾನಭಾಗಕ್ಕೆ ಪ್ರಧಾನತೆ ಕೊಡಬೇಕೆಂದೂ, ಅದರಿಂದ ಆತ್ಮಸ್ವರೂಪಸಾಕ್ಷಾತ್ಕಾರವು ಸಾಧಿಸಲ್ಪಡುತ್ತದೆ' ಎಂದೂ ಪರಮಾತ್ಮನು ಉಪದೇಶ ಮಾಡಿದ್ದಾನೆ. ಆದರೆ ಆತ್ಮಯಥಾರ್ಥ ಜ್ಞಾನ ಹೊಂದುವುದು ಬಹಳ ಕಷ್ಟ, ಆದ್ದರಿಂದ ಆತ್ಮಸಾಕ್ಷಾತ್ಕಾರ ಹೊಂದಿರುವ ಗುರುವಿನಿಂದ ಪ್ರಣಿಪಾತ, ಪರಿಪ್ರಶ್ನ, ಸೇವಾದಿಗಳ ಮೂಲಕ ಉಪದೇಶ ಪಡೆಯಬೇಕು. ಪವಿತ್ರವಾದ ಆತ್ಮಸ್ವರೂಪಜ್ಞಾನವು ಲಭಿಸಿದ ಮೇಲೆ ಅದರಲ್ಲಿ ಶ್ರದ್ಧೆ ಹೊಂದಿದವನು ಪರಮಶಾಂತಿ ಪಡೆಯುವನು. ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರವಸ್ತು

ಬೇರೆ ಯಾವುದೂ ಇಲ್ಲ, ಜ್ಞಾನಾಗ್ನಿಯು ಕರ್ಮಬಂಧನವನ್ನು ಭಸ್ಮ ಮಾಡುತ್ತದೆ. ಆತ್ಮಜ್ಞಾನದಲ್ಲಿ ಶ್ರದ್ಧೆಯಿಲ್ಲದವನು ಅದರಲ್ಲಿ ಸಂಶಯ ಹೆಚ್ಚಾಗಿ ನಾಶಹೊಂದುವನು. ಆದ್ದರಿಂದ ನೀನು ಆತ್ಮವಿಷಯ ಜ್ಞಾನದಲ್ಲಿ ಸಂಶಯ ಹೊಂದದೆ, ಅಜ್ಞಾನದಿಂದ ಉಂಟಾಗಿರುವ ನಿನ್ನ ಸಂಶಯಗಳನ್ನೆಲ್ಲಾ ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ, ನಾನು ಉಪದೇಶಿಸಿರುವ ಕರ್ಮಯೋಗವನ್ನು ಮಾಡು, ಎದ್ದೇಳು, ಎಂದು ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡಿದ್ದಾನೆ.

ಈ ಅಧ್ಯಾಯದಲ್ಲಿ ಕರ್ಮಯೋಗದಲ್ಲಿ ಅಂತರ್ಗತವಾಗಿರುವ ಜ್ಞಾನಭಾಗದ ಪ್ರಧಾನತೆಯೂ, ಆತ್ಮಜ್ಞಾನ ಪಡೆಯುವ ಮಾರ್ಗವೂ ತಿಳಿಸಲ್ಪಟ್ಟಿದೆ.

* * * *

# ಭಗವದ್ಗೀತೆ ಅಧ್ಯಾಯ 5

## ಕರ್ಮಸನ್ಯಾಸಯೋಗ

## ಗೀತಾರ್ಥಸಂಗ್ರಹ ಶ್ಲೋಕ 9

ಕರ್ಮಯೋಗಸ್ಯ ಸೌಕರ್ಯಂ
ಶೈಘ್ರ್ಯಂ ಕಾಶ್ಚನ ತದ್ವಿಧಾಃ ।
ಬ್ರಹ್ಮಜ್ಞಾನಪ್ರಕಾರಶ್ಚ
ಪಂಚಮಾಧ್ಯಾಯ ಉಚ್ಯತೇ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ 5ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

ಕರ್ಮಯೊಗಸ್ಯ ಸೌಕರ್ಯಂ ಶೈಘ್ರ್ಯಂ - ಕರ್ಮಯೋಗಾಚರಣೆಯು ಸುಲಭವಾದುದಾಗಿಯೂ, ಶೀಘ್ರಫಲಪ್ರದವಾದುದಾಗಿಯೂ ಇದೆ ಎಂಬುದೂ, ಕಾಶ್ಚನ ತದ್ವಿಧಾಃ - ಕರ್ಮಯೋಗವನ್ನು ಆಚರಿಸಲುಬೇಕಾದ ಕೆಲವು ಜ್ಞಾನಾನುಸಂಧಾನಗಳ ವಿಚಾರವೂ, ಬ್ರಹ್ಮಜ್ಞಾನಪ್ರಕಾರಶ್ಚ - ಕರ್ಮ ಯೋಗನಿಷ್ಠೆಯಿಂದ ಲಭಿಸುವ ಆತ್ಮಜ್ಞಾನ ಪ್ರಕಾರವೂ, ಪಂಚಮಾಧ್ಯಾಯ ಉಚ್ಯತೇ - ಗೀತೆಯ ಐದನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

ಈ ಅಧ್ಯಾಯದಲ್ಲಿ ಹಿಂದಿನ ಅಧ್ಯಾಯದಲ್ಲಿ ತಿಳಿಸಿರುವ ವಿಷಯಗಳು ಮತ್ತೆ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಇದರಲ್ಲಿ ಕರ್ಮಯೋಗದ ಶ್ರೇಷ್ಠತೆಯನ್ನು ಪರಮಾತ್ಮನು ಮತ್ತೆ ತಿಳಿಸಿದ್ದಾನೆ.

## I ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 6)

ಕರ್ಮಯೋಗ ಮತ್ತು ಜ್ಞಾನಯೋಗ ಇವೆರಡರಲ್ಲಿ ಯಾವುದು ಶ್ರೇಯಸ್ಕರವಾದುದು ಎಂದು ಅರ್ಜುನನು ಪರಮಾತ್ಮನನ್ನು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಇವೆರಡೂ ಶ್ರೇಯಸ್ಸನ್ನು ಉಂಟುಮಾಡುವಂತಹವುಗಳಾಗಿವೆ. ಆದರೆ ಇವೆರಡರಲ್ಲಿ ಕರ್ಮಗಳನ್ನು ಬಿಡುವ ಜ್ಞಾನಯೋಗಕ್ಕಿಂತ ಕರ್ಮಗಳನ್ನು ಮಾಡುವ ಕರ್ಮಯೋಗವೇ ಆಚರಿಸಲು ಸುಲಭವಾದುದೂ, ಸುಖಕರವಾದುದೂ, ಶೀಘ್ರಫಲಪ್ರದವಾದುದೂ, ಪ್ರಮಾದರಹಿತವಾದುದೂ ಮತ್ತು ಅಂತರ್ಗತವಾಗಿ ಆತ್ಮಯಾಥಾತ್ಮ್ಯಜ್ಞಾನವುಳ್ಳದ್ದೂ ಆಗಿದೆ ಎಂದೂ; ಕರ್ಮಯೋಗವಾಗಿ ಕರ್ಮಗಳನ್ನು ಮಾಡುವ ಕರ್ಮಯೋಗಿಗೆ ಕರ್ಮಬಂಧ ಉಂಟಾಗುವುದಿಲ್ಲ ಮತ್ತು ಅವನು ಸುಖವಾಗಿ ಶೀಘ್ರದಲ್ಲಿ ಆತ್ಮಸಾಕ್ಷಾತ್ಕಾರ ಪಡೆಯಬಲ್ಲನು ಎಂದೂ ಪರಮಾತ್ಮನು ತಿಳಿಸಿದ್ದಾನೆ.

## II ಕರ್ಮಯೋಗದಲ್ಲಿ ಅಂತರ್ಗತವಾಗಿರುವ ಜ್ಞಾನಾನುಸಂಧಾನ ಪ್ರಕಾರಗಳು (ಶ್ಲೋಕ 7-15)

ಕರ್ಮ ಮಾಡುವಾಗ ಕೆಲವು ಜ್ಞಾನಾಭ್ಯಾಸಗಳನ್ನು ಅವಶ್ಯವಾಗಿ ಮಾಡುತ್ತಿರಬೇಕು. ಕಿವಿಯಿಂದ ಕೇಳುವುದು, ಕಣ್ಣಿನಿಂದ ನೋಡುವುದು ಮುಂತಾದ ಕರ್ಮಗಳನ್ನು ಇಂದ್ರಿಯಗಳ ಮೂಲಕ ಮಾಡುತ್ತಿದ್ದರೂ ಆತ್ಮನಾದ ತಾನು ಏನನ್ನೂ ಮಾಡುತ್ತಿಲ್ಲ ಎಂದು ತನ್ನನ್ನು ಅಕರ್ತೃವಾಗಿ ನೆನೆಸಿಕೊಂಡು, ಅಹಂಕಾರ ಮಮಕಾರ ರಹಿತನಾಗಿ, ಫಲದಲ್ಲಿ ಆಸಕ್ತಿ ರಹಿತನಾಗಿ ಕರ್ಮಗಳನ್ನು ಚೆನ್ನಾಗಿ ಮಾಡಬೇಕು. ಇಂದ್ರಿಯಗಳನ್ನು ವಶದಲ್ಲಿ ಇಟ್ಟುಕೊಂಡು ತನ್ನನ್ನು, ತನಗೆ ಸ್ವಾಮಿಯಾದ ಪರಮಾತ್ಮನ ಕಾರ್ಯಮಾಡಲು, ನವದ್ವಾರಗಳುಳ್ಳ ತನ್ನ ದೇಹಕ್ಕೆ ಪರಮಾತ್ಮನಿಂದ ನಿಯಮಿಸಲ್ಪಟ್ಟ ಒಬ್ಬ ಪ್ರಭುವಾಗಿ (ಅಧಿಕಾರಿಯಾಗಿ) ಭಾವಿಸಿಕೊಂಡು, ಅಹಂಕಾರ ಮಮಕಾರರಹಿತನಾಗಿ ಸ್ವಾಮಿಯಾದ ಭಗವಂತನ ಕೈಂಕರ್ಯವಾಗಿ,ತನ್ನ ಶರೀರ ಮತ್ತು ಇಂದ್ರಿಯಗಳ ಮೂಲಕ ತನ್ನ ಸಮಸ್ತ ಕರ್ತವ್ಯಕರ್ಮಗಳನ್ನೂ ಚೆನ್ನಾಗಿ ಮಾಡಬೇಕು. ಆಗ ಅವನು ತನ್ನ ದೇಹದಲ್ಲಿ ಕರ್ತೃತ್ವವನ್ನು ಆರೋಪಿಸಿ, ಆತ್ಮನಾದ ತಾನು ಏನನ್ನೂ ಮಾಡುತ್ತಿಲ್ಲ ಎಂದು ಶಾಂತಚಿತ್ತನಾಗಿ ಇರುತ್ತಾನೆ. ಅವನಿಗೆ ಕರ್ಮ ಬಂಧನವಿರುವುದಿಲ್ಲ.

## III ಕರ್ಮಯೋಗನಿಷ್ಠೆಯಿಂದ ಉಂಟಾಗುವ ಆತ್ಮಜ್ಞಾನದ ಶ್ರೇಷ್ಠತೆ (ಶ್ಲೋಕ 16-29)

ಕರ್ಮಯೋಗಿಯು ಆತ್ಮಸ್ವರೂಪಜ್ಞಾನಾನುಸಂಧಾನದೊಂದಿಗೆ ಕರ್ಮ ಮಾಡುವುದರಿಂದ ಕಾಲಕ್ರಮದಲ್ಲಿ ಅವನಿಗೆ ಪ್ರಕೃತಿ ಸಂಬಂಧದಿಂದ ಉಂಟಾಗಿರುವ ಅಜ್ಞಾನವು ತೊಲಗಿ ಆತ್ಮಸ್ವರೂಪ ಜ್ಞಾನವುಂಟಾಗುತ್ತದೆ ಮತ್ತು ಅದರಿಂದ ಸಮದರ್ಶಿತ್ವಜ್ಞಾನವು ಲಭಿಸುತ್ತದೆ. ಆಗ ಅವನು ವಿವಿಧ ಮಾನವರು, ಹಸು, ಆನೆ, ನಾಯಿ ಮುಂತಾದ ವಿವಿಧ ಪ್ರಾಣಿಗಳೂ ಮುಂತಾಗಿ ಸಮಸ್ತ ಜಂತುಗಳೆಲ್ಲದರ ಆತ್ಮಗಳೂ ಜ್ಞಾನವೊಂದನ್ನೇ ಆಕಾರವಾಗಿ ಹೊಂದಿವೆ ಎಂಬ ಜ್ಞಾನವನ್ನು ಹೊಂದುತ್ತಾನೆ. ಶುದ್ಧ ಆತ್ಮಸ್ವರೂಪದಲ್ಲಿ ಅವುಗಳೆಲ್ಲವೂ ಏಕರೂಪವಾಗಿರುವುದರಿಂದ ಅವೆಲ್ಲವನ್ನೂ ಸಮಭಾವನೆಯಿಂದ ನೋಡುತ್ತಾನೆ.

''ಯಜ್ಞ, ದಾನ, ತಪಸ್ಸುಗಳ ಭೋಕ್ತನೂ, ಸರ್ವಲೋಕ ಮಹೇಶ್ವರನೂ, ಸರ್ವಭೂತಗಳ ಹಿತೈಷಿಯೂ ಆದ ನನ್ನನ್ನು ಅರಿತು ಕರ್ಮಯೋಗಿಯು ಶಾಂತಿ ಹೊಂದುತ್ತಾನೆ'' ಎಂದು (ಈ ಅಧ್ಯಾಯದ 29ನೇ ಶ್ಲೋಕದಲ್ಲಿ) ತಿಳಿಸಿದ್ದಾನೆ.

ಪ್ರಿಯಬಂಧುಗಳ ಸೇವೆ ಮಾಡುವುದು ಸುಖರೂಪವಾಗಿರುವುದರಿಂದ, ತನಗೆ ಆಪ್ತಬಂಧುವಾದ ಪರಮಾತ್ಮನ ಕೈಂಕರ್ಯವಾಗಿ ಕರ್ಮಗಳನ್ನು ಮಾಡುವ ಕರ್ಮಯೋಗಿಯು ಕರ್ಮಮಾಡುವಾಗಲೇ ಸುಖ ಸಂತೋಷವನ್ನು ಹೊಂದಿ ಶಾಂತಚಿತ್ತನಾಗಿ ಇರುತ್ತಾನೆ. ಆದ್ದರಿಂದ ಕರ್ಮಯೋಗ ರೀತಿಯಲ್ಲಿ ಕರ್ಮಗಳನ್ನು ಮಾಡುವುದು ಸುಖರೂಪವಾಗಿಯೂ, ಸಂತೋಷಕರವಾಗಿಯೂ ಇರುತ್ತದೆ ಎಂದು ಪರಮಾತ್ಮನು ಇಲ್ಲಿ ತಿಳಿಸಿದ್ದಾನೆ.

ಈ ಅಧ್ಯಾಯದಲ್ಲಿ ಕರ್ಮಯೋಗಿಯು ಕರ್ತೃತ್ವ ಮಮತಾ ಫಲತ್ಯಾಗದೊಂದಿಗೆ, ನಿಯತ ಕರ್ತವ್ಯಕರ್ಮಗಳನ್ನು, ಶರೀರ ಇಂದ್ರಿಯಗಳ ಮೂಲಕ ಶ್ರದ್ಧಾಭಕ್ತಿಯಿಂದ ಚೆನ್ನಾಗಿ ಮಾಡಬೇಕು ಮತ್ತು ಮಾನಸಿಕವಾಗಿ ಆತ್ಮನಾದ ತಾನು ಏನನ್ನೂ ಮಾಡುತ್ತಿಲ್ಲ ಎಂಬ ಭಾವನೆ ಹೊಂದಿ ನಿರ್ಲಿಪ್ತನಾಗಿ ಇರಬೇಕು; ಇದೇ ಕರ್ಮಸನ್ಯಾಸವೆಂದು ಪರಮಾತ್ಮನು ತಿಳಿಸಿದ್ದಾನೆ.

★★★★

# ಭಗವದ್ಗೀತೆ ಅಧ್ಯಾಯ 6

## ಆತ್ಮಸಂಯಮಯೋಗ

### ಗೀತಾರ್ಥಸಂಗ್ರಹ ಶ್ಲೋಕ 10

**ಯೋಗಾಭ್ಯಾಸವಿಧಿರ್ಯೋಗೀ**

**ಚತುರ್ಧಾ ಯೋಗಸಾಧನಮ್ ।**

**ಯೋಗಸಿದ್ಧಿಸ್ಸ್ವಯೋಗಸ್ಯ**

**ಪಾರಮ್ಯಂ ಷಷ್ಠ ಉಚ್ಯತೇ ॥**

ಈ ಶ್ಲೋಕದಲ್ಲಿ ಭಗವದ್ಗೀತೆಯ 6ನೇಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

ಯೋಗಾಭ್ಯಾಸ ವಿಧಿ : - ಆತ್ಮ ಚಿಂತನರೂಪಧ್ಯಾನಯೋಗದ ವಿಧಿ ನಿಯಮಗಳೂ, ಯೋಗೀ ಚತುರ್ಧಾ - ಅದನ್ನು ಮಾಡುವ ಯೋಗಿಗಳ ನಾಲ್ಕು ಅವಸ್ಥೆಗಳೂ, ಯೋಗ ಸಾಧನಂ - ಧ್ಯಾನಕ್ಕೆ ಬೇಕಾದ (ಅಭ್ಯಾಸ ವೈರಾಗ್ಯಾದಿ) ಸಾಧನಗಳೂ, ಯೋಗಸಿದ್ಧಿ : - ಆತ್ಮಚಿಂತನರೂಪಯೋಗಸಿದ್ಧಿ ಮತ್ತು ಯೋಗಭ್ರಷ್ಟನಗತಿಯೂ, ಸ್ವಯೋಗಸ್ಯಪಾರಮ್ಯಂ, - ಮತ್ತು ಭಗವತ್ ಚಿಂತನ ರೂಪ ಭಕ್ತಿಯೋಗದ ಶ್ರೇಷ್ಠತೆಯೂ, ಷಷ್ಠಉಚ್ಯತೇ - ಗೀತೆಯ 6ನೇಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ.

ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

## I ಆತ್ಮಚಿಂತನರೂಪ ಧ್ಯಾನಯೋಗದ ವಿಧಿನಿಯಮಗಳು (ಶ್ಲೋಕ ೧-೨೮)

ಜ್ಞಾನಯೋಗಿಯು ಕೇವಲ ಜ್ಞಾನಯೋಗನಿಷ್ಠನಾಗಿರುತ್ತಾನೆ. ಆದರೆ ಕರ್ಮಯೋಗಿಯು ಆತ್ಮಸ್ವರೂಪಚಿಂತನೆಯೊಂದಿಗೂ, ಫಲಾಭಿಸಂಧಿ ರಹಿತವಾಗಿಯೂ, ಭಗವದಾರಾಧನರೂಪವಾಗಿಯೂ ಕರ್ಮಗಳನ್ನು ಮಾಡುವುದರಿಂದ ಅವನು ಕರ್ಮಯೋಗನಿಷ್ಠನೂ ಜ್ಞಾನಯೋಗನಿಷ್ಠನೂ ಎರಡೂ ಆಗಿರುತ್ತಾನೆ. ಮೊದಲು ಪರಮಾತ್ಮನು ಜ್ಞಾನಯೋಗದ ಅನುಷ್ಠಾನದ ಕ್ರಮವನ್ನು ವಿವರಿಸಿ ತಿಳಿಸುತ್ತಾನೆ.

೧. ಚೇತನನು ಮೊದಲು ಕರ್ಮಯೋಗಾನುಷ್ಠಾನದ ಮೂಲಕ ಆತ್ಮಚಿಂತನರೂಪಧ್ಯಾನಯೋಗಾಭ್ಯಾಸಕ್ಕೆ ಅರ್ಹತೆ ಪಡೆಯಬೇಕು.

೨. ಇತರ ಅಭ್ಯಾಸಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ಮನಸ್ಸನ್ನು ವಿಷಯ ಚಿಂತನೆ ಮಾಡದಂತೆ ಮತ್ತು ಕಾಮಕ್ರೋಧಗಳಿಗೆ ವಶವಾಗದಂತೆ ತಡೆದು ಜಯಿಸಬೇಕು. ಅನಂತರ ಅದನ್ನು ಆತ್ಮಚಿಂತನೆ ಮಾಡುವಂತೆ ಪ್ರೇರೇಪಿಸಬೇಕು. ಜಯಿಸಲ್ಪಟ್ಟ ಮನಸ್ಸು ಆತ್ಮನಿಗೆ ಬಂಧುವಾಗುತ್ತದೆ. ಜಯಿಸಲ್ಪಡದ ಮನಸ್ಸು ಆತ್ಮನಿಗೆ ಶತ್ರುವಾಗುತ್ತದೆ.

೩. ಶೀತೋಷ್ಣಸುಖದುಃಖಾದಿಗಳಲ್ಲೂ ಕಲ್ಲು, ಮಣ್ಣು, ಚಿನ್ನ ಮುಂತಾದ ಪದಾರ್ಥಗಳಲ್ಲೂ, ಶತ್ರುಗಳು, ಮಿತ್ರರು ಮುಂತಾದ ಮಾನವರಲ್ಲೂ ಇಷ್ಟಾನಿಷ್ಟಭಾವನೆ ಹೊಂದದೆ ಸಮಬುದ್ಧಿಯನ್ನು ಹೊಂದಬೇಕು.

೪. ಆಹಾರ, ವಿಹಾರ, ನಿದ್ರಾದಿಗಳನ್ನು ಅತಿಯಾಗಿ ಮಾಡದೆ ಮಿತವಾಗಿರಬೇಕು ಮತ್ತು ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕು.

೫. ಆತ್ಮಚಿಂತನಧ್ಯಾನಯೋಗವನ್ನು ಅನುಷ್ಠಿಸುವ ಕ್ರಮವನ್ನು ಅಂದರೆ ಅವನು ಮಾಡಬೇಕಾದ ಶಾರೀರಿಕ ಮಾನಸಿಕ ಅಭ್ಯಾಸಗಳನ್ನು ಪರಮಾತ್ಮನು ಸ್ಪಷ್ಟವಾಗಿ ತಿಳಿಸಿದ್ದಾನೆ.

**ಶಾರೀರಿಕ ಅಭ್ಯಾಸಗಳು** - ನಿರ್ಜನವಾಗಿಯೂ, ನಿಶ್ಶಬ್ದವಾಗಿಯೂ, ಶುಚಿಯಾಗಿಯೂ ಇರುವ ಪ್ರಶಾಂತವಾದ ಒಂದು ಪ್ರದೇಶದಲ್ಲಿ, ಹೆಚ್ಚು ಎತ್ತರ ಹೆಚ್ಚು ತಗ್ಗುಗಳಿಲ್ಲದೆ ಇರುವ ಒಂದು ಸ್ಥಳದಲ್ಲಿ, ದರ್ಭೆ, ಕೃಷ್ಣಾಜಿನ ಮತ್ತು ವಸ್ತ್ರ ಇವುಗಳನ್ನು ಹಾಕಿಕೊಂಡು, ಅದರ ಮೇಲೆ ಕುಳಿತುಕೊಂಡು, ಶರೀರ,

ಕತ್ತು, ತಲೆ ಇವುಗಳನ್ನು ಅಲ್ಲಾಡದಂತೆ ಸ್ಥಿರವಾಗಿ ಸಮವಾಗಿ ನಿಲ್ಲಿಸಿಕೊಂಡು ಮೂಗಿನ ಅಗ್ರಭಾಗದಲ್ಲಿ ದೃಷ್ಟಿಯನ್ನು ನಿಲ್ಲಿಸಬೇಕು.

**ಮಾನಸಿಕ ಅಭ್ಯಾಸ** : ಅನಂತರ ಮನಸ್ಸನ್ನು ಇತರ ವಿಷಯಗಳನ್ನು ಚಿಂತಿಸದಂತೆ ತಡೆದು ಭಗವನ್ನಾಮ ಚಿಂತನೆಯಲ್ಲಿ ನೆಲೆಗೊಳಿಸಿ ಶಾಂತಗೊಳಿಸಬೇಕು. ಅದು ಇತರ ವಿಷಯಗಳ ಕಡೆಗೆ ಚಲಿಸಿದಾಗಲೆಲ್ಲಾ ಅದನ್ನು ಬುದ್ಧಿಯ ಮೂಲಕ ಪ್ರಯತ್ನಪಟ್ಟು ಅಡಗಿಸಬೇಕು. ಪ್ರಾಪಂಚಿಕ ವಿಷಯಗಳಿಂದ ಸೆಳೆದ ಮನಸ್ಸನ್ನು ಪರಮಾತ್ಮ ಚಿಂತನೆಯಲ್ಲಿ ನಿಲ್ಲಿಸಿ, ನಿರ್ಮಲಗೊಳಿಸಿಕೊಂಡು, ತದನಂತರ ಧ್ಯಾನಯೋಗವನ್ನು ಪ್ರಾರಂಭಿಸಬೇಕು.

**"ವಿಷಯಚಿಂತನೆಗಳನ್ನು ನಿಗ್ರಹಿಸಿ ಮನಸನ್ನು ಪರಮಾತ್ಮನಾದ ನನ್ನ ಚಿಂತನೆಯಲ್ಲಿ ನೆಲೆಗೊಳಿಸು"** ಎಂದು (ಈ ಅಧ್ಯಾಯದ ೧೪ನೇ ಶ್ಲೋಕದಲ್ಲಿ) ಪರಮಾತ್ಮನು ತಿಳಿಸಿದ್ದಾನೆ.

**ಆತ್ಮಚಿಂತನರೂಪಧ್ಯಾನ ಮಾಡಬೇಕು -**

ಮನಸ್ಸು ಶಾಂತವಾದ ಮೇಲೆ ನಿಶ್ಚಿಂತನಾಗಿ, ಭ್ರಮರಹಿತನಾಗಿ ಆತ್ಮಚಿಂತನ ರೂಪಧ್ಯಾನ ಮಾಡಬೇಕು. ಆತ್ಮಚಿಂತನೆಯಲ್ಲಿ ಮನಸ್ಸು ನೆಲೆನಿಂತ ಮೇಲೆ ಇತರ ವಿಷಯಗಳಲ್ಲಿ ಆಸೆ ಇಲ್ಲದವನಾಗಿ ಅವನು ಪರಮ ಶಾಂತಿಯನ್ನೂ ಸುಖವನ್ನೂ ಪಡೆಯುವನು.

**II ಆತ್ಮಚಿಂತನರೂಪಧ್ಯಾನಯೋಗದಿಂದ ಲಭಿಸುವ ಸಮದರ್ಶಿತ್ವದ ನಾಲ್ಕು ಅವಸ್ಥೆಗಳು (ಶ್ಲೋಕ 29-32)**

ಆತ್ಮಚಿಂತನರೂಪಧ್ಯಾನಯೋಗದಿಂದ ಚೇತನನು ಪಡೆಯುವ ಮಾನಸಿಕ ಪರಿವರ್ತನೆಯನ್ನು ಪರಮಾತ್ಮನು ತಿಳಿಸಿದ್ದಾನೆ (೧) ಅವನು ಮೊದಲು ಸಮಸ್ತ ಪ್ರಾಣಿಗಳೂ, ತಾನೂ, ಆತ್ಮ ಸ್ವರೂಪದಲ್ಲಿ ಸಮರು ಎಂಬುದನ್ನು ಅರಿಯುತ್ತಾನೆ. (೨) ಅನಂತರ ಎಲ್ಲರಲ್ಲೂ ಪರಮಾತ್ಮನು ಅಂತರ್ಯಾಮಿಯಾಗಿ ಇರುವುದನ್ನು ಅರಿತು ಎಲ್ಲರಲ್ಲೂ ಪರಮಾತ್ಮನ ಅಂತರ್ಯಾಮಿತ್ವವನ್ನು ನೋಡುತ್ತಾನೆ (೩) ಶುದ್ಧ ಜೀವಾತ್ಮನಿಗೆ ಶರೀರಕ್ಕೆ ಸಂಬಂಧಪಟ್ಟ ಪ್ರಾಕೃತಿಕ ಸುಖದುಃಖಗಳೊಂದಿಗೆ

ಸಂಬಂಧವಿಲ್ಲವೆಂಬುದನ್ನು ಅರಿಯುತ್ತಾನೆ. ಅನಂತರ ಅವನಿಗೆ ತನ್ನ ಮತ್ತು ಇತರರ ಶರೀರಕ್ಕೆ ಸಂಬಂಧಪಟ್ಟ ಸುಖದುಃಖಗಳಲ್ಲಿ ಸಮವಾದ ಅನುಭವ ಉಂಟಾಗುತ್ತದೆ. (೪) ಕೊನೆಗೆ ಆತ್ಮ ಸಾಕ್ಷಾತ್ಕಾರ ಪಡೆದ ಮೇಲೆ ಅವನಿಗೆ ದೇಹಾಭಿಮಾನವು ನಾಶವಾಗುತ್ತದೆ ಮತ್ತು ಶರೀರದ ಸುಖದುಃಖಗಳು ಅವನನ್ನು ಬಾಧಿಸುವುದಿಲ್ಲ. ಅವನು ಬ್ರಹ್ಮಜ್ಞಾನವೆಂಬ ಪರಮ ಸುಖವನ್ನು ಪಡೆಯುವನು. ಇದೇ ಯೋಗಸಿದ್ಧಿಯ ಅತ್ಯಂತ ಮೇಲಿನ ಅವಸ್ಥೆ.

## III ಆತ್ಮಚಿಂತನರೂಪಧ್ಯಾನಯೋಗದ ಸಾಧನೆಗಳು - ಅಭ್ಯಾಸ ವೈರಾಗ್ಯಗಳು (ಶ್ಲೋಕ 33-36)

ಮನಸ್ಸು ಬಹಳ ಚಂಚಲವಾದುದು. ಅದನ್ನು ನಿಗ್ರಹಿಸಿ ಇಂದ್ರಿಯಗಳಿಗೆ ಗೋಚರಿಸದ ಆತ್ಮಧ್ಯಾನದಲ್ಲಿ ನೆಲೆ ನಿಲ್ಲಿಸುವುದು ಬಹಳ ಕಷ್ಟ ಎಂದು ಅರ್ಜುನನು ಕಳವಳ ಹೊಂದುತ್ತಾನೆ. **ಚಂಚಲವಾದ ಮನಸ್ಸನ್ನು ನಿಗ್ರಹಿಸುವುದು ಬಹಳ ಕಷ್ಟವಾದರೂ ಆತ್ಮನು ಜ್ಞಾನಾನಂದಸ್ವರೂಪನು ಎಂದೂ, ಪ್ರಾಪಂಚಿಕ ವಿಷಯಗಳೆಲ್ಲಾ ಅಸ್ಥಿರವಾದವುಗಳು ಎಂದೂ ಮನನ ಮಾಡುವ ಅಭ್ಯಾಸ ಮಾಡುತ್ತಿದ್ದರೆ ಮನಸ್ಸಿನಲ್ಲಿ ಪ್ರಾಪಂಚಿಕ ವಿಷಯಗಳಲ್ಲಿ ವೈರಾಗ್ಯವುಂಟಾಗಿ ಮನಸ್ಸು ಜಯಿಸಲ್ಪಟ್ಟು ಅದನ್ನು ಆತ್ಮಧ್ಯಾನದಲ್ಲಿ ನೆಲೆನಿಲ್ಲಿಸಬಹುದು** ಎಂದು ಪರಮಾತ್ಮನು (ಈ ಅಧ್ಯಾಯದ 35 ನೇ ಶ್ಲೋಕದಲ್ಲಿ) ತಿಳಿಸಿದ್ದಾನೆ. **ಅಭ್ಯಾಸ ಮತ್ತು ವೈರಾಗ್ಯಗಳಿಂದ** ಚಂಚಲವಾದ ಮನಸ್ಸನ್ನು ನಿಗ್ರಹಿಸಿ ಆತ್ಮಧ್ಯಾನ ಮಾಡಬಹುದು ಎಂದು ಉಪದೇಶ ಮಾಡಿದ್ದಾನೆ.

## II ಯೋಗಸಿದ್ಧಿ - (ಶ್ಲೋಕಗಳು 37-46)

ಯೋಗಾಭ್ಯಾಸವು ಬಹಳ ಕಷ್ಟಸಾಧ್ಯವಾಗಿ ಇರುವುದರಿಂದ ಅದನ್ನು ಆರಂಭಿಸಿ ಪೂರ್ತಿಗೊಳಿಸಲು ಶಕ್ತನಾಗದೆ ಯೋಗಭ್ರಷ್ಟನಾದರೆ ಅವನ ಗತಿ ಏನು ಎಂದು ಅರ್ಜುನನು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಪರಮಾತ್ಮನು ಯೋಗಾಭ್ಯಾಸವನ್ನು ಪ್ರಾರಂಭಿಸಿದ ಮೇಲೆ ಅವನು ಯೋಗಭ್ರಷ್ಟನಾದರೂ ಅವನು ಎಂದಿಗೂ ದುರ್ಗತಿ ಹೊಂದುವುದಿಲ್ಲ. ಅವನು ಮುಂದೆ ಜ್ಞಾನಿಗಳ ಮನೆಯಲ್ಲಿ ಜನ್ಮ ಹೊಂದಿ (ಹುಟ್ಟಿ) ತಾನು ಹಿಂದೆ ಮಾಡುತ್ತಿದ್ದ ಯೋಗಾಭ್ಯಾಸವನ್ನು

ಮುಂದುವರಿಸಿ ಸದ್ಗತಿ ಹೊಂದುತ್ತಾನೆ. ಒಮ್ಮೆ ಯೋಗಾಭ್ಯಾಸವನ್ನು ಮಾಡಲು ಪ್ರಾರಂಭಿಸಿದವನು ಜನ್ಮಜನ್ಮಾಂತರದಲ್ಲಿಯಾದರೂ ಯೋಗಸಿದ್ಧಿಯನ್ನು ಪಡೆದೇ ಪಡೆಯುವನು ಎಂದು ಪರಮಾತ್ಮನು ಭರವಸೆ ನೀಡಿದ್ದಾನೆ.

V **ಆತ್ಮಚಿಂತನರೂಪಧ್ಯಾನಯೋಗಕ್ಕಿಂತ ಪರಮಾತ್ಮಚಿಂತನರೂಪ ಭಕ್ತಿ ಯೋಗವು ಅತ್ಯಂತ ಶ್ರೇಷ್ಠವಾದುದು (ಶ್ಲೋಕ -47)**

ಸರ್ವೇಶ್ವರನಾದ ಪರಮಾತ್ಮನು ಜೀವಾತ್ಮನಿಗಿಂತ ಅತ್ಯಂತ ಮೇಲಾದವನು, ಆದ್ದರಿಂದ ಕೇವಲ ಆತ್ಮಧ್ಯಾನ ಮಾಡಿ ಜೀವಾತ್ಮಸಾಕ್ಷಾತ್ಕಾರವನ್ನು ಪಡೆಯುವುದಕ್ಕಿಂತ ಪರಮಾತ್ಮನನ್ನು ಶ್ರದ್ಧಾಭಕ್ತಿಗಳಿಂದ ಉಪಾಸನೆ ಮಾಡಿ ಭಗವತ್ಸಾಕ್ಷಾತ್ಕಾರ ಪಡೆಯುವುದು ಅತ್ಯಂತ ಮೇಲಾದುದು. ಅಂದರೆ **ಆತ್ಮಚಿಂತನರೂಪಧ್ಯಾನಯೋಗಕ್ಕಿಂತ ಪರಮಾತ್ಮ ಚಿಂತನರೂಪಭಕ್ತಿಯೋಗವು ಅತ್ಯಂತ ಶ್ರೇಷ್ಠವಾದುದು ಎಂದು ಪರಮಾತ್ಮನು (ಈ ಅಧ್ಯಾಯದ ಕೊನೆಯ 47ನೇ ಶ್ಲೋಕದಲ್ಲಿ) ಉಪದೇಶ ಮಾಡಿದ್ದಾನೆ.''**

ಮುಂದಿನ ಆರು ಅಧ್ಯಾಯಗಳಲ್ಲಿ ಭಕ್ತಿಯೋಗವು ಉಪದೇಶಿಸಲ್ಪಡುತ್ತದೆ. ಈ ಅಧ್ಯಾಯದಲ್ಲಿ ಕರ್ಮಯೋಗಿಯು ಅನುಷ್ಠಿಸುವ ಆತ್ಮಚಿಂತನರೂಪಧ್ಯಾನ ಯೋಗದ ವಿಧಿಗಳೂ, ಸಾಧನೆಗಳೂ, ಅದರಿಂದ ಲಭಿಸುವ ಸಮದರ್ಶಿತ್ವವೂ, ಯೋಗಸಿದ್ಧಿಯೂ ಮತ್ತು ಪರಮಾತ್ಮಚಿಂತನರೂಪಭಕ್ತಿಯೋಗದ ಪರಮ ಶ್ರೇಷ್ಠತೆಯೂ ತಿಳಿಸಲ್ಪಟ್ಟಿದೆ.

★★★★

# ಭಗವದ್ಗೀತೆ

## ಎರಡನೆಯ ಷಟ್ಕ

## ಅಧ್ಯಾಯಗಳು 7 ರಿಂದ 12

ಗೀತೆಯ ಮೊದಲ ಆರು ಅಧ್ಯಾಯಗಳಲ್ಲಿ ಪರಮಾತ್ಮನು ಕರ್ಮಯೋಗ, ಜ್ಞಾನಯೋಗಗಳನ್ನು ವಿವರಿಸಿ ತಿಳಿಸಿದ್ದಾನೆ. 7ನೇ ಅಧ್ಯಾಯದಿಂದ 12 ರವರೆಗಿನ 6 ಅಧ್ಯಾಯಗಳಲ್ಲಿ ಭಕ್ತಿಯೋಗವನ್ನು ವಿವರಿಸಿ ತಿಳಿಸುತ್ತಾನೆ. ಆತ್ಮಧ್ಯಾನಕ್ಕಿಂತ ಪರಮಾತ್ಮನನ್ನು ಭಕ್ತಿಯಿಂದ ಉಪಾಸನೆ ಮಾಡುವುದೇ ಶ್ರೇಷ್ಠವೆಂದು ಪರಮಾತ್ಮನು ಮೇಲೆಯೇ ತಿಳಿಸಿದ್ದಾನೆ. ಪರಮಾತ್ಮನಲ್ಲಿ ಅತ್ಯಂತ ಪ್ರೀತಿಹೊಂದಿ ಅವನನ್ನು ಉಪಾಸನೆ ಮಾಡುವವನು ಭಗವಂತನನ್ನು ಹೊಂದಬಲ್ಲನು ಎಂದು ವೇದಾಂತ ವಾಕ್ಯಗಳು ತಿಳಿಸಿವೆ. ಯಾರಿಗೆ ಪರಮಾತ್ಮನಲ್ಲಿ ಅತ್ಯಂತ ಪ್ರೀತಿಯಿದೆಯೋ ಅವನು ಪರಮಾತ್ಮನನ್ನು ಪ್ರೀತಿಯಿಂದ ಉಪಾಸನೆ ಮಾಡಬಲ್ಲನು; ಅವನನ್ನು ಪರಮಾತ್ಮನು ಪ್ರೀತಿಯಿಂದ ಅನುಗ್ರಹಿಸುತ್ತಾನೆ; ಅದರ ಫಲವಾಗಿ ಅವನು ಪರಮಾತ್ಮನನ್ನು ಹೊಂದಬಲ್ಲನು. ಪರಮಾತ್ಮನಲ್ಲಿ ಅಧಿಕವಾದ ಪ್ರೀತಿ ಹೊಂದಿ ಅವನನ್ನು ತೈಲದಾರೆಯಂತೆ ಎಡೆಬಿಡದೆ ಪ್ರೀತಿಯಿಂದ ಸ್ಮರಿಸುತ್ತಾ ಉಪಾಸನೆ ಮಾಡುವುದೇ ಭಕ್ತಿಯೋಗವು. ಹೀಗೆ ಪ್ರೀತಿಯಿಂದ ಕೂಡಿದ ಭಗವಂತನ ನಿರಂತರ ಸ್ಮರಣೆಯನ್ನು ಧ್ರುವಾಸ್ಮೃತಿ ಎಂದೂ, ಭಕ್ತಿರೂಪಾಪನ್ನಜ್ಞಾನವೆಂದೂ ತಿಳಿಸಿದ್ದಾರೆ. ಈ ಭಕ್ತಿಯೋಗವನ್ನು ಪರಮಾತ್ಮನು ಮುಂದೆ 7 ರಿಂದ 12 ನೇ ಅಧ್ಯಾಯದವರೆಗಿನ 6 ಅಧ್ಯಾಯಗಳಲ್ಲಿ ಉಪದೇಶಿಸಿದ್ದಾನೆ.

★ ★ ★ ★

# ಭಗವದ್ಗೀತೆ ಅಧ್ಯಾಯ 7

## ಜ್ಞಾನವಿಜ್ಞಾನಯೋಗ

### ಗೀತಾರ್ಥಸಂಗ್ರಹಶ್ಲೋಕ ||

ಸ್ವಯಾಥಾತ್ಮ್ಯಂ ಪ್ರಕೃತ್ಯಾಸ್ಯ
ತಿರೋಧಿಶ್ಶರಣಾಗತಿಃ ।
ಭಕ್ತಭೇದಃ ಪ್ರಬುದ್ಧಸ್ಯ
ಶ್ರೈಷ್ಠ್ಯಂ ಸಪ್ತಮೋಉಚ್ಯತೆ ||

ಈ ಶ್ಲೋಕದಲ್ಲಿ ಭಗವದ್ಗೀತೆಯ 7ನೇಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

| | | |
|---|---|---|
| ಸ್ವಯಾಥಾತ್ಮ್ಯಂ | - | ಪರಮಾತ್ಮನ ನಿಜಸ್ವರೂಪವೂ, |
| ಪ್ರಕೃತ್ಯಾಸ್ಯತಿರೋಧಿಃ | - | ಪ್ರಕೃತಿಯ ಮಾಯೆಯಿಂದ ಅವನ ನಿಜ ಸ್ವರೂಪವು ಮರೆಸಲ್ಪಟ್ಟಿರುವುದೂ, |
| ಶರಣಾಗತಿಃ, | - | ಅದನ್ನು ಹೋಗಲಾಡಿಸಲು ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯವು ಎಂಬುದೂ, |
| ಭಕ್ತಭೇದಃ, | - | ಭಕ್ತರ ವಿವಿಧತೆಯೂ, |
| ಪ್ರಬುದ್ಧಸ್ಯ ಶ್ರೈಷ್ಠ್ಯಂ | - | ಜ್ಞಾನಿಯಾದ ಭಕ್ತನ ಹಿರಿಮೆಯೂ, |
| ಸಪ್ತಮೋ ಉಚ್ಯತೇ | - | ಏಳನೆಯ ಅಧ್ಯಾಯದಲ್ಲಿ ಹೇಳಲ್ಪಡುತ್ತದೆ. |

ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

## I ಪರಮಾತ್ಮನ ನಿಜಸ್ವರೂಪದ ವಿವರಣೆ (ಶ್ಲೋಕಗಳು 1 ರಿಂದ 12)

ಎಲ್ಲರೂ ಪರಮಾತ್ಮನನ್ನು ಸಾಕ್ಷಾತ್ಕರಿಸಲು ಸಾಧ್ಯವಿಲ್ಲ, ಸಹಸ್ರಾರು ಮನುಷ್ಯರಲ್ಲಿ ಯಾವನೋ ಒಬ್ಬನು ಪರಮಾತ್ಮನನ್ನು ಹೊಂದಲು ಪ್ರಯತ್ನಿಸುತ್ತಾನೆ. ಹಾಗೆ ಯತ್ನಮಾಡುವ ಸಹಸ್ರಾರು ಮನುಷ್ಯರಲ್ಲಿ ಯಾವನೋ ಒಬ್ಬನು ಅವನನ್ನು ತತ್ವತಃ ಅರಿಯಲು ಶಕ್ತನಾಗುತ್ತಾನೆ.

ಈ ಅಧ್ಯಾಯದಲ್ಲಿ ಪರಮಾತ್ಮನು ಮೊದಲು ತನ್ನ ಸ್ವರೂಪವನ್ನು ವಿವರಿಸಿ ತಿಳಿಸಿದ್ದಾನೆ. ಪರಮಾತ್ಮನ ನಿಜಸ್ವರೂಪವನ್ನು ಅರಿಯುವುದೇ ಜ್ಞಾನವು . ಜಗತ್ತಿನೊಂದಿಗೆ ಸೇರಿರುವ ಅವನ ಚಿದಚಿದ್ವಿಶಿಷ್ಟರೂಪವನ್ನು ಅರಿಯುವುದೇ ವಿಜ್ಞಾನವು. ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಮನಸ್ಸು, ಬುದ್ಧಿ ಮತ್ತು ಅಹಂಕಾರ ಎಂಬ ಎಂಟು ವಿಧರೂಪಗಳಿಂದ ಕೂಡಿರುವ ಈ ಜಗತ್ತು ಅವನ ಸ್ವತ್ತಾಗಿ ಅವನಿಗೆ ಶೇಷಭೂತವಾಗಿದೆ. ಇದು ಅವನ ಅಪರಾಪ್ರಕೃತಿಯು ಅಥವಾ ಕೀಳಾದ ಪ್ರಕೃತಿಯು. ಈ ಅಚೇತನಪ್ರಕೃತಿಗಿಂತ ಮೇಲಾದ ಜೀವರೂಪ ಪ್ರಕೃತಿಯು ಅವನ ಪರಾಪ್ರಕೃತಿಯು. ಈ ಪರಾ ಮತ್ತು ಅಪರಾ (ಚೇತನ ಮತ್ತು ಅಚೇತನ) ಎಂಬ ಎರಡು ಪ್ರಕೃತಿಗಳ ಮಿಶ್ರಣದಿಂದ ಈ ಸಮಸ್ತ ಜಗತ್ತೂ, ಸಮಸ್ತ ಪ್ರಾಣಿಗಳೂ ಉಂಟಾಗಿವೆ. ಅವೆಲ್ಲವೂ ದಾರದಲ್ಲಿ ಪೋಣಿಸಲ್ಪಟ್ಟ ಮಣಿಗಳಂತೆ ಪರಮಾತ್ಮನಿಗೆ ಶರೀರವಾಗಿ ಇರುವುದರಿಂದ ಪರಮಾತ್ಮನೇ ಸಮಸ್ತಪದಾರ್ಥಗಳಿಗೂ ಜೀವಜಂತುಗಳಿಗೂ ಅಂತರಾತ್ಮನಾಗಿಯೂ, ಕಾರಣನಾಗಿಯೂ, ಆಧಾರನಾಗಿಯೂ, ಸ್ವಾಮಿಯಾಗಿಯೂ ಇದ್ದಾನೆ. ಆದ್ದರಿಂದ ಸಮಸ್ತವೂ, ಸಮಸ್ತ ಪದಗಳಿಂದ ಹೇಳಲ್ಪಡುವವನೂ ಅವನೇ ಆಗಿದ್ದಾನೆ.

## II ಪ್ರಕೃತಿಯ ಮಾಯೆಯಿಂದ ಪರಮಾತ್ಮನ ನಿಜಸ್ವರೂಪವು ಮರೆಸಲ್ಪಟ್ಟಿದೆ. (ಶ್ಲೋಕ 13)

ಭಗವಂತನ ಸ್ವರೂಪದ ಜ್ಞಾನವು ಪ್ರಕೃತಿಸಂಬಂಧದಿಂದ ಮೋಹಗೊಂಡ ಚೇತನರಿಗೆ ಉಂಟಾಗುವುದಿಲ್ಲ, ಪರಮಾತ್ಮನ ನಿಜಸ್ವರೂಪವನ್ನು ಅರಿಯುವುದು ಬಹಳಕಷ್ಟ, ಏಕೆಂದರೆ ತ್ರಿಗುಣಗಳಿಂದ ಕೂಡಿರುವ ಈ ಪ್ರಕೃತಿಯು ಪರಮಾತ್ಮನ ನಿಜಸ್ವರೂಪವನ್ನು ಮರೆಸಿ ತನ್ನ

ನಶ್ವರವಾದ ಸ್ವರೂಪದಲ್ಲಿ ಜೀವರಿಗೆ ಭೋಗ್ಯತಾಬುದ್ಧಿಯನ್ನು ಉಂಟುಮಾಡುತ್ತದೆ. ಭಗವಂತನಿಂದಲೇ ಉಂಟಾಗಿರುವ ಈ ಪ್ರಕೃತಿಯ ಮಾಯೆಯನ್ನು ದಾಟುವುದು ಬಹಳ ಕಷ್ಟ

III **ಪರಮಾತ್ಮನಲ್ಲಿ ಶರಣಾದರೆ ಪ್ರಕೃತಿಯ ಮಾಯೆಯನ್ನು ದಾಟಬಹುದು-(ಶ್ಲೋಕ 14)**

ಪ್ರಕೃತಿಯ ಮಾಯೆಯನ್ನು ಹೋಗಲಾಡಿಸಿಕೊಳ್ಳಲು ಮಾರ್ಗವುಂಟು.

**"ನನ್ನಿಂದ ಉಂಟಾಗಿರುವ, ತ್ರಿಗುಣಗಳಿಂದ ಕೂಡಿರುವ ಈ ಮಾಯೆಯನ್ನು ಯಾರೂ ದಾಟಲಾರರು. ಆದರೆ ಯಾರು ನನ್ನನ್ನೇ ಶರಣಾಗಿ ಆಶ್ರಯಿಸುತ್ತಾರೋ ಅವರು ಈ ಮಾಯೆಯನ್ನು ದಾಟಬಲ್ಲರು"**- ಎಂದು (ಈ ಅಧ್ಯಾಯದ 14ನೇ ಶ್ಲೋಕದಲ್ಲಿ) ತನ್ನಲ್ಲಿ ಶರಣಾಗುವವರಿಗೆಲ್ಲ ಪರಮಾತ್ಮನು ಭರವಸೆ ನೀಡಿದ್ದಾನೆ.

IV **ಭಗವದ್ಭಕ್ತರ ವಿವಿಧತೆ- (ಶ್ಲೋಕಗಳು 15-16)**

ಭಗವಂತನಲ್ಲಿ ಅನೇಕರು ಭಕ್ತಿ ಹೊಂದುವುದಿಲ್ಲ, ಇದಕ್ಕೆ ಅವರವರ ಅಜ್ಞಾನ ಮತ್ತು ದುಷ್ಕರ್ಮಗಳೇ ಕಾರಣವೆಂದೂ, ಮೂಢರೂ, ನರಾಧಮರೂ, ಮಾಯೆಯಿಂದ ಅಪಹೃತವಾದ ಜ್ಞಾನವುಳ್ಳವರೂ, ರಾಕ್ಷಸಪ್ರವೃತ್ತಿಉಳ್ಳವರೂ ಪರಮಾತ್ಮನನ್ನು ಭಜಿಸುವುದಿಲ್ಲವೆಂದೂ ಪರಮಾತ್ಮನು ತಿಳಿಸಿದ್ದಾನೆ. ಸತ್ಕರ್ಮಗಳನ್ನು ಮಾಡುವ ಕೆಲವರು ಪರಮಾತ್ಮನಲ್ಲಿ ಭಕ್ತಿಹೊಂದಿ ಅವನನ್ನು ಪೂಜಿಸುತ್ತಾರೆ. ಅವರು ನಾಲ್ಕು ವಿಧವಾಗಿ ಇದ್ದಾರೆ. ಕಳೆದುಹೋದ ಹಣವನ್ನು ಮತ್ತೆ ಪಡೆಯಲು ಆಸೆ ಹೊಂದಿ ಅದಕ್ಕಾಗಿ ಪರಮಾತ್ಮನನ್ನು ಪೂಜಿಸುವವನು **ಆರ್ತನು.** ಹೊಸದಾಗಿ ಹಣವನ್ನು ಹೊಂದಲು ಆಸೆ ಹೊಂದಿ ಅದಕ್ಕಾಗಿ ಪರಮಾತ್ಮನನ್ನು ಪೂಜಿಸುವವನು **ಅರ್ಥಾರ್ಥಿ**- ಆತ್ಮ ಸಾಕ್ಷಾತ್ಕಾರವನ್ನು ಇಚ್ಛಿಸಿ ಅದಕ್ಕಾಗಿ ಪರಮಾತ್ಮನನ್ನು ಪೂಜಿಸುವವನು **ಜಿಜ್ಞಾಸು.** ಭಗವಂತನನ್ನೇ ಹೊಂದಲು ಇಚ್ಛಿಸುವವನು **ಜ್ಞಾನಿ.**

V **ಜ್ಞಾನಿಯಾದ ಭಕ್ತನ ಶ್ರೇಷ್ಠತೆ (ಶ್ಲೋಕಗಳು 17-30)**

ಮೇಲೆ ತಿಳಿಸಿದ ನಾಲ್ಕು ವಿಧವಾದ ಭಕ್ತರೂ ಶ್ರೇಷ್ಠರಾದವರೇ. ಆದರೆ ಅವರಲ್ಲಿ ಜ್ಞಾನಿಯಾದ ಭಕ್ತನೇ ಅತ್ಯಂತ ಮೇಲಾದವನು. ಮಿಕ್ಕ

ತ್ರಿವಿಧ ಭಕ್ತರೂ ತಾವು ಇಚ್ಛಿಸುವ ಫಲಪ್ರಾಪ್ತಿಗಾಗಿ ಪರಮಾತ್ಮನನ್ನು ಪ್ರಾರ್ಥಿಸುವುದರಿಂದ ಅವರು ಪ್ರಾರ್ಥನೆಯ ಕಾಲದಲ್ಲೂ ಮತ್ತು ಅನಂತರವೂ ತಾವು ಇಚ್ಛಿಸುವ ಆ ವಸ್ತುಗಳನ್ನೇ ಚಿಂತಿಸುತ್ತಿರುವರೇ ವಿನಹಃ ಅವರ ಮನಸ್ಸು ಭಗವಂತನ ಸ್ಮರಣೆಯಲ್ಲಿ ನಿಲ್ಲುವುದಿಲ್ಲ, ಆದರೆ ಜ್ಞಾನಿಯಾದ ಭಕ್ತನು ಹಾಗಿಲ್ಲದೆ ಭಗವಂತನನ್ನೇ ಹೊಂದಬೇಕೆಂಬ ಇಚ್ಛೆ ಹೊಂದಿರುವುದರಿಂದ ಪ್ರಾರ್ಥನೆಯ ಕಾಲದಲ್ಲೂ, ಅನಂತರವೂ ಸರ್ವದಾ ಭಗವಂತನನ್ನೇ ಪ್ರೀತಿಯಿಂದಲೂ ಭಕ್ತಿಯಿಂದಲೂ ಸ್ಮರಿಸುತ್ತಿರುವನು. ಪರಮಾತ್ಮನೂ ಕೂಡ ತನ್ನನ್ನು ಅತ್ಯಧಿಕವಾಗಿ ಪ್ರೀತಿಸುವ ಜ್ಞಾನಿಯಾದ ಆ ಭಕ್ತನನ್ನು ಅಧಿಕವಾಗಿ ಪ್ರೀತಿಸಿ ಅನುಗ್ರಹಿಸುತ್ತಾನೆ.

"ಅರ್ಜುನ, ನನ್ನನ್ನು ಆರ್ತ, ಅರ್ಥಾರ್ಥಿ, ಜಿಜ್ಞಾಸು ಮತ್ತು ಜ್ಞಾನಿ ಎಂಬ ನಾಲ್ಕು ವಿಧವಾದ ಪುಣ್ಯಕರ್ಮಿಗಳು ಭಜಿಸುತ್ತಾರೆ. ಅವರಲ್ಲಿ ನನ್ನೊಬ್ಬನಲ್ಲೇ ಭಕ್ತಿ ಹೊಂದಿ ನನ್ನೊಂದಿಗೆ ನಿತ್ಯಯೋಗವುಳ್ಳ ಜ್ಞಾನಿಯೇ ಶ್ರೇಷ್ಠನಾದವನು. ಜ್ಞಾನಿಯಾದ ಭಕ್ತನಿಗೆ ನಾನು ಅತ್ಯಂತ ಪ್ರಿಯನು. ಹಾಗೆಯೇ ಅವನೂ ಕೂಡ ನನಗೆ ಅತ್ಯಂತ ಪ್ರಿಯನು" - ಎಂದು ಪರಮಾತ್ಮನು (ಈ ಅಧ್ಯಾಯದ 16 ಮತ್ತು 17 ನೇ ಶ್ಲೋಕಗಳಲ್ಲಿ) ತಿಳಿಸಿದ್ದಾನೆ.

ಆದರೆ ಭಗವಂತನೇ ತನಗೆ ಸರ್ವಸ್ವವೆಂಬ ಜ್ಞಾನಹೊಂದಿ, ಅವನನ್ನು ಉಪಾಸನೆ ಮಾಡುತ್ತಾ ಅವನಲ್ಲಿ ಶರಣಾಗುವ ಜ್ಞಾನಿಯಾದ ಭಕ್ತನು ಈ ಜಗತ್ತಿನಲ್ಲಿ ಲಭಿಸುವುದು ಬಹಳ ದುರ್ಲಭ ಎಂದು (19ನೇ ಶ್ಲೋಕದಲ್ಲಿ) ತಿಳಿಸಿದ್ದಾನೆ. ಇದಕ್ಕೆ ಅನೇಕ ಕಾರಣಗಳಿವೆ. ಅನೇಕ ಮಂದಿ ಭಗವಂತನನ್ನು ಪೂಜಿಸುವುದೇ ಇಲ್ಲ, ಅವರು ತಮ್ಮ ವಿಷಯ ಕಾಮನೆಗಳನ್ನು ಪಡೆಯುವುದಕ್ಕಾಗಿ ಅನ್ಯದೇವತೆಗಳನ್ನು ಪೂಜಿಸುತ್ತಾರೆಯೇ ವಿನಹಃ ಆಯಾ ದೇವತೆಗಳಲ್ಲಿ ಅಂತರಾತ್ಮನಾಗಿ ಇರುವ, ತಮ್ಮ ಇಷ್ಟಾರ್ಥಗಳನ್ನು ಅವರ ಮೂಲಕ ನೆರವೇರಿಸುತ್ತಿರುವ ಪರಮಾತ್ಮನನ್ನು ಪೂಜಿಸುವುದಿಲ್ಲ,

ಅನೇಕರು ಪರಮಾತ್ಮನ ವಿಭವ ಸ್ವರೂಪವನ್ನು ಅರಿಯದಿರುವುದರಿಂದ ಅವನ ಅವತಾರ ಕಾಲಗಳಲ್ಲೂ ಅವನನ್ನು ಆಶ್ರಯಿಸುವುದಿಲ್ಲ,

ಬಹುಮಂದಿ ಜನರು ಹುಟ್ಟುವಾಗಲೇ ಪೂರ್ವಜನ್ಮದ ವಾಸನೆ ಹೊಂದಿದವರಾಗಿ ಇರುತ್ತಾರೆ. ಅವರು ಈ ಜನ್ಮದಲ್ಲೂ ಹಿಂದಿನ ಜನ್ಮದಲ್ಲೂ

ಅನುಭವಿಸಿದ ವಿಷಯಗಳಲ್ಲಿಯೇ ಆಸಕ್ತಿ ಹೊಂದಿದವರಾಗಿ ಇರುತ್ತಾರೆಯೇ ವಿನಹ ಭಗವಂತನನ್ನು ಆಶ್ರಯಿಸುವುದಿಲ್ಲ, ಆದ್ದರಿಂದ ಜ್ಞಾನಿಯಾದ ಭಕ್ತರಾಗಬೇಕಾದರೆ, ಅನೇಕ ಜನ್ಮಗಳಲ್ಲಿ ಪುಣ್ಯಕರ್ಮಗಳನ್ನು ಮಾಡುತ್ತಿದ್ದರೆ, ಅವರಿಗೆ ಪೂರ್ವಜನ್ಮದ ಪಾಪಗಳು ನಾಶವಾಗುತ್ತವೆ. ಅವರು ತಮ್ಮ ಪುಣ್ಯಕರ್ಮಗಳ ಫಲವಾಗಿ ಪರಮಾತ್ಮನಲ್ಲಿ ಶ್ರದ್ಧಾಭಕ್ತಿಗಳನ್ನು ಹೊಂದಿ, ಅವನನ್ನು ಭಕ್ತಿಯಿಂದ ಭಜಿಸುವರು ಮತ್ತು ಮುಂದಿನ ಜನ್ಮದಲ್ಲಿ ಹುಟ್ಟುವಾಗಲೇ ಭಗವಂತನ ಸ್ಮರಣೆ ಹೊಂದಿ ಜ್ಞಾನಿಯಾದ ಭಕ್ತರಾಗಲು ಅರ್ಹತೆ ಪಡೆಯುವರು ಎಂದು ಪರಮಾತ್ಮನು ತಿಳಿಸಿದ್ದಾನೆ.

ಈ ಅಧ್ಯಾಯದಲ್ಲಿ ಪರಮಾತ್ಮನ ನಿಜಸ್ವರೂಪ ಜ್ಞಾನವೂ, ಅವನು ಚಿದಚಿದ್ವಿಶಿಷ್ಟನಾಗಿರುವ ವಿಜ್ಞಾನವೂ ತಿಳಿಸಲ್ಪಟ್ಟಿದೆ.

★ ★ ★ ★

# ಭಗವದ್ಗೀತೆ ಅಧ್ಯಾಯ 8

## ಅಕ್ಷರಬ್ರಹ್ಮಯೋಗ

### ಗೀತಾರ್ಥಸಂಗ್ರಹ ಶ್ಲೋಕ 12

ಐಶ್ವರ್ಯಾಕ್ಷರಯಾಥಾತ್ಮ್ಯ

ಭಗವಚ್ಚರಣಾರ್ಥಿನಾಂ ।

ವೇದ್ಯೋಪಾದೇಯ ಭಾವಾನಾಂ

ಅಷ್ಟಮೇ ಭೇದ ಉಚ್ಯತೇ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ 8ನೆಯ ಅಧ್ಯಾಯದ ಸಾರಾರ್ಥವು ತಿಳಿಸಿದೆ.

ಐಶ್ವರ್ಯ ಅಕ್ಷರಯಾಥಾತ್ಮ್ಯ ಭಗವತ್ ಚರಣಾರ್ಥಿನಾಂ -

ಅಂದರೆ ಐಶ್ವರ್ಯವನ್ನು ಇಚ್ಛಿಸಿ ಅದಕ್ಕಾಗಿ ಭಗವಂತನನ್ನು ಪೂಜಿಸುವ ಆರ್ತ ಮತ್ತು ಅರ್ಥಾರ್ಥಿ ಎಂಬ ಐಶ್ವರ್ಯಾರ್ಥಿಗಳೂ, ಆತ್ಮಸಾಕ್ಷಾತ್ಕಾರ ಹೊಂದಲು ಇಚ್ಛಿಸುವ ಕೈವಲ್ಯಾರ್ಥಿಯೂ, ಮತ್ತು ಭಗವಂತನ ಚರಣಕಮಲಗಳನ್ನು (ಸಾಕ್ಷಾತ್ಕಾರವನ್ನು) ಇಚ್ಛಿಸುವ ಭಗವತ್ ಚರಣಾರ್ಥಿಯೂ - ಅಂದರೆ

ಈ ಮೂರುವಿಧ ಭಕ್ತರುಗಳೂ

ವೇದ್ಯ ಉಪಾದೇಯ ಭಾವಾನಾಂ ಭೇದಃ ತಿಳಿದುಕೊಳ್ಳಬೇಕಾದ ಮತ್ತು ಸ್ವೀಕರಿಸಿ ಆಚರಿಸಬೇಕಾದ ವಿಷಯಗಳೂ, ಅವುಗಳಲ್ಲಿರುವ ಭೇದಗಳೂ, (ಅವರ ಅಂತ್ಯಕಾಲದ ಸ್ಮೃತಿಯ ಮಹಿಮೆಯೂ) - ಅವರು ಪರಮಾತ್ಮನನ್ನು ಧ್ಯಾನಿಸುವ ರೀತಿಯೂ, ಅವರು ಹೊಂದುವ ಫಲವೂ,

ಅಕ್ಷರೋ ಉಚ್ಯತೇ - 8ನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ. ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

## I ತ್ರಿವಿಧ ಭಕ್ತರುಗಳು ತಿಳಿಯಬೇಕಾದ ವಿಷಯಗಳು - (ಶ್ಲೋಕಗಳು 1 ರಿಂದ 8)

ಕೈವಲ್ಯಾರ್ಥಿಯು ಬ್ರಹ್ಮ ಅಂದರೆ ಶುದ್ಧ ಆತ್ಮ ಸ್ವರೂಪವನ್ನೂ, ಅಧ್ಯಾತ್ಮ ಅಂದರೆ ಪ್ರಕೃತಿಯನ್ನೂ, ಮತ್ತು ಕರ್ಮ ಅಂದರೆ ಸಮಸ್ತ ಜೀವಿಗಳ ಉತ್ಪತ್ತಿ ಕಾರ್ಯಗಳನ್ನೂ ತಿಳಿದುಕೊಳ್ಳಬೇಕು. ಐಶ್ವರ್ಯಾರ್ಥಿಯು ಅಚಿದ್ವಸ್ತುಗಳನ್ನೂ, ಅವುಗಳ ಕ್ಷಣಿಕತೆಯನ್ನೂ, ಅಧಿದೈವವನ್ನೂ ಅಂದರೆ ಆತ್ಮನನ್ನೂ ತಿಳಿದುಕೊಳ್ಳಬೇಕು. ಯಜ್ಞಾದಿಗಳ ಮೂಲಕ ಆರಾಧಿಸಲ್ಪಡುವವನಾದ ಭಗವಂತನನ್ನು ಐಶ್ವರ್ಯಾರ್ಥಿ, ಕೈವಲ್ಯಾರ್ಥಿ ಮತ್ತು ಭಗವತ್ ಚರಣಾರ್ಥಿ ಎಂಬ ತ್ರಿವಿಧ ಭಕ್ತರುಗಳೂ ಅಂದರೆ ಸರ್ವ ಮಾನವರೂ ತಿಳಿದುಕೊಂಡು ಅವನನ್ನು ಪೂಜಿಸಬೇಕು ಎಂದು ಪರಮಾತ್ಮನು ತಿಳಿಸುತ್ತಾನೆ.

ಅಷ್ಟು ಮಾತ್ರವಲ್ಲದೆ ಈ ತ್ರಿವಿಧ ಭಕ್ತರುಗಳೂ, ಸಮಸ್ತ ಮಾನವರೂ ಪರಮಾತ್ಮನನ್ನು ಸ್ಮರಿಸಿಕೊಂಡು, ತಮ್ಮ ಶರೀರವನ್ನು ತ್ಯಾಗಮಾಡಿದರೆ ಅವರು ಪರಮಾತ್ಮನನ್ನೇ ಹೊಂದುತ್ತಾರೆ. ಇದರಲ್ಲಿ ಸಂದೇಹವೇ ಇಲ್ಲವೆಂದು ಕೃಷ್ಣ ಪರಮಾತ್ಮನು (ಈ ಅಧ್ಯಾಯದ 5ನೇ ಶ್ಲೋಕದಲ್ಲಿ) ಸ್ಪಷ್ಟವಾಗಿ ತಿಳಿಸಿದ್ದಾನೆ. ಆದರೆ ಜೀವನರಿಗೆ ಅಂತ್ಯಕಾಲದಲ್ಲಿ ಪರಮಾತ್ಮನ ಸ್ಮೃತಿ ಸುಲಭವಾಗಿ ಲಭಿಸಲಾರದು. ಪರಮಾತ್ಮನನ್ನು ಸರ್ವಕಾಲದಲ್ಲೂ ಸ್ಮರಿಸುತ್ತಿದ್ದರೆ ಆಗ ಅವರಿಗೆ ಅವರ ಅಂತ್ಯಕಾಲದಲ್ಲೂ ಪರಮಾತ್ಮನ ಸ್ಮರಣೆಯುಂಟಾಗಿ ಅವರು ಪರಮಾತ್ಮನನ್ನು ಹೊಂದಬಲ್ಲರು. ಆದ್ದರಿಂದ ''ಸರ್ವದಾ ನನ್ನನ್ನು ಸ್ಮರಿಸಿಕೊಂಡು ವಿಹಿತ ಕರ್ತವ್ಯ ಕರ್ಮಗಳನ್ನು ಮಾಡು. ಆಗ ನನ್ನಲ್ಲಿ ಇಡಲ್ಪಟ್ಟ ಮನೋಬುದ್ಧಿಗಳುಳ್ಳವನಾಗಿ ನೀನು ನನ್ನನ್ನೇ ಹೊಂದುತ್ತೀಯೆ. ಇದರಲ್ಲಿ ಸಂದೇಹವೇ ಇಲ್ಲ'' ಎಂದು ಪರಮಾತ್ಮನು ಸಮಸ್ತ ಮಾನವರಿಗೂ (ಈ ಅಧ್ಯಾಯದ 7ನೇ ಶ್ಲೋಕದಲ್ಲಿ) ಉಪದೇಶ ನೀಡಿದ್ದಾನೆ.

II & III ತ್ರಿವಿಧ ಭಕ್ತರು ಪರಮಾತ್ಮನನ್ನು ಉಪಾಸನೆ ಮಾಡುವ ಕ್ರಮವನ್ನೂ ಮತ್ತು ಅವರು ಹೊಂದುವ ಫಲಗಳನ್ನೂ ಪರಮಾತ್ಮನು ತಿಳಿಸುತ್ತಾನೆ. (ಶ್ಲೋಕಗಳು 9 ರಿಂದ 28)

ಐಶ್ವರ್ಯಾರ್ಥಿಯು ಐಶ್ವರ್ಯ ಪಡೆಯುವುದಕ್ಕಾಗಿ ಪರಮಾತ್ಮನನ್ನು ಭಕ್ತಿಯಿಂದ ಸರ್ವದಾ ಸ್ಮರಿಸುತ್ತಾ ಇದ್ದರೆ, ಐಶ್ವರ್ಯವನ್ನು ಪಡೆಯುವನು. ಆದರೆ ಅವನು ಹೊಂದುವ ಫಲವು ಶಾಶ್ವತವಲ್ಲ, ಅವನು ಮತ್ತೆ ಪುನರ್ಜನ್ಮ ಹೊಂದುವನು. ಕೈವಲ್ಯಾರ್ಥಿಯು ''ಓಂ'' ಎಂಬ ಅಕ್ಷರವನ್ನು ಉಚ್ಚರಿಸುತ್ತಾ ಹೃದಯಕಮಲದಲ್ಲಿರುವ ಅಕ್ಷರರೂಪಿಯಾದ ಆತ್ಮನನ್ನು ಧ್ಯಾನಿಸುತ್ತಾ ಇದ್ದರೆ, ಅವನು ಆತ್ಮಸಾಕ್ಷಾತ್ಕಾರ ಹೊಂದಿ ಪರಮಗತಿಯನ್ನು ಪಡೆಯುವನು. ಅವನಿಗೆ ಪುನರ್ಜನ್ಮವಿಲ್ಲ, ಆದರೆ ಅವನು ಹೊಂದುವ ಫಲವು ಉತ್ಕೃಷ್ಟವಾದುದಲ್ಲ, ಜ್ಞಾನಿಯಾದ ಭಕ್ತನು ಅಂದರೆ ಭಗವತ್ ಚರಣಾರ್ಥಿಯು ಸರ್ವದಾ ಬೇರೆ ಏನನ್ನೂ ಸ್ಮರಿಸದೆ, ಭಗವಂತನನ್ನೇ ಅತ್ಯಂತ ಪ್ರೀತಿಯಿಂದ ಸ್ಮರಿಸುತ್ತಾ ಅವನ ನಿತ್ಯಸಂಬಂಧವನ್ನು ಅಪೇಕ್ಷಿಸುತ್ತಿದ್ದರೆ ಅವನಿಗೆ ಪರಮಾತ್ಮನು ಸುಲಭವಾಗಿ ಲಭಿಸುತ್ತಾನೆ. ತನ್ನ ಭಕ್ತನಾದ ಅವನನ್ನು ಬಿಟ್ಟಿರಲಾರದೆ ಪರಮಾತ್ಮನೇ ಅವನನ್ನು ರಕ್ಷಿಸುತ್ತಾನೆ. ಅವನು ಅತ್ಯುತ್ತಮವಾದ, ಶಾಶ್ವತವಾದ, ಸರ್ವೋತ್ಕೃಷ್ಟವಾದ ಫಲವನ್ನು ಹೊಂದುವನು.

**ಯೋಗಿಗಳು ಶರೀರವನ್ನು ಬಿಟ್ಟಮೇಲೆ ಹೋಗುವ ಮಾರ್ಗವನ್ನು ಪರಮಾತ್ಮನು ತಿಳಿಸುತ್ತಾನೆ.**

ಪುಣ್ಯಮಾಡಿದವರೂ, ಐಶ್ವರ್ಯಾರ್ಥಿಗಳಾದ ಭಕ್ತರೂ ಶರೀರವನ್ನು ಬಿಟ್ಟ ಮೇಲೆ ಕೃಷ್ಣಗತಿ ಎಂಬ ಧೂಮಾದಿಮಾರ್ಗದಲ್ಲಿ ಹೋಗುವರು, ಇವರಿಗೆ ಪುನರ್ಜನ್ಮವುಂಟು. ಕೈವಲ್ಯಾರ್ಥಿಗಳೂ, ಜ್ಞಾನಿಯಾದ ಭಕ್ತರುಗಳೂ ಶರೀರವನ್ನು ಬಿಟ್ಟಮೇಲೆ ಶುಕ್ಲಗತಿ ಎಂಬ ಅರ್ಚಿರಾದಿಮಾರ್ಗದಲ್ಲಿ ಹೋಗುವರು. ಇವರಿಗೆ ಪುನರ್ಜನ್ಮವಿಲ್ಲ, ಆದರೆ ಕೈವಲ್ಯಾರ್ಥಿಯು ಹೊಂದುವ ಸ್ಥಾನಕ್ಕಿಂತ ಭಗವತ್ ಚರಣಾರ್ಥಿಗಳು ಹೊಂದುವ ಸ್ಥಾನವು ಅತ್ಯುತ್ತಮವಾದುದು. ಆದ್ದರಿಂದ ಭಗವನ್ಮಹಾತ್ಮೆಯನ್ನು ಅರಿತು ಅರ್ಚಿರಾದಿಗತಿಚಿಂತನೆ ಮಾಡುತ್ತಾ ಜ್ಞಾನಿಯಾದ

ಭಕ್ತನಾಗಿ ಪರಮಪದವನ್ನು ಪಡೆಯುವಂತೆ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡುತ್ತಾನೆ.

ಈ ಅಧ್ಯಾಯದಲ್ಲಿ ತ್ರಿವಿಧಭಕ್ತರು ತಿಳಿಯಬೇಕಾದ ವಿಷಯಗಳೂ, ಅವರು ಧ್ಯಾನಮಾಡುವ ರೀತಿಯೂ ಮತ್ತು ಹೊಂದುವ ಫಲವೂ ತಿಳಿಸಲ್ಪಟ್ಟಿದೆ. ಮತ್ತು ಸರ್ವರೂ ಅಂತ್ಯಕಾಲದಲ್ಲಿ ಭಗವಂತನನ್ನು ಸ್ಮರಿಸಿದರೆ ಅವನನ್ನು ಪಡೆಯಬಲ್ಲರು ಎಂಬ ವಿಷಯವೂ ತಿಳಿಸಲ್ಪಟ್ಟಿದೆ.

★★★★

# ಭಗವದ್ಗೀತೆ ಅಧ್ಯಾಯ 9

## ರಾಜವಿದ್ಯಾರಾಜಗುಹ್ಯಯೋಗ

### ಗೀತಾರ್ಥಸಂಗ್ರಹ ಶ್ಲೋಕ 13

ಸ್ವಮಾಹಾತ್ಮ್ಯಂ ಮನುಷ್ಯತ್ವೇ
ಪರತ್ವಂಚ ಮಹಾತ್ಮನಾಂ।
ವಿಶೇಷೋ ನವಮೋ ಯೋಗೋ
ಭಕ್ತಿರೂಪಃ ಪ್ರಕೀರ್ತಿತಃ॥

ಈ ಶ್ಲೋಕದಲ್ಲಿ ಭಗವದ್ಗೀತೆಯ 9ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

ಸ್ವಮಾಹಾತ್ಮ್ಯಂ = ತನ್ನ ಅಸಾಮಾನ್ಯವಾದ ಮಹಾತ್ಮೆಯನ್ನೂ ಚ ಮನುಷ್ಯತ್ವೇ ಪರತ್ವಂ = ತಾನು ಕೃಷ್ಣನಾಗಿ, ಮನುಷ್ಯನಾಗಿ ಅವತರಿಸಿರುವಾಗಲೂ ತನ್ನ ಪರತ್ವಸ್ವಭಾವವನ್ನು ಬಿಡದೇ ಇರುವುದನ್ನೂ ; ಮಹಾತ್ಮನಾಂ ವಿಶೇಷಃ = ಮಹಾತ್ಮರಾದ ಭಕ್ತರ ಶ್ರೇಷ್ಠತೆಯೂ, ಭಕ್ತಿರೂಪಯೋಗಃ = ಭಕ್ತಿಯೋಗವೂ ನವಮೋ ಪ್ರಕೀರ್ತಿತಃ= 9ನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ.

ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

I ಭಗವಂತನ ಮಹಾತ್ಮೆ (ಶ್ಲೋಕ 1-10)

ಭಗವಂತನನ್ನು ಹೊಂದಲು ಮಾಡುವ ಭಕ್ತಿರೂಪವಾದ ಉಪಾಸನೆಯ

ಹಿರಿಮೆಯನ್ನು ಪರಮಾತ್ಮನು ಮೊದಲು ತಿಳಿಸುತ್ತಾನೆ. ಇದು ವಿದ್ಯೆಗಳಿಗೆಲ್ಲಾ ಮೇಲಾದ ವಿದ್ಯೆಯಾಗಿರುವುದರಿಂದ ಇದಕ್ಕೆ ರಾಜವಿದ್ಯೆಯೆಂದು ಹೆಸರು. ಭಗವಂತನಲ್ಲಿ ಭಕ್ತಿ ಇಲ್ಲದವರಿಗೆ ಇದು ಪರಮಗೋಪ್ಯವಾಗಿರುವುದರಿಂದ ಇದಕ್ಕೆ ರಾಜಗುಹ್ಯವೆಂದು ಹೆಸರು. ಇದು ಪರಮ ಪವಿತ್ರವೂ, ಶ್ರೇಷ್ಠವಾದ ಧರ್ಮವೂ, ಸುಖವಾಗಿ ಆಚರಿಸಬಲ್ಲ, ನಾಶರಹಿತವಾದ, ಪರಮಪವಿತ್ರವಾದ ಉಪಾಯವೂ ಆಗಿದೆ.

ಅನಂತರ ಪರಮಾತ್ಮನು ತನ್ನ ಮಹಾತ್ಮೆಯನ್ನು ತಿಳಿಸುತ್ತಾನೆ- ಭಕ್ತಿರೂಪ ಉಪಾಸನೆಯಿಂದ ಹೊಂದಲ್ಪಡುವ ಪರಮ ಪುರುಷನಾದ ಪರಮಾತ್ಮನು ಸಮಸ್ತ ಜಗತ್ತಿನಲ್ಲೂ, ಅದರಲ್ಲಿರುವ ಸಮಸ್ತ ವಸ್ತುಗಳಲ್ಲೂ ಅಂತರ್ಯಾಮಿಯಾಗಿ ವಾಸಿಸಿಕೊಂಡು ಅವುಗಳಿಗೆ ಯಜಮಾನನಾಗಿ ಅವುಗಳನ್ನು ನಿಯಮಿಸಿಕೊಂಡು ಇದ್ದಾನೆ. ಆದರೆ ಅವನು ಅವುಗಳನ್ನು ಆಶ್ರಯಿಸಿಕೊಂಡಿಲ್ಲ, ಸಮಸ್ತ ಜಗತ್ತಿನ ಮತ್ತು ಸರ್ವವಸ್ತುಗಳ ಸ್ಥಿತಿ ಪ್ರವೃತ್ತಿಗಳೂ ಮತ್ತು ಉತ್ಪತ್ತಿ ಪ್ರಳಯಗಳೂ ಭಗವಂತನ ಸಂಕಲ್ಪದಿಂದಲೇ ಉಂಟಾಗುತ್ತವೆ. ಆದರೆ ಜಗತ್ತಿನಲ್ಲಿರುವ ವಿಷಮಸೃಷ್ಟಿಗಳಿಗೂ, ಜೀವಜೀವರುಗಳ ಜನ್ಮದಲ್ಲಿರುವ ಕೀಳು ಮೇಲಿನ ಬೇಧಗಳಿಗೂ ಪರಮಾತ್ಮನು ಕಾರಣನಲ್ಲ, ಇದಕ್ಕೆಲ್ಲಾ ಅವರವರ ಪೂರ್ವಕೃತ ಕರ್ಮಗಳೇ ಕಾರಣ, ಚೇತನರನ್ನು ಅವರವರ ಪೂರ್ವಜನ್ಮದ ಕರ್ಮಗಳಿಗೆ ಅನುಗುಣವಾಗಿ ಪರಮಾತ್ಮನು ಸೃಷ್ಟಿಸುತ್ತಾನೆ. ಇಲ್ಲಿ ಪರಮಾತ್ಮನು ತನ್ನ ಸ್ವಾಮಿತ್ವವನ್ನೂ, ಸತ್ಯ ಸಂಕಲ್ಪತ್ವವನ್ನೂ, ದೋಷರಹಿತತ್ವವನ್ನೂ ತಿಳಿಸಿದ್ದಾನೆ.

## II ಭಗವದವತಾರದ ಮಹಿಮೆ (ಶ್ಲೋ. 11-12)

ಸರ್ವರೂ ತನ್ನನ್ನು ಆಶ್ರಯಿಸಿ ಉಜ್ಜೀವಿಸಲಿ ಎಂದು ಪರಮಾತ್ಮನು ಕೃಷ್ಣನಾಗಿ ಅವತರಿಸಿ ತನ್ನ ಪರತ್ವ ಸ್ವಭಾವವನ್ನು ಬಿಡದೆ ಸರ್ವಶಕ್ತನಾಗಿ, ಸರ್ವಾಶ್ರಯಣೀಯನಾಗಿ ಇದ್ದಾಗ್ಯೂ , ಮೂಢರಾದ ಜನರು ಅವನ ಸರ್ವೇಶ್ವರತ್ವವನ್ನು ಅರಿಯದೆ ಅವನನ್ನು ಮನುಷ್ಯನನ್ನಾಗಿ ಭಾವಿಸುತ್ತಾರೆ. ಆದರೆ ಮಹಾತ್ಮರು ಅವನ ಸರ್ವೇಶ್ವರತ್ವವನ್ನು ಅರಿತು ಅವನಲ್ಲಿ ಭಕ್ತಿ ಮಾಡಿ ಉಜ್ಜೀವಿಸುತ್ತಾರೆ.

## III ಮಹಾತ್ಮರಾದ ಭಕ್ತರ ಶ್ರೇಷ್ಠತೆ-(ಶ್ಲೋಕಗಳು-13-25)

ಪರಮಾತ್ಮನು ತನ್ನಲ್ಲಿ ಭಕ್ತಿ ಮಾಡುವ ಭಕ್ತರನ್ನು ತಾನೇ ರಕ್ಷಿಸುವುದಾಗಿ ಭರವಸೆ ನೀಡಿದ್ದಾನೆ. ಕೆಲವು ಮಹಾತ್ಮರು ಪರಮಾತ್ಮನಲ್ಲಿ ಭಕ್ತಿ ಹೊಂದಿ, ಇತರ ವಿಷಯಗಳ ಕಡೆಗೆ ಮನಸ್ಸನ್ನು ತಿರುಗಿಸದೆ, ಸರ್ವದಾ ಭಗವಂತನ ನಾಮ ಸಂಕೀರ್ತನೆ ಮಾಡಿಕೊಂಡು, ಅವನನ್ನು ಭಕ್ತಿಯಿಂದ ನಮಸ್ಕರಿಸಿ ಉಪಾಸನೆ ಮಾಡುತ್ತಾರೆ. ಮತ್ತೆ ಕೆಲವರು ವಿಶ್ವಶರೀರಿಯಾದ ಪರಮಾತ್ಮನನ್ನು ಪೂಜಿಸುತ್ತಾರೆ. ಅವರಿಗೆ ಸಮಸ್ತವೂ ಭಗವಂತನೇ ಆಗಿದ್ದಾನೆ, ಯಜ್ಞ, ಮಂತ್ರ, ಹೋಮ, ಹವಿಸ್ಸು, ಅಗ್ನಿ ಎಲ್ಲವೂ ಭಗವಂತನೇ; ಜಗತ್ತಿನ ಸೃಷ್ಟಿ ಕರ್ತನೂ, ಜಗತ್ತಿಗೆಲ್ಲಾ ತಂದೆಯೂ, ತಾಯಿಯೂ, ಪಿತಾಮಹನೂ ಎಲ್ಲವೂ ಭಗವಂತನೇ; ವೇದದ ಓಂಕಾರವೂ, ಚತುರ್ವಿಧ ವೇದಗಳೂ, ಜಗತ್ತಿನ ಆದಿಬೀಜವೂ, ಜಗತ್ತಿನ ಸರ್ವಗತಿಯೂ, ರಕ್ಷಕನೂ, ಮಿತ್ರನೂ ಎಲ್ಲವೂ ಅವನೇ; ಲೋಕಕ್ಕೆ ಅಮೃತಪ್ರಾಯನೂ, ಮೃತ್ಯುವೂ, ಜಗತ್ತಿನ ಸದಸದ್ವಸ್ತುಗಳೂ ಎಲ್ಲವೂ ಪರಮಾತ್ಮನೇ ಎಂಬ ಅನುಸಂಧಾನದೊಂದಿಗೆ ಅವನನ್ನು ಉಪಾಸನೆ ಮಾಡಿ ಅವನನ್ನು ಹೊಂದುತ್ತಾರೆ. ಇತರ ದೇವತೆಗಳನ್ನೂ, ಭೂತಗಳನ್ನೂ ಯಾಗಯಜ್ಞಾದಿಗಳ ಮೂಲಕ ಪೂಜಿಸುವವರು ಆಯಾ ದೇವತೆಗಳನ್ನೂ ಭೂತಗಳನ್ನೂ ಹೊಂದುತ್ತಾರೆ, ಆದರೆ ಭಗವಂತನನ್ನು ಭಜಿಸುವ ಭಕ್ತರು ಭಗವಂತನನ್ನೇ ಹೊಂದುತ್ತಾರೆ. ಅವರಿಗೆ ಪುನರ್ಜನ್ಮವಿಲ್ಲ "**ಸರ್ವದಾ ಬೇರೆ ಯಾವುದನ್ನೂ ಇಚ್ಛಿಸದೆ ನನ್ನನ್ನೇ ಸ್ಮರಿಸಿಕೊಂಡಿರುವ ಭಕ್ತರ ಯೋಗಕ್ಷೇಮವನ್ನು ನಾನೇ ವಹಿಸಿಕೊಂಡು ಅವರನ್ನು ಅನುಗ್ರಹಿಸಿ ರಕ್ಷಿಸುತ್ತೇನೆ**" ಎಂದು ಪರಮಾತ್ಮನೇ (ಈ ಅಧ್ಯಾಯದ 22ನೆಯ ಶ್ಲೋಕದಲ್ಲಿ) ಭರವಸೆ ನೀಡಿದ್ದಾನೆ.

## IV ಭಕ್ತಿಯೋಗದ ವಿವರಣೆ (ಶ್ಲೋಕಗಳು 26 - 34)

ಭಗವಂತನನ್ನು ಭಜಿಸುವುದು ಬಹಳ ಸುಲಭ. ಏಕೆಂದರೆ, "ಒಂದು ತುಳಸೀ ಎಲೆಯನ್ನೋ, ಒಂದು ಪುಷ್ಪವನ್ನೋ, ತೀರ್ಥವನ್ನೋ ಯಾರು ಭಕ್ತಿಯಿಂದ ನನಗೆ ಸಮರ್ಪಿಸಿದರೂ ಅದನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ". ಎಂದು ಶ್ರಿ ಕೃಷ್ಣ ಪರಮಾತ್ಮನು (ಈ ಅಧ್ಯಾಯದ 26ನೇ ಶ್ಲೋಕದಲ್ಲಿ) ತಿಳಿಸಿದ್ದಾನೆ. ಆದ್ದರಿಂದ

ಭಗವಂತನನ್ನು ಭಜಿಸಲು ಹೃದಯದಲ್ಲಿ ಭಕ್ತಿಯಿದ್ದರೆ ಸಾಕು. ಬೇರೆ ಯಾವ ವಸ್ತುವನ್ನೂ ಕಷ್ಟಪಟ್ಟು ಹುಡುಕಬೇಕಾಗಿಲ್ಲ.

ಶ್ರೀಕೃಷ್ಣ ಪರಮಾತ್ಮನು ಇಲ್ಲಿ ಬಹಳ ಮುಖ್ಯವಾದ ಉಪದೇಶವನ್ನು ಈ ಅಧ್ಯಾಯದ 27ನೇ, ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾನೆ-"ನೀನು ಮಾಡುವ ಸಮಸ್ತ ಕಾರ್ಯಗಳನ್ನೂ ಅಂದರೆ ನೀನು ಶರೀರ ನಿರ್ವಹಣೆಗಾಗಿ ಮಾಡುವ ಸಮಸ್ತ ಲೌಕಿಕ ಕರ್ಮಗಳನ್ನೂ, ದೇಹ ಪೋಷಣೆಗಾಗಿ ನೀನು ಭುಜಿಸುವ ಭೋಜನಾದಿಗಳನ್ನೂ, ನೀನು ಮಾಡುವ ಹೋಮ, ತಪಸ್ಸು, ದಾನ ಮುಂತಾದ ಸಮಸ್ತ ವೈದಿಕ, ಲೌಕಿಕ, ನಿತ್ಯನೈಮಿತ್ತಿಕ ಕರ್ಮಗಳೆಲ್ಲವನ್ನೂ ನನಗೆ ಅರ್ಪಣವಾಗಿ ಮಾಡು" ಎಂದು ಪರಮಾತ್ಮನು ಉಪದೇಶ ಮಾಡಿದ್ದಾನೆ. ಆದ್ದರಿಂದ ಭಕ್ತಿಯೋಗಾಭ್ಯಾಸಮಾಡಲು ಯಾವ ಹೊಸಕರ್ಮವನ್ನೂ ಹುಡುಕಿ ಮಾಡಬೇಕಾಗಿಲ್ಲ, ಯಾವಾಗ ಯಾವ ಯಾವ ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳನ್ನು ಮಾಡಬೇಕಾಗಿ ಬರುತ್ತದೆಯೋ ಅವುಗಳನ್ನು ಭಗವತ್ ಕೈಂಕರ್ಯವಾಗಿ ಭಾವಿಸಿ ಪ್ರೀತಿಯಿಂದಲೂ ಭಕ್ತಿಯಿಂದಲೂ ಮಾಡುವುದೇ ಭಕ್ತಿ ಮಾರ್ಗವು. ಆದ್ದರಿಂದ ಮಾನವರು ಮಾಡುವ ತಮ್ಮ ಲೌಕಿಕ, ವೈದಿಕ, ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳೆಲ್ಲವನ್ನೂ ಭಗವಂತನ ಕೈಂಕರ್ಯವೆಂದು ಭಾವಿಸಿ ಭಗವದಾರಾಧನರೂಪವಾಗಿ ಪ್ರೀತಿಭಕ್ತಿಗಳಿಂದ ಆಚರಿಸುವಂತೆ ಪರಮಾತ್ಮನು ಉಪದೇಶ ಮಾಡಿದ್ದಾನೆ.

ಭಕ್ತರು ಯಾರಾಗಿದ್ದರೂ ಅವರ ಜಾತಿ, ಆಕಾರ, ಸ್ವಭಾವ, ಜ್ಞಾನಾದಿಗಳನ್ನು ನೋಡದೆ ಪರಮಾತ್ಮನು ಅವರಿಗೆ ಸದ್ಗತಿಯನ್ನು ಅನುಗ್ರಹಿಸಿ ರಕ್ಷಿಸುತ್ತಾನೆ . ದುರಾಚಾರವುಳ್ಳವನೂ ಭಗವಂತನಲ್ಲಿ ಪ್ರೀತಿ ಹೊಂದಿ, ಬೇರೊಂದನ್ನೂ ಅಪೇಕ್ಷಿಸದೆ, ಭಗವಂತನನ್ನು ಭಜಿಸಿದರೆ ಪರಮಾತ್ಮನು ತನಗೆ ಭಕ್ತನಾದ ಅವನ ತಪ್ಪುಗಳೆಲ್ಲವನ್ನು ಕ್ಷಮಿಸಿ ಅವನನ್ನು ರಕ್ಷಿಸುತ್ತಾನೆ. ಭಗವಂತನನ್ನು ಭಜಿಸುವುದರಿಂದ ಅವನ ದುರಾಚಾರಾದಿಗಳು ನಾಶವಾಗಿ ಅವನೂ ಶೀಘ್ರದಲ್ಲಿಯೇ ಭಗವದ್ಭಕ್ತನೂ, ಧರ್ಮಾತ್ಮನೂ ಆಗುತ್ತಾನೆ. ತನ್ನ ಭಕ್ತನು ಎಂದೂ ನಾಶಹೊಂದುವುದಿಲ್ಲವೆಂದು ಹೇಳಿ, ಅನಿತ್ಯವೂ, ಸುಖರಹಿತವೂ

ಆದ ಈ ಲೋಕದಲ್ಲಿ ಶರೀರವನ್ನು ಪಡೆದ ಮೇಲೆ ತನ್ನನ್ನು ಭಜಿಸಿ ತನ್ನ ಅನುಗ್ರಹ ಪಡೆದು ಉಜ್ಜೀವಿಸುವಂತೆ ಈ ಜಗತ್ತಿನ ಸಮಸ್ತ ಮಾನವರಿಗೂ- ಪರಮಾತ್ಮನು ಉಪದೇಶ ನೀಡಿದ್ದಾನೆ.

V ಕೊನೆಯದಾಗಿ ಈ ಅಧ್ಯಾಯದ 34 ನೇ ಶ್ಲೋಕದಲ್ಲಿ ಭಕ್ತಿಯೋಗದ ನಾಲ್ಕು ಮುಖ್ಯವಾದ ಅಭ್ಯಾಸಗಳನ್ನು ಪರಮಾತ್ಮನು ಉಪದೇಶಿಸಿದ್ದಾನೆ

''ನನ್ನನ್ನು ಮನಸ್ಸಿನಲ್ಲಿ ಸರ್ವದಾ ಸ್ಮರಿಸಿಕೊಂಡಿರು; ನನ್ನನ್ನು ಪ್ರೀತಿ ಭಕ್ತಿಗಳಿಂದ ಧ್ಯಾನ ಮಾಡುತ್ತಿರು; ನನ್ನನ್ನು ಪ್ರೀತಿಯಿಂದಲೂ, ಭಕ್ತಿಯಿಂದಲೂ ಉಪಾಸನೆ (ಪೂಜೆ) ಮಾಡು; ನನ್ನನ್ನು ನಮ್ರಭಾವದಿಂದ ನಮಸ್ಕರಿಸು; ಹೀಗೆ ನನ್ನನ್ನೇ ಮುಖ್ಯ ಆಧಾರವಾಗಿ ಹೊಂದಿ ಮನಸ್ಸನ್ನು ನನ್ನಲ್ಲಿ ನೆಲೆಗೊಳಿಸಿದರೆ ನನ್ನನ್ನೇ ಹೊಂದುತ್ತೀಯೆ'' ಎಂದು ಪರಮಾತ್ಮನು ಭಕ್ತಿಯೋಗದ ಅಭ್ಯಾಸಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ.

ಆದ್ದರಿಂದ ಸರ್ವದಾ ಭಗವಂತನನ್ನು ಪ್ರೀತಿ ಭಕ್ತಿಗಳಿಂದ ಸ್ಮರಿಸಿಕೊಂಡು ಸಮಸ್ತ ಲೌಕಿಕವೈದಿಕನಿತ್ಯನೈಮಿತ್ತಿಕಕರ್ತವ್ಯಕರ್ಮಗಳನ್ನು ಅವನ ಪೂಜೆ ಎಂದು ಭಕ್ತಿಯಿಂದಲೂ ಸಂತೋಷದಿಂದಲೂ ಮಾಡುತ್ತಾ ಅವನ ಉಪಾಸನೆ ಮಾಡುವುದೇ ಭಕ್ತಿಯೋಗವು.

ಈ ಅಧ್ಯಾಯದಲ್ಲಿ ಪರಮಶ್ರೇಷ್ಠವೂ, ರಾಜವಿದ್ಯೆಯೂ, ರಾಜಗುಹ್ಯವೂ ಆದ ಭಕ್ತಿಯೋಗವು ವಿವರಿಸಲ್ಪಟ್ಟಿದೆ.

★★★★

# ಭಗವದ್ಗೀತೆ ಅಧ್ಯಾಯ ೧೦

## ವಿಭೂತಿಯೋಗ

### ಗೀತಾರ್ಥಸಂಗ್ರಹ ಶ್ಲೋಕ 14

ಸ್ವಕಲ್ಯಾಣ ಗುಣಾನನ್ತ್ಯ
ಕೃತ್ಸ್ನಸ್ವಾಧೀನತಾಮತಿಃ ।
ಭಕ್ತ್ಯುತ್ಪತ್ತಿವಿವೃದ್ಧ್ಯರ್ಥಾ
ವಿಸ್ತೀರ್ಣಾ ದಶಮೋದಿತಾ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ ೧೦ನೇ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

ಭಕ್ತ್ಯುತ್ಪತ್ತಿವಿವೃದ್ಧ್ಯರ್ಥಾ - ಪರಮಾತ್ಮನಲ್ಲಿ ಭಕ್ತಿಯು ಉತ್ಪನ್ನವಾಗುವುದಕ್ಕಾಗಿಯೂ ಮತ್ತು ಉತ್ಪನ್ನವಾದ ಭಕ್ತಿಯು ವೃದ್ಧಿಹೊಂದುವುದಕ್ಕಾಗಿಯೂ,

ಸ್ವಕಲ್ಯಾಣಗುಣಾನನ್ತ್ಯಕೃತ್ಸ್ನಸ್ವಾಧೀನತಾಮತಿಃ - ತನ್ನ ಅನಂತವಾದ ಕಲ್ಯಾಣ ಗುಣಗಳೂ, ಜಗತ್ತಿನಲ್ಲಿರುವ ಸಮಸ್ತವೂ ತನ್ನ ಅಧೀನದಲ್ಲಿದೆ ಎಂಬ ವಿಷಯವೂ,

ವಿಸ್ತೀರ್ಣಾದಶಮೋದಿತಾ - ಹತ್ತನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ಪರಮಾತ್ಮನಿಂದ ಹೇಳಲ್ಪಟ್ಟಿದೆ.

ಈ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

ಇಲ್ಲಿಯವರೆಗೆ ಭಕ್ತಿಯೋಗವು ವಿವರವಾಗಿ ತಿಳಿಸಲ್ಪಟ್ಟಿತು. ಈ ಹತ್ತನೆಯ ಅಧ್ಯಾಯದಲ್ಲಿ ಭಗವಂತನ ನಿರಂಕುಶವಾದ ಐಶ್ವರ್ಯಗಳ ಮತ್ತು ಅನಂತವಾದ ಕಲ್ಯಾಣಗುಣಗಳ ವಿವರಣೆಯೂ, ಜಗತ್ತಿನಲ್ಲಿರುವ ಸಮಸ್ತ ವಸ್ತುಗಳೂ ಪರಮಾತ್ಮನಿಂದ ಆಳಲ್ಪಟ್ಟು ಅವನಿಗೆ ಅಧೀನವಾದ ಸ್ವತ್ತಾಗಿ ಅವನ ವಿಭೂತಿಯಾಗಿ ಇವೆ ಎಂಬುದೂ ವಿವರಿಸಲ್ಪಟ್ಟಿದೆ.

**1 ಪರಮಾತ್ಮನು ತನ್ನ ಕಲ್ಯಾಣಗುಣಗಳೂ, ಐಶ್ವರ್ಯಾದಿಗಳೂ ಅನಂತವಾಗಿದೆ ಎಂಬುದನ್ನು ತಿಳಿಸುತ್ತಾನೆ (ಶ್ಲೋಕ ೧-೧೧)**

ಭಗವಂತನು ಜನ್ಮರಹಿತನಾದ ಅನಾದಿ ಪುರುಷನೆಂದೂ, ಸರ್ವಲೋಕ ಮಹೇಶ್ವರನೆಂದೂ ಅರಿತು ಅನುಸಂಧಾನ ಮಾಡುವವರ ಪಾಪಗಳು ನಾಶವಾಗುತ್ತವೆ ಮತ್ತು ಅವರಿಗೆ ಪರಮಾತ್ಮನಲ್ಲಿ ಭಕ್ತಿಯು ತಾನಾಗಿಯೇ ಉಂಟಾಗುತ್ತದೆ. ಉತ್ಪನ್ನವಾದ ಆ ಭಗವದ್ಭಕ್ತಿಯು ಪರಮಾತ್ಮನ ವಿಸ್ತಾರವಾದ ಐಶ್ವರ್ಯ, ಅವನ ಅನಂತವಾದ ಕಲ್ಯಾಣಗುಣಗಳ ಚಿಂತನೆಯಿಂದ ವೃದ್ಧಿಯಾಗುತ್ತದೆ. ಪ್ರಪಂಚದಲ್ಲಿರುವ ಸಮಸ್ತ ಜೀವಿಗಳ ಮನೋವೃತ್ತಿಗಳೂ, ವಿವಿಧ ಗುಣಗಳೂ ಭಗವಂತನ ಸಂಕಲ್ಪದಿಂದಲೇ ಉಂಟಾಗುತ್ತವೆ ಎಂಬುದನ್ನೂ 'ಜಗತ್ತಿನಲ್ಲಿರುವ 'ಜೀವಿಗಳೂ, ಅವರುಗಳ ಸೃಷ್ಟಿಸ್ಥಿತಿ ಪ್ರವೃತ್ತಿಗಳೂ ಎಲ್ಲವೂ ಭಗವಂತನ ಸಂಕಲ್ಪಕ್ಕೆ ಅಧೀನವಾಗಿರುವುದರಿಂದ, ಜಗತ್ತಿನಲ್ಲಿರುವ ಸರ್ವಸ್ವವೂ ಭಗವಂತನ ವಿಭೂತಿಗಳು ಎಂಬುದನ್ನು ತಿಳಿಯುವವರು ಭಗವಂತನಲ್ಲಿ ಧೃಢವಾದ ಭಕ್ತಿಹೊಂದಿ ಬಾಳುವರು. ಅವರಿಗೆ ಭಕ್ತಿಯು ವೃದ್ಧಿಯಾಗುತ್ತದೆ. ಅವರು ಸರ್ವದಾ ಭಗವತ್ ಚಿಂತನೆ ಮಾಡುತ್ತಾ ಪರಸ್ಪರ ಒಬ್ಬರಿಗೊಬ್ಬರು ಭಗವದ್ವಿಷಯವನ್ನು ಉಪದೇಶಿಸುತ್ತಾ ಭಗವಂತನನ್ನು ಸರ್ವದಾ ಪ್ರೀತಿಯಿಂದ ಭಜಿಸುತ್ತಾ ಇರುವರು.

**''ಸರ್ವದಾ ನನ್ನನ್ನು ಭಕ್ತಿಯಿಂದಲೂ, ಪ್ರೀತಿಯಿಂದಲೂ, ಭಜಿಸುವವರಿಗೆ ನನ್ನನ್ನು ಹೊಂದಲು ಉಪಾಯವಾದ ಬುದ್ಧಿಯೋಗವನ್ನು (ಅಂದರೆ ಭಕ್ತಿ ರೂಪಾಪನ್ನಜ್ಞಾನವನ್ನು) ನಾನೇ ಅವರಿಗೆ ಉಂಟುಮಾಡುತ್ತೇನೆ.''**
ಎಂದು ಭಗವಂತನೇ (ಈ ಅಧ್ಯಾಯದ ೧೦ನೇ ಶ್ಲೋಕದಲ್ಲಿ) ಭರವಸೆ

ಕೊಟ್ಟಿದ್ದಾನೆ. ಆ ಭಕ್ತರುಗಳ ಭಕ್ತಿಯು ಪರಮಭಕ್ತಿ ಆಗುವಂತೆ ಪರಮಾತ್ಮನೇ ಮಾಡುವುದಾಗಿ ತಿಳಿಸಿದ್ದಾನೆ.

II **ಭಗವಂತನ ಐಶ್ವರ್ಯ ಮತ್ತು ವಿಭೂತಿಗಳು (ಶ್ಲೋಕಗಳು ೧೨-೪೨)**
ಭಗವಂತನನ್ನು ಯಾವ ರೀತಿ ತಿಳಿದು ಯಾವ ರೂಪದಲ್ಲಿ ಧ್ಯಾನಿಸಬೇಕು ಎಂಬುದನ್ನೂ, ಅವನ ಐಶ್ವರ್ಯ ವಿಭೂತಿಗಳನ್ನೂ ವಿವರವಾಗಿ ವಿಸ್ತಾರವಾಗಿ ತಿಳಿಸುವಂತೆ ಅರ್ಜುನನು ಪ್ರಾರ್ಥಿಸುತ್ತಾನೆ. ಅದಕ್ಕೆ ಪರಮಾತ್ಮನು ತನ್ನ ವಿಭೂತಿಗಳು ಅನಂತವಾಗಿರುವುದರಿಂದ ಅವೆಲ್ಲವನ್ನೂ ಹೇಳಲು ಸಾಧ್ಯವಿಲ್ಲವೆಂದು ಹೇಳಿ ತನ್ನ ವಿಭೂತಿಗಳಲ್ಲಿ ಪ್ರಧಾನವಾದ ಕೆಲವನ್ನು ಮಾತ್ರ ಇಲ್ಲಿ ತಿಳಿಸುತ್ತಾನೆ.

ಸಮಸ್ತ ಪ್ರಾಣಿಗಳಿಗೆ ಅವನೇ ಅಂತರಾತ್ಮನಾಗಿ ಆಧಾರನೂ, ನಿಯಾಮಕನೂ, ಸ್ವಾಮಿಯೂ ಆಗಿದ್ದಾನೆ. ಅವುಗಳ ಆದಿಯೂ, ಮಧ್ಯವೂ, ಅಂತ್ಯವೂ ಎಲ್ಲವೂ ಅವನೇ ಆಗಿದ್ದಾನೆ. ಅಂದರೆ ಅವುಗಳ ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಅವನೇ ಕಾರಣನಾಗಿದ್ದಾನೆ. ಸಮಸ್ತ ವಸ್ತುಗಳೂ, ಅವುಗಳಲ್ಲಿ ಅಂತರಾತ್ಮನಾಗಿರುವವನೂ ತಾನೇ ಎಂದೂ, ಸಮಸ್ತ ವಸ್ತುಗಳಲ್ಲಿ ಪ್ರಧಾನವಾದ ಅಂಶವೂ ತಾನೇ ಎಂದೂ ಇಲ್ಲಿ ವಿವರಿಸಿ ತಿಳಿಸುತ್ತಾನೆ. ದ್ವಾದಶಾದಿತ್ಯರುಗಳಲ್ಲಿ ವಿಷ್ಣುವೂ, ಜ್ಯೋತಿರ್ಮಂಡಲಗಳಲ್ಲಿ ಪ್ರಕಾಶವುಳ್ಳ ಸೂರ್ಯನೂ, ಮರುತ್ತುಗಳಲ್ಲಿ ಮರೀಚಿಯೂ, ನಕ್ಷತ್ರಗಳಲ್ಲಿ ಚಂದ್ರನೂ, ವೇದಗಳಲ್ಲಿ ಸಾಮವೇದವೂ, ದೇವತೆಗಳಲ್ಲಿ ಇಂದ್ರನೂ, ಇಂದ್ರಿಯಗಳಲ್ಲಿ ಮನಸ್ಸೂ, ಭೂತಗಳಲ್ಲಿ ಬುದ್ಧಿಯೂ, ಏಕಾದಶರುದ್ರರಲ್ಲಿ ಶಂಕರನೂ, ಯಕ್ಷರಾಕ್ಷಸರಲ್ಲಿ ಕುಬೇರನೂ, ಅಷ್ಟವಸುಗಳಲ್ಲಿ ಪಾವಕವೂ, ಪರ್ವತಗಳಲ್ಲಿ ಮೇರುಪರ್ವತವೂ ಪುರೋಹಿತರಲ್ಲಿ ಮುಖ್ಯನಾದ ಬೃಹಸ್ಪತಿಯೂ, ಸೇನಾಪತಿಗಳಲ್ಲಿ ಷಣ್ಮುಖನೂ, ಜಲಾಶಯಗಳಲ್ಲಿ ಸಾಗರವೂ ಮಹರ್ಷಿಗಳಲ್ಲಿ ಭೃಗುವೂ, ವಾಕ್ಯಗಳಲ್ಲಿ ಏಕಾಕ್ಷರವಾದ ಓಂಕಾರವೂ, ಯಜ್ಞಗಳಲ್ಲಿ ಜಪಯಜ್ಞವೂ, ಸ್ಥಾವರಗಳಲ್ಲಿ ಹಿಮಾಲಯವೂ, ಸರ್ವವೃಕ್ಷಗಳಲ್ಲಿ ಅಶ್ವತ್ಥವೃಕ್ಷವೂ, ದೇವರ್ಷಿಗಳಲ್ಲಿ ನಾರದನೂ, ಗಂಧರ್ವರಲ್ಲಿ ಚಿತ್ರರಥನೂ, ಸಿದ್ಧರಲ್ಲಿ ಕಪಿಲಮುನಿಯೂ, ಕುದುರೆಗಳಲ್ಲಿ ಅಮೃತದಿಂದ ಹುಟ್ಟಿದ ಉಚ್ಛೈಶ್ರವಸ್ಸೂ, ಆನೆಗಳಲ್ಲಿ ಐರಾವತವೂ, ಮನುಷ್ಯರಲ್ಲಿ ಅಧಿಪತಿಯಾದ ರಾಜನೂ, ಆಯುಧಗಳಲ್ಲಿ ವಜ್ರಾಯುಧವೂ, ಪಶುಗಳಲ್ಲಿ ಕಾಮಧೇನುವೂ, ಸಂತಾನೋತ್ಪತ್ತಿಗೆ ಮನ್ಮಥನೂ,

ಸರ್ಪಗಳಲ್ಲಿ ವಾಸುಕಿಯೂ, ನಾಗಗಳಲ್ಲಿ ಆದಿಶೇಷನೂ, ಜಲಚರಗಳಲ್ಲಿ ವರುಣನೂ, ಪಿತೃಗಳಲ್ಲಿ ಅರ್ಯಮನೂ, ಶಿಕ್ಷೆವಿಧಿಸುವುದರಲ್ಲಿ ಯಮನೂ, ಅಸುರರಲ್ಲಿ ಪ್ರಹ್ಲಾದನೂ, ಅನರ್ಥ ಉಂಟುಮಾಡುವ ಮೃತ್ಯುವೂ, ಮೃಗಗಳಲ್ಲಿ ಸಿಂಹವೂ, ಪಕ್ಷಿಗಳಲ್ಲಿ ಗರುಡನೂ, ಚಲಿಸುವ ವಸ್ತುಗಳಲ್ಲಿ ವಾಯುವೂ, ಶಸ್ತ್ರಧಾರಿಗಳಲ್ಲಿ ರಾಮನೂ, ಅಕ್ಷಯವಾದ ಕಾಲವೂ, ಚತುರ್ಮುಖ ಬ್ರಹ್ಮನೂ, ಸಂಹಾರಮಾಡುವ ಮೃತ್ಯುವೂ, ಜನ್ಮಉಂಟು ಮಾಡುವವನೂ, ಸ್ತ್ರೀಯರಲ್ಲಿ ಲಕ್ಷ್ಮಿಯೂ, ಕೀರ್ತಿಯೂ, ವಾಣಿಯೂ, ಸ್ಮರಣಶಕ್ತಿಯೂ, ಬುದ್ಧಿಶಕ್ತಿಯೂ, ಧೈರ್ಯವೂ, ಶಾಂತಿಯೂ, ಸಾಮಗಳಲ್ಲಿ ಬೃಹತ್ಸಾಮ, ವೇದಗಳಲ್ಲಿ ಗಾಯಿತ್ರಿಯೂ, ಮಾಸಗಳಲ್ಲಿ ಮಾರ್ಗಶೀರ್ಷಮಾಸವೂ, ಋತುಗಳಲ್ಲಿ ವಸಂತಋತುವೂ, ಮೋಸದಲ್ಲಿ ದ್ಯೂತವೂ, ತೇಜಸ್ವಿಗಳ ತೇಜಸ್ಸೂ, ಜಯವೂ, ಪ್ರಯತ್ನಶೀಲತೆಯೂ, ಸಾತ್ವಿಕರ ಸತ್ವಗುಣವೂ, ವೃಷ್ಣಿಗಳಲ್ಲಿ ವಾಸುದೇವನೂ, ಪಾಂಡವರಲ್ಲಿ ಅರ್ಜುನನೂ, ಮುನಿಗಳಲ್ಲಿ ವ್ಯಾಸನೂ, ಕವಿಗಳಲ್ಲಿ ಶುಕ್ರಾಚಾರ್ಯರೂ, ದಂಡಿಸುವವರ ದಂಡವೂ, ಜಯಿಸುವ ರಾಜನೀತಿಯೂ, ರಹಸ್ಯಗಳಲ್ಲಿ ಮೌನವೂ, ಜ್ಞಾನಿಗಳ ಜ್ಞಾನವೂ - ಇವೆಲ್ಲವೂ ನಾನೇ ಆಗಿದ್ದೇನೆ. ಸಮಸ್ತ ಪ್ರಾಣಿಗಳ ಆದಿಬೀಜವೂ ನಾನೇ. ನಾನು ಅಂತರಾತ್ಮನಾಗಿ ಇಲ್ಲದ ವಸ್ತುವೇ ಇಲ್ಲವೆಂದು ಪರಮಾತ್ಮನು ತಿಳಿಸುತ್ತಾನೆ.

ಆದ್ದರಿಂದ ಯಾವ ಯಾವ ವಸ್ತುಗಳಲ್ಲಿ ಯಾವ ಯಾವ ಮಹಿಮೆ ಇದೆಯೋ ಅವೆಲ್ಲವೂ ಭಗವಂತನ ತೇಜಸ್ಸಿನ ಶಕ್ತಿಯಿಂದ ಉಂಟಾದವುಗಳಾಗಿವೆ. ಪರಮಾತ್ಮನು ಸರ್ವದರಲ್ಲಿಯೂ ಅಂತರಾತ್ಮನಾಗಿರುವುದರಿಂದ ಅವನ ದಿವ್ಯವೂ, ಕಲ್ಯಾಣಕರವೂ ಆದ ವಿಭೂತಿಗಳಿಗೆ ಕೊನೆಯೇ ಇಲ್ಲ, ಅಂದರೆ ಮುಖ್ಯವಾಗಿ ಜಗತ್ತಿನಲ್ಲಿರುವ ಸಮಸ್ತವೂ ಭಗವಂತನ ನಿಯಮನಶಕ್ತಿಯ ಒಂದು ಅಂಶದಿಂದ ಹುಟ್ಟಿದವುಗಳು ಎಂಬುದನ್ನೂ ಮತ್ತು ಅವೆಲ್ಲವೂ ಭಗವಂತನಿಂದ ಆಳಲ್ಪಟ್ಟು, ಅವನ ಸ್ವತ್ತಾಗಿ, ಅವನ ಆಧೀನದಲ್ಲಿ ಇವೆ ಎಂಬುದನ್ನು ತಿಳಿದುಕೊಳ್ಳುವಂತೆ ಪರಮಾತ್ಮನು ಅರ್ಜುನನಿಗೆ ಉಪದೇಶ ನೀಡಿದ್ದಾನೆ.

ಈ ಆಧ್ಯಾಯದಲ್ಲಿ ಪರಮಾತ್ಮನು ತನ್ನ ಕೆಲವು ಮುಖ್ಯವಾದ ವಿಭೂತಿಗಳನ್ನು ತಿಳಿಸಿದ್ದಾನೆ.

★ ★ ★ ★

# ಭಗವದ್ಗೀತೆ ಅಧ್ಯಾಯ 11

## ಗೀತಾರ್ಥಸಂಗ್ರಹ ಶ್ಲೋಕ 15

**ಏಕಾದಶೇ ಸ್ವಯಾಥಾತ್ಮ್ಯ,**
**ಸಾಕ್ಷಾತ್ಕಾರಾವಲೋಕನಮ್।**
**ದತ್ತಮುಕ್ತಂ ವಿಧಿಪ್ರಾಪ್ತ್ಯೋಃ**
**ಭಕ್ತ್ಯೇಕೋಪಾಯತಾ ತಥಾ॥**

ಈ ಶ್ಲೋಕದಲ್ಲಿ ಭಗವದ್ಗೀತೆಯ ಹನ್ನೊಂದನೆ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಏಕಾದಶೇ** - ಹನ್ನೊಂದನೆಯ ಅಧ್ಯಾಯದಲ್ಲಿ

**ಸ್ವಯಾಥಾತ್ಮ್ಯ ಸಾಕ್ಷಾತ್ಕಾರಾವ ಲೋಕನಂದತ್ತಂ** - ತನ್ನ ನಿಜಸ್ವರೂಪ ಸಾಕ್ಷಾತ್ಕಾರಕ್ಕೆ ಬೇಕಾದ ದಿವ್ಯ ಚಕ್ಷುಸ್ಸು ಭಗವಂತನಿಂದ ಅರ್ಜುನನಿಗೆ ಕೊಡಲ್ಪಟ್ಟು ವಿಶ್ವರೂಪದರ್ಶನಪ್ರಾಪ್ತಿ ಉಂಟಾದದ್ದೂ -

**ತಥಾ** - ಹಾಗೆಯೇ-ವಿಧಿಪ್ರಾಪ್ತ್ಯೋಃ ಭಕ್ತ್ಯೇಕ ಉಪಾಯತಾ ಉಕ್ತಂ - ಪರಮಾತ್ಮನ ಜ್ಞಾನ ಮತ್ತು ದರ್ಶನ ಪ್ರಾಪ್ತಿಗೆ ಭಕ್ತಿ ಒಂದೇ ಉಪಾಯ ಎಂಬುದೂ ಹೇಳಲ್ಪಟ್ಟಿದೆ.

ಭಗವದ್ಗೀತೆಯ ಈ ಹನ್ನೊಂದನೆ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ-

**ದಿವ್ಯ ಚಕ್ಷುಸ್ಸನ್ನು ಪಡೆದು ಅರ್ಜುನನು ಸಾಕ್ಷಾತ್ಕರಿಸಿದ ವಿಶ್ವರೂಪದವರ್ಣನೆ- ಭಗವಂತನಲ್ಲಿ ಅರ್ಜುನನ ಪ್ರಾರ್ಥನೆ ಮತ್ತು ಅರ್ಜುನನಿಗೆ ಭಗವಂತನ ಉಪದೇಶ-(ಶ್ಲೋಕಗಳು 1 ರಿಂದ 51)-**

ಭಗವಂತನ ಐಶ್ವರ್ಯ ವಿಭೂತಿಗಳನ್ನೆಲ್ಲ ಅವನಿಂದ ಕೇಳಿದ ಮೇಲೆ, ಅವುಗಳೊಂದಿಗೆ ಕೂಡಿರುವ ಅವನ ದಿವ್ಯ ರೂಪವನ್ನು (ಅಂದರೆ ಸರ್ವ ಚೇತನಾಚೇತನವಿಶಿಷ್ಟನಾಗಿ ಇರುವ ಮತ್ತು ಅವುಗಳೆಲ್ಲವನ್ನು ಸೃಷ್ಟಿಸುವ, ಪಾಲಿಸುವ, ಸಂಹರಿಸುವ ಮತ್ತು ಅವುಗಳಿಂದ ವಿಸಜಾತೀಯನಾಗಿರುವ ಅವನ ಪರತ್ವಾದಿ ವಿಶ್ವರೂಪವನ್ನು)ತನಗೆ ತೋರಿಸುವಂತೆ ಅರ್ಜುನನು ಪರಮಾತ್ಮನನ್ನು ಪ್ರಾರ್ಥಿಸುತ್ತಾನೆ. ಆದರೆ ಅದು ಮಾನವರ ಕಣ್ಣುಗಳಿಗೆ ಗೋಚರಿಸುವುದು ಅಸಾಧ್ಯವಾಗಿರುವುದರಿಂದ ಅರ್ಜುನನ ಭಕ್ತಿಗೆ ಸಂತೋಷ ಗೊಂಡ ಶ್ರಿಕೃಷ್ಣ ಪರಮಾತ್ಮನು ಅವನಿಗೆ ದಿವ್ಯಚಕ್ಷುಸ್ಸನ್ನು ಅನುಗ್ರಹಿಸಿ ದಿವ್ಯವಾಗಿ, ನೂರಾರು, ಸಾವಿರಾರು, ನಾನಾ ಪ್ರಕಾರವಾಗಿ, ಅಪ್ರಾಕೃತವಾಗಿ, ನಾನಾವರ್ಣ ನಾನಾಆಕೃತಿಗಳಿಂದ ಕೂಡಿದ ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ತನ್ನ ಈ ಒಂದು ರೂಪದಲ್ಲಿ ದ್ವಾದಶಾದಿತ್ಯರನ್ನೂ, ಅಷ್ಟವಸುಗಳನ್ನೂ, ರುದ್ರರನ್ನೂ, ಅಶ್ವಿನೀ ದೇವತೆಗಳನ್ನೂ, ಮರುತ್ತುಗಳನ್ನೂ ತೋರಿಸುತ್ತಾನೆ ಮತ್ತು ತನ್ನ ಈ ದೇಹದ ಒಂದು ಪ್ರದೇಶದಲ್ಲಿ ಸಚರಾಚರವಾದ ಸಮಸ್ತ ಜಗತ್ತೂ ಅಡಗಿರುವುದನ್ನು ನೋಡು-ಎಂದು ಹೇಳುತ್ತಾನೆ.

ಅರ್ಜುನನು ತಾನು ಸಾಕ್ಷಾತ್ಕರಿಸಿದ ಆ ದಿವ್ಯರೂಪವನ್ನು ಈ ರೀತಿ ವರ್ಣಿಸುತ್ತಾನೆ-ಅದು ಅನೇಕ ಮುಖಗಳೂ, ಅನೇಕ ಕಣ್ಣುಗಳೂ ಇವುಗಳಿಂದ ಕೂಡಿದ್ದಾಗಿಯೂ, ಅನೇಕ ದಿವ್ಯಾಭರಣಗಳನ್ನೂ, ಅನೇಕ ದಿವ್ಯಶಸ್ತ್ರಾಸ್ತ್ರಗಳನ್ನೂ, ಅನೇಕ ದಿವ್ಯಮಾಲೆಗಳನ್ನೂ, ದಿವ್ಯ ವಸ್ತ್ರಾದಿಗಳನ್ನೂ ಧರಿಸಿಕೊಂಡು, ದಿವ್ಯಗಂಧವನ್ನು ಲೇಪಿಸಿಕೊಂಡು, ದಿವ್ಯತೇಜಸ್ಸಿನಿಂದ ಕೂಡಿದ್ದಾಗಿಯೂ ಇದ್ದಿತು. ಅದು ಕೊನೆ ಮೊದಲಿಲ್ಲದ ಅನಂತ ರೂಪಗಳಿಂದ ಕೂಡಿದ, ಕೋಟಿಸೂರ್ಯ ಪ್ರಕಾಶವುಳ್ಳ, ಅತ್ಯಾಶ್ಚರ್ಯಕರವಾದ, ಆದಿಮಧ್ಯಅಂತಗಳಾವುವೂ ಕಾಣಿಸದ, ಅತ್ಯದ್ಭುತ ಆಕೃತಿಯಾಗಿದ್ದಿತು. ಚತುರ್ಮುಖ ಬ್ರಹ್ಮನೇ ಮೊದಲಾಗಿ ಅನೇಕ ದೇವತೆಗಳನ್ನೂ, ಮನುಷ್ಯರು ತಿರ್ಯಕ್ಕುಗಳೂ

ಮುಂತಾದ ಚೈತನ್ಯ ವಸ್ತುಗಳ ಸಮೂಹವನ್ನೂ, ಭೂಮಿ, ಆಕಾಶ, ಸ್ವರ್ಗ ನರಕಾದಿ ಭೋಗ್ಯಸ್ಥಾನಗಳನ್ನೂ ಒಳಗೊಂಡ ಸಮಸ್ತ ಜಗತ್ತೆಲ್ಲವೂ ಅದರ ಒಂದು ಅಲ್ಪಭಾಗದಲ್ಲಿ ಅಡಗಿರುವುದನ್ನೂ ಅರ್ಜುನನು ಕಂಡನು.

ಪರಮಾತ್ಮನನ್ನು ದೇವತೆಗಳೆಲ್ಲರೂ ಅಂಜಲೀ ಬದ್ಧರಾಗಿ ಸ್ತೋತ್ರ ಮಾಡುತ್ತಿರುವುದನ್ನೂ, ಋಷಿಗಳು ಮಂಗಳಾಶಾಸನ ಮಾಡುತ್ತಿರು-ವುದನ್ನೂ, ಯುದ್ಧವನ್ನು ನೋಡಲು ಬಂದ ಬ್ರಹ್ಮಾದಿ ದೇವಾಸುರ ಗಣವೆಲ್ಲಾ, ಈ ಅದ್ಭುತವೂ ಭಯಂಕರವೂ ಆದರೂಪವನ್ನು ನೋಡಿ ಅತ್ಯಂತ ಭೀತವಾಗಿರುವುದನ್ನೂ ನೋಡಿದನು. ಅಷ್ಟು ಮಾತ್ರವಲ್ಲದೆ ಯುದ್ಧರಂಗದಲ್ಲಿ ಸೇರಿದ್ದ ಧೃತರಾಷ್ಟ್ರನ ಪುತ್ರರೂ, ವೀರಸೈನಿಕರೂ, ಭೀಷ್ಮ ದ್ರೋಣ ಕರ್ಣ ಮುಂತಾದ ವೀರ ಯೋಧರೂ, ತನ್ನ ಕಡೆಯ ಪ್ರಧಾನಯೋಧರೂ ಎಲ್ಲರೂ ನದೀಪ್ರವಾಹಗಳು ಹೋಗಿ ಸಮುದ್ರದಲ್ಲಿ ಸೇರುವಂತೆಯೂ, ಮಿಡತೆಹುಳುಗಳು ತಾವಾಗಿಯೇ ತ್ವರೆಯಿಂದ ಹೋಗಿ ಅಗ್ನಿಯಲ್ಲಿ ಬೀಳುವಂತೆಯೂ, ಆ ದಿವ್ಯರೂಪದ ಬಾಯೊಳಗೆ ತಾವಾಗಿಯೇ ತ್ವರೆಯಿಂದ ಹೋಗಿ ಬಿದ್ದು ಅದರ ಹಲ್ಲುಗಳ ಮಧ್ಯದಲ್ಲಿ ಸಿಕ್ಕಿ ನಾಶವಾಗುತ್ತಿರುವುದನ್ನೂ ಕಂಡನು.

ಇವೆಲ್ಲವನ್ನು ಕಂಡು ಅರ್ಜುನನು ಅತ್ಯಂತ ಭಯಗೊಂಡು ದಿಕ್ಕು ಕಾಣದವನಾಗುತ್ತಾನೆ ಮತ್ತು, '' ಈ ಘೋರ ರೂಪವುಳ್ಳ ನೀನು ಯಾರು? ಎಲ್ಲವನ್ನು ಏತಕ್ಕಾಗಿ ಹೀಗೆ ನಾಶಗೊಳಿಸುತ್ತಿದ್ದೀಯೆ? ನಿನಗೆ ನಮಸ್ಕರಿಸುತ್ತೇನೆ. ದಯವಿಟ್ಟು ಪ್ರಸನ್ನನಾಗಿ ನನಗೆ ಇದರ ಕಾರಣವನ್ನು ತಿಳಿಸು''- ಎಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾನೆ.

ಈ ರೀತಿ ಭಯಗೊಂಡ ಅರ್ಜುನನಿಗೆ ಪರಮಾತ್ಮನು ತನ್ನ ಜಗತ್ ಸಂಹಾರ ಕಾರ್ಯವನ್ನು ತಿಳಿಸುತ್ತಾನೆ. ಜಗತ್ತನ್ನು ಸೃಷ್ಟಿಸಿ ರಕ್ಷಿಸುತ್ತಿರುವ ತಾನೇ ಕಾಲಪುರುಷನಾಗಿ ಲೋಕಗಳನ್ನೆಲ್ಲಾ ಸಂಹರಿಸಲು ಪ್ರವರ್ತಿಸಿರುವುದಾಗಿಯೂ, ಶತ್ರು ಸೈನ್ಯದಲ್ಲಿರುವ ಯೋಧರನ್ನೂ, ಭೀಷ್ಮದ್ರೋಣ ಕರ್ಣರನ್ನೂ, ಇನ್ನೂ ಇತರ ಯೋಧರನ್ನೂ ಆಗಲೇ ತಾನು ಸಂಹರಿಸಿ ಆಗಿದೆ ಎಂದೂ, ಈಗ ಅರ್ಜುನನು ಅವರನ್ನು ಕೊಲ್ಲುವುದು ಹೇಗೆ ಎಂದು ಚಿಂತಿಸಬೇಕಾಗಿಲ್ಲವೆಂದೂ,

ಧರ್ಮಾಧರ್ಮ ಭಯವನ್ನೂ ಹೊಂದದೆ ಅವನು ಕೇವಲ ನಿಮಿತ್ತಮಾತ್ರಕ್ಕೆ ಯುದ್ಧಮಾಡಿ, ಜಯಹೊಂದಿ, ಕೀರ್ತಿಯನ್ನೂ ಹೊಂದಿ, ರಾಜ್ಯವನ್ನೂ ಅನುಭವಿಸಬಹುದು ಎಂದೂ ಪರಮಾತ್ಮನು ಅರ್ಜುನನಿಗೆ ಉಪದೇಶ ಮಾಡುತ್ತಾನೆ.

ಇದನ್ನೆಲ್ಲಾ ಕೇಳಿ, ಪರಮಾತ್ಮನ ವಿಶ್ವರೂಪವನ್ನು ನೋಡಿ, ಅತ್ಯಂತ ಭೀತನಾಗಿದ್ದ ಅರ್ಜುನನು ಪರಮಾತ್ಮನಿಗೆ ಮತ್ತೆ ಮತ್ತೆ ನಮಸ್ಕಾರ ಮಾಡುತ್ತಾನೆ-''ನಿನಗೆ ಹಿಂದೆ ಮುಂದೆ ಅಕ್ಕ ಪಕ್ಕ ಎಲ್ಲ ಕಡೆಯೂ ಅನೇಕ ಸಲ ನಮಸ್ಕಾರ ಮಾಡುತ್ತೇನೆ. ನೀನೇ ಆದಿದೇವನೂ, ಪುರಾಣಪುರುಷನೂ, ಈ ವಿಶ್ವಕ್ಕೆಲ್ಲಾ ಪರಮಾಧಾರನೂ ಆಗಿದ್ದೀಯೆ. ನಿನಗಿಂತ ಮೇಲಾದವರು ಯಾರೂ ಇಲ್ಲ, ಇಂತಹ ನಿನ್ನ ಮಹಿಮೆಯನ್ನರಿಯದೆ ನಿನ್ನನ್ನು ಕೇವಲ ನನ್ನ ಸ್ನೇಹಿತನೆಂದು ಭಾವಿಸಿ, ''ಕೃಷ್ಣಾ, ಯಾದವಾ'' ಎಂದು ಕರೆಯುತ್ತಾ ನಿನ್ನೊಂದಿಗೆ ಅತ್ಯಂತ ಸಲಿಗೆಯಿಂದ ವರ್ತಿಸುತ್ತಿದ್ದೆನು. ನೀನು ಸರ್ವಚರಾಚರಲೋಕಕ್ಕೆ ತಂದೆಯಾಗಿದ್ದೀಯೆ. ನೀನೇ ಲೋಕಕ್ಕೆಲ್ಲಾ ಗುರುವಾಗಿಯೂ. ಪೂಜ್ಯತಮನಾಗಿಯೂ ಇದ್ದೀಯೆ. ತ್ರಿಲೋಕದಲ್ಲೂ ನಿನಗೆ ಸಮನಾದವರೂ, ನಿನಗಿಂತ ಮೇಲಾದವರೂ ಯಾರೂ ಇಲ್ಲ, ನೀನು ಅಪ್ರತಿಮ ಪ್ರಭಾವವುಳ್ಳವನಾಗಿದ್ದೀಯೆ. ಆದ್ದರಿಂದ ನಿನಗೆ ಪ್ರಣಾಮ ಮಾಡುತ್ತೇನೆ. ತಂದೆಯು ತನ್ನ ಮಗನನ್ನೂ, ಸ್ನೇಹಿತನು ತನ್ನ ಸ್ನೇಹಿತನನ್ನೂ ಕ್ಷಮಿಸಿ ರಕ್ಷಿಸುವಂತೆ ನೀನು ನನ್ನ ಅಪರಾಧಗಳನ್ನೆಲ್ಲಾ ಕ್ಷಮಿಸಿ ನನ್ನನ್ನು ರಕ್ಷಿಸಬೇಕು. ಅತ್ಯದ್ಭುತವೂ, ಅತ್ಯುಗ್ರವೂ ಆದ ನಿನ್ನ ವಿಶ್ವರೂಪವನ್ನು ನೋಡಿ ಪ್ರೀತನೂ ಅತ್ಯಂತ ಭೀತನೂ ಆಗಿರುವೆನು. ಆದ್ದರಿಂದ ನಿನ್ನ ಹಿಂದಿನ ಸೌಮ್ಯರೂಪವನ್ನು ಧರಿಸಿ ಅನುಗ್ರಹಿಸು'' -ಎಂದು ಪರಮಾತ್ಮನನ್ನು ಅರ್ಜುನನು ಪ್ರಾರ್ಥಿಸುತ್ತಾನೆ. ಅರ್ಜುನನ ಪ್ರಾರ್ಥನೆಯಂತೆ ಪರಮಾತ್ಮನು ತನ್ನ ಹಿಂದಿನ ಸೌಮ್ಯರೂಪವನ್ನು ಧರಿಸುತ್ತಾನೆ ಮತ್ತು ಅರ್ಜುನನಿಗೆ ಅನನ್ಯಭಕ್ತಿಯ ಲಕ್ಷಣವನ್ನು ತಿಳಿಸುತ್ತಾನೆ.

II **ಪರಮಾತ್ಮನು ಅರ್ಜುನನಿಗೆ ತನ್ನ ಜ್ಞಾನ ಮತ್ತು ದರ್ಶನ ಹೊಂದಲು ಅನನ್ಯಭಕ್ತಿ ಒಂದೇ ಉಪಾಯ ಎಂಬ ಸಾರವಾದ ತತ್ತ್ವವನ್ನು ಉಪದೇಶಮಾಡುತ್ತಾನೆ- (ಶ್ಲೋ-52-55)**

ಅರ್ಜುನನು ಸಾಕ್ಷಾತ್ಕರಿಸಿದ ತೇಜೋಮಯವೂ, ಅನಂತವೂ, ಅತ್ಯದ್ಭುತವೂ ಆದ ಭಗವಂತನ ಈ ವಿಶ್ವರೂಪವನ್ನು ಸಾಕ್ಷಾತ್ಕರಿಸಬೇಕೆಂದು ಆಸೆಪಡುತ್ತಿರುವ ದೇವತೆಗಳೂ ಅದನ್ನು ಪಡೆಯಲಾರರೆಂದೂ-"(ನನ್ನಲ್ಲಿ ಭಕ್ತಿಯಿಲ್ಲದೆ) - ವೇದಾಧ್ಯಯನದಿಂದಾಗಲೀ, ತಪಸ್ಸು ಯಾಗಾದಿಗಳಿಂದಾಗಲೀ, ಧ್ಯಾನ ಕರ್ಮ ಸಂನ್ಯಾಸ ತಪಸ್ಸು ಇವೇ ಮುಂತಾಗಿ ಯಾವುದರಿಂದಲೂ ಈಗ ನೀನು ಸಾಕ್ಷಾತ್ಕರಿಸಿದ ರೀತಿಯಲ್ಲಿ ನನ್ನನ್ನು ದರ್ಶನ ಮಾಡಲು ಸಾಧ್ಯವಿಲ್ಲ, ಕೇವಲ ಅನನ್ಯ ಭಕ್ತಿಯಿಂದ ಮಾತ್ರ ನನ್ನನ್ನು ಈ ರೀತಿಯಾಗಿ ತತ್ತ್ವತಃ ತಿಳಿಯಲು, ತತ್ತ್ವತಃ ಸಾಕ್ಷಾತ್ಕರಿಸಲು, ತತ್ತ್ವತಃ ಪ್ರವೇಶಿಸಿ ಅನುಭವಿಸಲು ಸಾಧ್ಯವಾಗಬಲ್ಲದು"- ಎಂದು ಪರಮಾತ್ಮನು ತಿಳಿಸುತ್ತಾನೆ.

ಅನಂತರ ಭಕ್ತಿಯೋಗದ ಮೇಲಿನ ಹಂತವಾದ ಅನನ್ಯಭಕ್ತಿಯ ಸ್ವರೂಪವನ್ನು ಅರ್ಜುನನಿಗೆ ಉಪದೇಶ ಮಾಡುತ್ತಾನೆ. - "ವೇದಾಧ್ಯಯನಾದಿ ಸಮಸ್ತ ಕರ್ಮಗಳನ್ನು ಕರ್ತೃತ್ವಮಮತಾ ಫಲತ್ಯಾಗದೊಂದಿಗೆ ನನ್ನ ಪ್ರೀತ್ಯರ್ಥವಾಗಿ ನನ್ನ ಆರಾಧನವಾಗಿ ಮಾಡುವವನೂ, ನನ್ನನ್ನು ಹೊಂದುವುದನ್ನೇ ಪರಮ ಉದ್ದೇಶ್ಯವಾಗಿ ಹೊಂದಿರುವವನೂ, ನನ್ನಲ್ಲಿ ಅತ್ಯಂತ ಪ್ರೀತಿ ಹೊಂದಿ ನನ್ನ ಕೀರ್ತನೆ ಸ್ತುತಿ, ಧ್ಯಾನ ಅರ್ಚನೆ, ಪ್ರಣಾಮಾದಿಗಳನ್ನು ಭಕ್ತಿಯಿಂದ ಮಾಡುವವನೂ;- ಇತರ ಪ್ರಾಪಂಚಿಕ ಸುಖ ಭೋಗಗಳಲ್ಲಿ ಸಂಗವಿಲ್ಲದವನೂ; ಮತ್ತು ಸರ್ವಪ್ರಾಣಿಗಳಲ್ಲೂ ದ್ವೇಷವಿಲ್ಲದವನೂ ಆದ ಭಕ್ತನು ನನ್ನನ್ನು ಹೊಂದುವನು" ಎಂಬ ಸಾರವುಳ್ಳ ಉಪದೇಶವನ್ನು ಇಲ್ಲಿ (55ನೇ ಶ್ಲೋಕದಲ್ಲಿ ) ಪರಮಾತ್ಮನು ತಿಳಿಸಿದ್ದಾನೆ.

ಈ ಅಧ್ಯಾಯದಲ್ಲಿ ಪರಮಾತ್ಮನು ಅರ್ಜುನನಿಗೆ ದಿವ್ಯ ಚಕ್ಷುಸ್ಸನ್ನು ಅನುಗ್ರಹಿಸಿ, ತನ್ನ ವಿಶ್ವರೂಪವನ್ನು ಅವನಿಗೆ ತೋರಿಸಿದ್ದಾನೆ ಮತ್ತು ತನ್ನನ್ನು ಅರಿಯಲು ಮತ್ತು ಹೊಂದಲು ಅನನ್ಯಭಕ್ತಿ ಒಂದೇ ಉಪಾಯ ಎಂದು ತಿಳಿಸಿದ್ದಾನೆ.

****

# ಭಗವದ್ಗೀತೆ ಅಧ್ಯಾಯದ 12

## ಭಕ್ತಿಯೋಗ

## ಗೀತಾರ್ಥಸಂಗ್ರಹ ಶ್ಲೋಕ 16

ಭಕ್ತೇಃ ಶ್ರೈಷ್ಠ್ಯಮುಪಾಯೋಕ್ತಿ;

ಅಶಕ್ತ ಸ್ಯಾತ್ಮ ನಿಷ್ಠತಾ ।

ತತ್ಪ್ರಕಾರಾಸ್ತ್ವತಿ ಪ್ರೀತಿ :

ಭಕ್ತೇರ್ದ್ವಾದಶ ಉಚ್ಯತೇ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ 12ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಭಕ್ತೇಃ ಶ್ರೈಷ್ಠ್ಯಂ** - ಆತ್ಮೋಪಾಸನೆಗಿಂತ ಭಗವದುಪಾಸನೆ ಮಾಡುವ ಭಕ್ತಿಯೋಗವು ಶೀಘ್ರಫಲಪ್ರದವೂ ಸುಖಕರವೂ ಆಗಿ ಅತ್ಯಂತ ಶ್ರೇಷ್ಠ ವಾದುದಾಗಿದೆ ಎಂಬುದೂ.

**ಉಪಾಯೋಕ್ತಿಃ** - ಅದು ಭಗವಂತನನ್ನು ಹೊಂದಲು ಉತ್ತಮವಾದ ಉಪಾಯವಾಗಿದೆ ಎಂಬುದೂ;

**ಅಶಕ್ತಸ್ಯಾತ್ಮನಿಷ್ಠತಾ** - ಭಕ್ತಿಯೋಗವನ್ನು ಆಚರಿಸಲು ಶಕ್ತಿ ಇಲ್ಲದವನಿಗೆ ಆತ್ಮನಿಷ್ಠೆಯಿಂದ ಕೂಡಿದ ಕರ್ಮಯೋಗವೇ ಉಚಿತವಾದುದು ಎಂಬುದೂ

ತತ್ಸಾರಾಃ - ಕರ್ಮಯೋಗನಿಷ್ಠನಲ್ಲಿರಬೇಕಾದ ಗುಣಗಳೂ

ಭಕ್ತೇ : ಅಸ್ಯ ಅತಿ ಪ್ರೀತಿ : -ಮತ್ತು ಭಕ್ತನಲ್ಲಿ ಭಗವಂತನಿಗೆ ಅತ್ಯಧಿಕವಾದ ಪ್ರೀತಿ ಇದೆ ಎಂಬುದೂ

ದ್ವಾದಶಉಚ್ಯತೇ - ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಲ್ಪಡುತ್ತದೆ.

ಭಗವದ್ಗೀತೆಯ ಈ 12ನೇಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

I ಭಕ್ತಿಯೋಗದ ಶ್ರೇಷ್ಠತೆ- (ಶ್ಲೋ 1-7)

ಇಲ್ಲಿಯವರೆಗೆ ಪರಮಾತ್ಮನು ತಿಳಿಸಿದ ಉಪದೇಶಗಳನ್ನೆಲ್ಲಾ ಕೇಳಿದ ಮೇಲೆ ಅರ್ಜುನನು ಆತ್ಮಸ್ವರೂಪವನ್ನು ಧ್ಯಾನ ಮಾಡುವವರು ಶ್ರೇಷ್ಠರೇ, ಇಲ್ಲ ಭಗವಂತನ ಧ್ಯಾನ ಮಾಡುವ ಭಕ್ತಿಯೋಗನಿಷ್ಠರು ಶ್ರೇಷ್ಠರೇ ಎಂದು ಪರಮಾತ್ಮನನ್ನು ಕೇಳುತ್ತಾನೆ. ಅವ್ಯಕ್ತವೂ ಅಚಿಂತ್ಯವೂ ಆದ ಪ್ರತ್ಯಗಾತ್ಮ ಸ್ವರೂಪವನ್ನು ಅತ್ಯಂತ ಶ್ರಮವಹಿಸಿ, ಧ್ಯಾನ ಮಾಡಿ, ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಆತ್ಮೋಪಾಸನೆಗಿಂತ ಭಗವದುಪಾಸನೆ ಮಾಡುವ ಭಕ್ತಿಯೋಗವು ಆಚರಿಸಲು ಸುಲಭವಾದುದಾಗಿಯೂ, ಶೀಘ್ರ ಫಲಪ್ರದ ವಾದುದಾಗಿಯೂ ಶ್ರೇಷ್ಠವಾದುದಾಗಿಯೂ ಇದೆ ಎಂದೂ, ತನ್ನಲ್ಲಿ ಮನಸ್ಸನ್ನಿಟ್ಟು ತನ್ನನ್ನು ಭಜಿಸುವವರ ಸಂಸಾರ ಬಂಧವನ್ನು ನೀಗಿಸಿ ಅವರನ್ನು ತಾನೇ ರಕ್ಷಿಸುವುದಾಗಿಯೂ ಪರಮಾತ್ಮನು ಭರವಸೆಕೊಟ್ಟು ತಿಳಿಸಿದ್ದಾನೆ.

II ಭಕ್ತಿಯೋಗವು ಭಗವಂತನನ್ನು ಹೊಂದಲು ಉಪಾಯವಾಗಿದೆ ಎಂಬುದನ್ನು ಪರಮಾತ್ಮನು ತಿಳಿಸುತ್ತಾನೆ (ಶ್ಲೋಕ 8-10)

ಭಕ್ತಿಯೋಗವನ್ನು ಅಭ್ಯಾಸಮಾಡುವ ಕ್ರಮವು ಇಲ್ಲಿ ತಿಳಿಸಲ್ಪಟ್ಟಿದೆ. ಭಗವಂತನಲ್ಲೇ ಮನಸ್ಸನ್ನೂ, ಬುದ್ಧಿಯನ್ನೂ ಸ್ಥಿರವಾಗಿ ಇರಿಸಿದರೆ ಭಗವಂತನನ್ನು ಹೊಂದಬಹುದು. ಇದರಲ್ಲಿ ಸಂಶಯವಿಲ್ಲವೆಂದು ಪರಮಾತ್ಮನು ಇಲ್ಲಿ ತಿಳಿಸಿದ್ದಾನೆ. ಇದೇ ಭಕ್ತಿಮಾರ್ಗದ ಮೇಲಿನ ಹಂತ (ಮೆಟ್ಟಲು). ಆದರೆ ಇದು ಕಷ್ಟವಾದ ಅಭ್ಯಾಸ. ಏಕೆಂದರೆ

ಚಂಚಲವಾದ ಮನಸ್ಸನ್ನೂ ಬುದ್ಧಿಯನ್ನೂ ವಿಷಯಚಿಂತನೆಗಳಿಂದ ಸೆಳೆದು ಭಗವಂತನಲ್ಲಿ ನಿಲ್ಲಿಸುವುದು ಬಹಳ ಕಷ್ಟ

ಆದರೆ ಭಗವಂತನನ್ನು ಪ್ರೀತಿಯಿಂದಲೂ, ಭಕ್ತಿಯಿಂದಲೂ ಸರ್ವದಾ ಸ್ಮರಿಸುವ ಅಭ್ಯಾಸ ಮಾಡುವುದರ ಮೂಲಕ ಇದನ್ನು ಸಾಧಿಸಲು ಪ್ರಯತ್ನಿಸಬೇಕು. ಆದ್ದರಿಂದ ಯಾವಾಗಲೂ ಭಗವಂತನನ್ನು ಮನಸ್ಸಿನಲ್ಲಿ ಸ್ಮರಿಸುತ್ತಿರುವ ಅಭ್ಯಾಸಯೋಗವನ್ನು ಮಾಡುವಂತೆ ಪರಮಾತ್ಮನು ಇಲ್ಲಿ ತಿಳಿಸಿದ್ದಾನೆ. ಇದು ಭಕ್ತಿಯೋಗದ ಮಧ್ಯದ ಹಂತ (ಮೆಟ್ಟಲು) ಆದರೆ ಈ ಅಭ್ಯಾಸಯೋಗವನ್ನು ಮಾಡುವುದೂ ಸಾಧ್ಯವಾಗದಿದ್ದರೆ ''ಮತ್ಕರ್ಮ ಪರಮೋಭವ'' ಅಂದರೆ ನನಗೆ ಪ್ರಿಯವಾದ ಕರ್ಮಗಳನ್ನು ಸರ್ವದಾ ಶ್ರದ್ಧೆಯಿಂದ ಮಾಡುತ್ತಾ ಇರು'' - ಎಂದು ಪರಮಾತ್ಮನು ಇಲ್ಲಿ ಉಪದೇಶ ನೀಡಿದ್ದಾನೆ.

ಭಗವಂತನಿಗೆ ಪ್ರಿಯವಾದ ಕೆಲವು ಕರ್ಮಗಳನ್ನು ಶ್ರೀರಾಮಾನುಜಾಚಾರ್ಯರು ಅವರ ಗೀತಭಾಷ್ಯದಲ್ಲಿ ವಿವರಿಸಿ ತಿಳಿಸಿದ್ದಾರೆ - ಆಲಯನಿರ್ಮಾಣಮಾಡುವುದೂ, ಪುಷ್ಪವನ ನಿರ್ಮಿಸುವುದು, ದೀಪ ಬೆಳಗುವುದು ಭಗವಂತನ ಸ್ತೋತ್ರ, ಧ್ಯಾನ, ನಾಮಸಂಕೀರ್ತನೆ, ಪೂಜೆ, ನಮಸ್ಕಾರಾದಿಗಳನ್ನು ಮಾಡುವುದು ಮತ್ತು ಭಗವಂತನು ಸೃಷ್ಟಿಸಿರುವ ಜೀವಜಂತುಗಳಿಗೆ ಸಹಾಯಮಾಡುವುದು ಮುಂತಾದ ಪರಮಾತ್ಮನಿಗೆ ಪ್ರಿಯವಾದ ಸತ್ಕರ್ಮಗಳನ್ನು ಭಗವತ್ ಕೈಂಕರ್ಯವಾಗಿ ಪ್ರೀತಿ ಭಕ್ತಿಗಳಿಂದ ಮಾಡುತ್ತಾ ಇರಬೇಕು. ಆಗ ಚೇತನನ ಪಾಪಗಳು ನಾಶವಾಗಿ ಅವನು ಭಗವಂತನಲ್ಲಿ ಮನಸ್ಸನ್ನೂ ಬುದ್ಧಿಯನ್ನೂ ನೆಲೆಗೊಳಿಸುವ ಅಭ್ಯಾಸ ಮಾಡಲು ಶಕ್ತನಾಗಿ ಕೊನೆಗೆ ಭಗವಂತನಲ್ಲೇ ಮನಸ್ಸನ್ನೂ ಬುದ್ಧಿಯನ್ನೂ ನಿಲ್ಲಿಸಿ ಭಗವದ್ಭಕ್ತನಾಗಬಲ್ಲನು.

ಆದ್ದರಿಂದ ಭಗವಂತನಿಗೆ ಪ್ರಿಯವಾದ ಸತ್ಕರಗಳನ್ನು ಪ್ರೀತಿಯಿಂದಲೂ, ಭಕ್ತಿಯಿಂದಲೂ ಮಾಡುವುದೇ ಭಕ್ತಿಯೋಗದ ಕೆಳಗಿನ ಹಂತ (ಮೆಟ್ಟಲು) ಅಂದರೆ ಮೊಟ್ಟಮೊದಲನೆಯ ಅಭ್ಯಾಸ.

ಹೀಗೆ ಭಕ್ತಿಯೋಗದ ಅಭ್ಯಾಸಗಳನ್ನು ಹಂತ ಹಂತವಾಗಿ ವಿವರಿಸಿ ಪರಮಾತ್ಮನು ತಿಳಿಸಿದ್ದಾನೆ.

**III ಭಕ್ತಿ ಯೋಗವನ್ನು ಆಚರಿಸಲು ಶಕ್ತಿ ಇಲ್ಲದವನಿಗೆ ಫಲಾಭಿಸಂಧಿ ರಹಿತವಾಗಿ ಮಾಡುವ ಆತ್ಮನಿಷ್ಠೆಯಿಂದಕೂಡಿದ ಕರ್ಮ ಯೋಗಾಭ್ಯಾಸವೇ ಉಚಿತವಾದುದು- (ಶ್ಲೋ-11-12)**

ಭಕ್ತಿಯನ್ನು ಉಂಟುಮಾಡುವ ಮತ್ತು ಪರಮಾತ್ಮನಿಗೆ ಪ್ರಿಯವಾದ ಸತ್ಕರ್ಮಗಳನ್ನುಕೂಡ ಮಾಡಲು ಶಕ್ತನಾಗದಿದ್ದರೆ ಅಂದರೆ ಭಕ್ತಿ ಯೋಗದ ಕೆಳಗಿನ ಮೊದಲ ಮೆಟ್ಟಿಲನ್ನೂ ಹತ್ತಲು ಶಕ್ತಿ ಇಲ್ಲದವನಿಗೆ ಗೀತೆಯ ಮೊದಲ 6 ಅಧ್ಯಾಯಗಳಲ್ಲಿ ಉಪದೇಶಿಸಿರುವ ಆತ್ಮನಿಷ್ಠೆಯಿಂದ ಕೂಡಿದ ಕರ್ಮಯೋಗಭ್ಯಾಸವೇ ಉಚಿತವಾದುದು. ಅಂದರೆ ಆತ್ಮ ಸ್ವರೂಪಜ್ಞಾನಾನುಸಂಧಾನದೊಂದಿಗೂ, ಕರ್ತೃತ್ವಮಮತಾಫಲತ್ಯಾಗ ದೊಂದಿಗೂ, ಅಹಂಕಾರಮಮಕಾರರಹಿತನಾಗಿ, ಭಗವತ್ ಕೈಂಕರ್ಯವಾಗಿ ತನ್ನ ಲೌಕಿಕವೈದಿಕ ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳನ್ನು ಕರ್ಮಯೋಗವಾಗಿ ಆಚರಿಸುವುದೇ ಶ್ರೇಷ್ಠವಾದ ಮಾರ್ಗ. ಅದರ ಮೂಲಕ ಆತ್ಮಸಾಕ್ಷಾತ್ಕಾರ ಹೊಂದಿ, ತನ್ಮೂಲಕ ಆತ್ಮನಲ್ಲಿ ಅಂತರಾತ್ಮನಾದ ಪರಮಾತ್ಮನಲ್ಲಿ ಭಕ್ತಿಯುಂಟಾಗಿ ಕೊನೆಗೆ ಪರಮಾತ್ಮನನ್ನು ಹೊಂದಬಲ್ಲನು ಎಂದು ಪರಮಾತ್ಮನು ತಿಳಿಸಿದ್ದಾನೆ.

**IV ಕರ್ಮಯೋಗ ನಿಷ್ಠನಾದ ಭಕ್ತನಲ್ಲಿ ಇರಬೇಕಾದ ಗುಣಗಳು ಮತ್ತು ಅವನು ಆಚರಿಸಬೇಕಾದ ನೈತಿಕಧರ್ಮಗಳು (ಶ್ಲೋ- 13-19)**

ಸಮಸ್ತ ಪ್ರಾಣಿಗಳಲ್ಲಿ ದ್ವೇಷವಿಲ್ಲದವನೂ, ಅದು ಮಾತ್ರವಲ್ಲದೆ ಅವರಲ್ಲಿ ಸ್ನೇಹ ಮತ್ತು ಕರುಣೆಗಳುಳ್ಳವನೂ, ಅಹಂಕಾರ, ಮಮಕಾರ ರಹಿತನಾಗಿ ಇರುವವನೂ, ಸುಖದುಃಖಗಳನ್ನು ಸಮನಾಗಿ ಭಾವಿಸುವವನೂ, ತಾಳ್ಮೆಯಿಂದಿರುವವನೂ, ಸರ್ವದಾ ಸಂತುಷ್ಟ ನಾಗಿರುವವನೂ, ಆತ್ಮಧ್ಯಾನಮಾಡುವ ಯೋಗಿಯಾಗಿರುವವನೂ, ಮನಸ್ಸನ್ನು ಜಯಿಸಿದವನೂ, ನಿಶ್ಚಯಬುದ್ಧಿಯುಳ್ಳವನೂ, ಮನಸ್ಸನ್ನೂ ಬುದ್ಧಿಯನ್ನೂ ಪರಮಾತ್ಮನಲ್ಲಿ ನೆಲೆಗೊಳಿಸಿರುವವನೂ, ಆದ ಭಕ್ತನು ತನಗೆ ಪ್ರಿಯನು ಎಂದೂ;

ಜಗತ್ತಿನಜನಗಳಿಗೆ ಉದ್ವೇಗ ಉಂಟು ಮಾಡುವಂತಹ ಕೆಲಸ ಮಾಡದವನೂ, ಜಗತ್ತಿನ ಜನಗಳು ತನಗೆ ಉದ್ವೇಗ ಉಂಟುಮಾಡದಂತೆ

ವರ್ತಿಸುವವನೂ, ಸಂತೋಷಕೋಪಭಯ ಮುಂತಾದವುಗಳಲ್ಲಿ ಮನಸ್ಸು ಕಲಕದವನೂ, ಆಗಿರುವವನು ತನಗೆ ಪ್ರಿಯನು ಎಂದೂ;

ಸಂತೋಷ, ದ್ವೇಷ, ದುಃಖ, ಆಸೆ, ಶುಭ, ಅಶುಭ ಇವುಗಳಲ್ಲಿ ಸಮಭಾವನೆಯುಳ್ಳವನೂ; ಶತ್ರುಮಿತ್ರರಲ್ಲೂ, ಮಾನಅಪಮಾನ ಗಳಲ್ಲೂ, ಶೀತಉಷ್ಣಗಳಲ್ಲೂ, ಸುಖದುಃಖಗಳಲ್ಲೂ, ನಿಂದಾ ಸ್ತುತಿಗಳಲ್ಲೂ, ಸಮಭಾವನೆ ಉಳ್ಳವನೂ, ತನಗೆ ಪ್ರಾಪ್ತವಾದುದರಲ್ಲಿ ತೃಪ್ತಿ ಸಂತೋಷ ಹೊಂದುವವನೂ, ಮನೆ ಮುಂತಾದುವಲ್ಲಿ ಅತಿಮಮತೆ ಇಲ್ಲದವನೂ ಆಗಿರುವ ಭಕ್ತನು ತನಗೆ ಅತ್ಯಂತಪ್ರಿಯನು ಎಂದೂ ಕೃಷ್ಣಪರಮಾತ್ಮನು ತಿಳಿಸಿದ್ದಾನೆ.

V ತನ್ನಭಕ್ತನಲ್ಲಿ ಭಗವಂತನಿಗಿರುವ ಅತ್ಯಧಿಕವಾದ ಪ್ರೀತಿ - (ಶ್ಲೋಕ 20)

''ಯಾರು ಮೇಲೆ ತಿಳಿಸಿರುವಂತೆ ಧರ್ಮ್ಯವೂ ಅಮೃತವೂ ಆಗಿರುವ ಭಕ್ತಿಯೋಗವನ್ನು ಶ್ರದ್ಧೆಯಿಂದ ಕೂಡಿ, ನನ್ನನ್ನೇ ಪ್ರಯೋಜನವಾಗಿ ಹೊಂದಿ, ಆಚರಿಸುತ್ತಾರೆಯೋ ಆ ಭಕ್ತರು ನನಗೆ ಅತ್ಯಧಿಕ ಪ್ರಿಯರಾಗಿದ್ದಾರೆ'' ಎಂದು ಈ ಅಧ್ಯಾಯದ ಕೊನೆಯಲ್ಲಿ ಪರಮಾತ್ಮನು ತಿಳಿಸಿದ್ದಾನೆ. ಆತ್ಮನಿಷ್ಠರಿಗಿಂತ ಭಕ್ತಿಯೋಗನಿಷ್ಠರೇ ಶ್ರೇಷ್ಠರು ಎಂದು ಹೇಳಿ ತನ್ನ ಉಪದೇಶವನ್ನು ಪರಮಾತ್ಮನು ಮುಗಿಸಿದ್ದಾನೆ.

ಈ ಅಧ್ಯಾಯದಲ್ಲಿ ಆತ್ಮ ಸಾಕ್ಷಾತ್ಕಾರಕ್ಕಿಂತ ಭಕ್ತಿಯೋಗವೇ ಮೇಲಾದುದು ಎಂದು ಹೇಳಿ," ಭಕ್ತಿಯೋಗದ ಅಭ್ಯಾಸಗಳನ್ನು ಹಂತ ಹಂತವಾಗಿ ವಿವರಿಸಿ, ಭಕ್ತಿಯೋಗವನ್ನು ಅನುಷ್ಠಿಸುವವರು ತನಗೆ ಅತ್ಯಂತ ಪ್ರಿಯರು ಎಂದು ಪರಮಾತ್ಮನು ತಿಳಿಸಿದ್ದಾನೆ.

* * * *

# ಭಗವದ್ಗೀತೆಯ ಮೂರನೆಯಷಟ್ಕ

ಗೀತೆಯ ಮೊದಲನೆಯ ಷಟ್ಕದಲ್ಲಿ (1 ರಿಂದ 6 ಅಧ್ಯಾಯಗಳಲ್ಲಿ) ಜ್ಞಾನಯೋಗ, ಕರ್ಮಯೋಗಗಳೂ ಅವುಗಳಿಂದ ಹೊಂದಲ್ಪಡುವ ಪ್ರತ್ಯಗಾತ್ಮ ಸ್ವರೂಪದ ವಿಷಯವೂ ತಿಳಿಸಲ್ಪಟ್ಟಿತು. ಗೀತೆಯ ಎರಡನೆಯ ಷಟ್ಕದಲ್ಲಿ (7 ರಿಂದ 12ನೇಯ ಅಧ್ಯಾಯಗಳವರೆಗಿನ 6 ಅಧ್ಯಾಯಗಳಲ್ಲಿ) ಪರಮಾತ್ಮನ ಸ್ವರೂಪ, ಗುಣ ವಿಭೂತಿಗಳೂ ಮತ್ತು ಪರಮಾತ್ಮನನ್ನು ಹೊಂದಲು ಆಚರಿಸಬೇಕಾದ ಭಕ್ತಿಯೋಗವಿಷ್ಯಯೂ ತಿಳಿಸಲ್ಪಟ್ಟವು. ಈಗ ಈ ಮೂರನೆಯ ಷಟ್ಕದಲ್ಲಿ (13 ರಿಂದ 18ರವರೆಗಿನ 6 ಅಧ್ಯಾಯಗಳಲ್ಲಿ) ಪ್ರಕೃತಿಪುರುಷರಸ್ವರೂಪವೂ, ಪರಮಾತ್ಮನಸ್ವರೂಪವೂ, ಕರ್ಮಜ್ಞಾನಭಕ್ತಿಯೋಗಗಳವಿಚಾರವೂ ಇವೆಲ್ಲವೂ ಮತ್ತೆ ವಿಶದವಾಗಿ ವಿವರಿಸಲ್ಪಟ್ಟಿವೆ.

# ಭಗವದ್ಗೀತೆ - ಅಧ್ಯಾಯ 13

## ಕ್ಷೇತ್ರಕ್ಷೇತ್ರಜ್ಞವಿಭಾಗಯೋಗ

## ಗೀತಾರ್ಥಸಂಗ್ರಹ ಶ್ಲೋಕ 17

ದೇಹಸ್ವರೂಪಮಾತ್ಮಾಪ್ತಿಹೇತುಃ
ಆತ್ಮವಿಶೋಧನಂ ।
ಬಂಧಹೇತುರ್ವಿವೇಕಶ್ಚ
ತ್ರಯೋದಶ ಉದೀರ್ಯತೇ ॥

ಈ ಶ್ಲೋಕದಲ್ಲಿ ಬಗವದ್ಗೀತೆಯ 13 ನೇಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ದೇಹಸ್ವರೂಪಂ** - ದೇಹದ (ಶರೀರದ) ಸ್ವರೂಪವೂ,

**ಆತ್ಮಾಪ್ತಿಹೇತುಃ** - ಆತ್ಮಜ್ಞಾನ ಪಡೆಯಲು ಸಾಧನಗಳಾದ ಜ್ಞಾನಾಭ್ಯಾಸಗಳು (ಅಮಾನಿತ್ವಾದಿಗುಣಗಳು),

**ಬಂಧಹೇತುಃ** - ಆತ್ಮನಿಗೆ ಶರೀರ ಸಂಬಂಧವುಂಟಾಗಿ ಸಂಸಾರ ಬಂಧ ಉಂಟಾಗುವುದಕ್ಕೆ ಕಾರಣವೂ,

**ವಿವೇಕಜ್ಞ** - ಜೀವಾತ್ಮನು ಶರೀರ ಸಂಬಂಧದಿಂದ ಬಿಡುಗಡೆ ಹೊಂದಲು ಅರಿತು ಅನುಸಂಧಾನಮಾಡಬೇಕಾದ ವಿವೇಕಜ್ಞಾನಪ್ರಕಾರವೂ,

**ತ್ರಯೋದಶ ಉದೀರ್ಯತೇ** - ಹದಿಮೂರನೆಯ ಅಧ್ಯಾಯದಲ್ಲಿ ಹೇಳಲ್ಪಡುತ್ತದೆ.

ಭಗವದ್ಗೀತೆಯ ಈ 13 ನೇಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

**I ದೇಹದ (ಕ್ಷೇತ್ರದ) ಸ್ವರೂಪ - (ಶ್ಲೋಕ 1 ರಿಂದ 6)**

ಆತ್ಮನಿಗೆ ಭೋಗಕ್ಷೇತ್ರವಾಗಿರುವ ಈ ಶರೀರವನ್ನು ಕ್ಷೇತ್ರವೆಂದೂ, ಅದನ್ನು ಅರಿಯುವ ಅದರಲ್ಲಿ ಅಂತರಾತ್ಮನಾಗಿರುವ ಜೀವಾತ್ಮನನ್ನು ಕ್ಷೇತ್ರಜ್ಞನೆಂದೂ ಹೇಳುತ್ತಾರೆ. ಪರಮಾತ್ಮನು ಶರೀರ ಮತ್ತು ಜೀವಾತ್ಮರಿಗಿಂತ ಭಿನ್ನನಾಗಿ, ಸರ್ವಕ್ಷೇತ್ರ ಮತ್ತು ಕ್ಷೇತ್ರಜ್ಞರಲ್ಲಿ ಅಂತರಾತ್ಮನಾಗಿ ಸಾರ್ವತ್ರಿಕ ಕ್ಷೇತ್ರಜ್ಞನಾಗಿದ್ದಾನೆ. **ಕ್ಷೇತ್ರ, ಕ್ಷೇತ್ರಜ್ಞ ಮತ್ತು ಸಾರ್ವತ್ರಿಕ ಕ್ಷೇತ್ರಜ್ಞ** ಅಂದರೆ ಶರೀರ, ಜೀವಾತ್ಮ ಮತ್ತು ಪರಮಾತ್ಮ ಎಂಬ ಮೂರು ತತ್ತ್ವಗಳ ಜ್ಞಾನವನ್ನು ತಿಳಿಯುವುದೇ ನಿಜವಾದ ಜ್ಞಾನ. ಇದು ಋಷಿಗಳಿಂದಲೂ, ನಾಲ್ಕು ವೇದಗಳಿಂದಲೂ, ಬ್ರಹ್ಮಸೂತ್ರ ಪದಗಳಿಂದಲೂ ವಿವರಿಸಲ್ಪಟ್ಟಿದೆ. ಅದನ್ನೇ ಇಲ್ಲಿ ಪರಮಾತ್ಮನು ಸಂಕ್ಷೇಪವಾಗಿ ತಿಳಿಸಿದ್ದಾನೆ.

**ದೇಹದ (ಕ್ಷೇತ್ರದ,) ಸ್ವರೂಪವನ್ನು** ಮೊದಲು ವಿವರಿಸಿ ತಿಳಿಸಿದ್ದಾನೆ- ಪೃಥಿವಿ (ಭೂಮಿ), ಅಪ್ಪು (ನೀರು) ತೇಜಸ್ಸು, ವಾಯು, ಆಕಾಶ ಎಂಬ ಐದು ಮಹಾಭೂತಗಳೂ, ಅಹಂಕಾರ, ಮಹತ್ತತ್ತ್ವ ಮತ್ತು ಪ್ರಕೃತಿ - ಇವೆಲ್ಲವೂ ಸೇರಿ ಒಟ್ಟು 8 ದ್ರವ್ಯಗಳಿಂದ ಈ ಶರೀರವು (ಕ್ಷೇತ್ರವು) ಉಂಟಾಗಿದೆ. ಇದು ಐದು ಕರ್ಮೇಂದ್ರಿಯಗಳೂ ಐದು ಜ್ಞಾನೇಂದ್ರಿಯಗಳೂ ಮತ್ತು ಮನಸ್ಸು ಸೇರಿ ಒಟ್ಟು ಹನ್ನೊಂದು ಇಂದ್ರಿಯಗಳಿಗೆ ವಾಸಸ್ಥಾನವಾಗಿದೆ. ಈ ಶರೀರದ ಸಂಬಂಧದಿಂದ ಇಚ್ಛಾದ್ವೇಷಸುಖದುಃಖಾದಿ ಚಿತ್ತವಿಕಾರಗಳು ಉಂಟಾಗುತ್ತವೆ. ಜೀವಾತ್ಮನು ಈ ಶರೀರದೊಂದಿಗೆ ಕೂಡಿರುವ ಕಾಲದಲ್ಲಿ ತನ್ನ ಶರೀರದಲ್ಲಿ ಉಂಟಾಗುವ ಗುಣಗಳನ್ನೂ ಚಿತ್ತವಿಕಾರಗಳನ್ನೂ ಅನುಭವಿಸುತ್ತಾನೆ.

II ಆತ್ಮಜ್ಞಾನಪ್ರಾಪ್ತಿಗೆ ಸಾಧನವಾಗಿ ಹೊಂದಬೇಕಾದ ಅಮಾನಿತ್ವಾದಿ ಗುಣಗಳು- (ಶ್ಲೋ: 7 ರಿಂದ 11)

ಜೀವಾತ್ಮನಿಗೆ ಶರೀರ ಸಂಬಂಧದಿಂದ ಉಂಟಾಗುವ ಕೆಲವು ಗುಣಗಳಿವೆ. ಅವು ಆತ್ಮಜ್ಞಾನಕ್ಕೆ ಸಾಧನವಾಗಿರುವುದರಿಂದ ಅವುಗಳನ್ನು ಜ್ಞಾನವೆಂದು ತಿಳಿಸಿದ್ದಾನೆ.

ಅವು ಯಾವುವೆಂದರೆ- ಕುಲ, ವಿದ್ಯೆ, ಐಶ್ವರ್ಯಗಳಿವೆ ಎಂದು ಗರ್ವ ಪಡದಿರುವಿಕೆ, ತಾನು ಧಾರ್ಮಿಕನೆಂದು ದಂಭವಿಲ್ಲದಿರುವಿಕೆ, ಅಹಿಂಸೆ, ಶಾಂತಿ, ಕಪಟವಿಲ್ಲದಿರುವಿಕೆ, ಆಚಾರ್ಯ (ಗುರು)ನಲ್ಲಿ ಭಕ್ತಿ ಮತ್ತು ಗೌರವಹೊಂದಿರುವಿಕೆ, ಪರಿಶುದ್ಧತೆ, ಶಾಸ್ತ್ರದಲ್ಲಿ ನಿಶ್ಚಯಬುದ್ಧಿ, ಇತರ ವಿಷಯಗಳಲ್ಲಿ ಮನಸ್ಸು ಚಲಿಸದಂತೆ ಇರುವಿಕೆ, ಇಂದ್ರಿಯಾರ್ಥಗಳಲ್ಲಿ ವೈರಾಗ್ಯ, ಅಹಂಕಾರವಿಲ್ಲದಿರುವಿಕೆ, ಹುಟ್ಟು, ಸಾವು, ಮುಪ್ಪು, ವ್ಯಾಧಿ, ದುಃಖ ಇವುಗಳ ದೋಷವನ್ನರಿತು ಇವುಗಳು ಶರೀರದಲ್ಲಿರುವವನಿಗೆ ಅವರ್ಜನೀಯವಾದವುಗಳೆಂದು ಅರಿತು ವೈರಾಗ್ಯ ಹೊಂದುವಿಕೆ, ಆತ್ಮ ವ್ಯತಿರಿಕ್ತ ವಸ್ತುಗಳಲ್ಲಿ ಆಸಕ್ತಿ ರಹಿತನಾಗಿರುವಿಕೆ, ಹೆಂಡತಿ ಮನೆ ಮಕ್ಕಳು ಮುಂತಾದುವುಗಳನ್ನು ಶಾಸ್ತ್ರೀಯ ಕರ್ಮಾನುಷ್ಠಾನಕ್ಕೆ ಉಪಕರಣವಾಗಿ ಹೊಂದಿದ್ದು ಬೇರೆ ಆಸಕ್ತಿ ಹೊಂದಿಲ್ಲದಿರುವಿಕೆ, ಇಷ್ಟ ಅನಿಷ್ಟ ಪ್ರಾಪ್ತಿಯಲ್ಲಿ ಸಮಚಿತ್ತನಾಗಿರುವಿಕೆ, ಪರಮಾತ್ಮನಲ್ಲಿ ಸ್ಥಿರವಾದಭಕ್ತಿ ಹೊಂದಿರುವಿಕೆ, ಏಕಾಂತವಾದ ಸ್ಥಳದಲ್ಲಿ ಇರುವಿಕೆ ಜನಸಮೂಹದಲ್ಲಿರಬೇಕೆಂಬ ಆಸೆ ಇಲ್ಲದಿರುವಿಕೆ, ಆತ್ಮಪರಮಾತ್ಮಜ್ಞಾನದಲ್ಲಿ ಸರ್ವದಾ ಮನಸ್ಸನ್ನು ನಿಲ್ಲಿಸುವಿಕೆ, ತತ್ತ್ವ ಜ್ಞಾನಪಡೆಯಲು ನಿರಂತರ ವ್ಯಾಸಂಗ ಮಾಡುವಿಕೆ - ಇವುಗಳೆಲ್ಲವೂ ಆತ್ಮಜ್ಞಾನಕ್ಕೆ ಸಾಧನಗಳಾಗಿರುವುದರಿಂದ ಇವುಗಳು ಜ್ಞಾನವೆಂದೂ, ಇದಕ್ಕೆ ವಿರುದ್ಧವಾದವುಗಳೆಲ್ಲಾ ಅಜ್ಞಾನವೆಂದೂ ಹೇಳಲ್ಪಟ್ಟಿವೆ. ಈ ಜ್ಞಾನಾಭ್ಯಾಸಗಳನ್ನೆಲ್ಲಾ ವೃದ್ಧಿಪಡಿಸಿಕೊಂಡು ಆಚರಿಸಬೇಕೆಂದು ಇಲ್ಲಿ ಪರಮಾತ್ಮನು ಉಪದೇಶ ಮಾಡಿದ್ದಾನೆ.

III ಆತ್ಮನ (ಕ್ಷೇತ್ರಜ್ಞನ) ಸ್ವರೂಪದ ವಿವರಣೆ- (ಶ್ಲೋ- 12-18)

ಆತ್ಮ ಸ್ವರೂಪವು ಅನಾದಿಯಾದುದು. ಇದು ಪರಮಾತ್ಮನ ಶರೀರವಾಗಿ

ಅವನಿಗೆ ಶೇಷ (ದಾಸ) ಭೂತವಾಗಿದೆ. ಇದು ಸೃಷ್ಟಿಕಾಲದಲ್ಲಿ ನಾಮರೂಪಗಳನ್ನು ಹೊಂದಿ ಸತ್ ಎನ್ನಿಸಿಕೊಳ್ಳುತ್ತದೆ, ಪ್ರಳಯಕಾಲದಲ್ಲಿ ನಾಮರೂಪಅನರ್ಹವಾಗಿ ಅಸತ್ ಎನ್ನಿಸಿಕೊಳ್ಳುತ್ತದೆ.

ಪರಿಶುದ್ಧಆತ್ಮನು ಪ್ರತ್ಯಗಾತ್ಮನೆಂದೂ, ಬದ್ಧದೆಶೆಯಲ್ಲಿ ಅಂದರೆ ಶರೀರದೊಂದಿಗೆ ಸೇರಿರುವ ಕಾಲದಲ್ಲಿ ಬದ್ಧಜೀವಾತ್ಮನೆಂದೂ ಹೇಳಲ್ಪಟ್ಟಿದ್ದಾನೆ.

ಶುದ್ಧಆತ್ಮವು ಸರ್ವಕಡೆಗಳಲ್ಲೂ ಕೈ, ಕಾಲು, ಕಣ್ಣು, ಶಿರಸ್ಸು, ಮುಖ ಮುಂತಾದ ಇಂದ್ರಿಯಗಳ ಕಾರ್ಯವನ್ನುಮಾಡುವ ಶಕ್ತಿ ಪಡೆದಿದೆ; ಲೋಕದಲ್ಲಿ ಸರ್ವ ವಸ್ತುಗಳನ್ನೂ ವ್ಯಾಪಿಸಿ ಸರ್ವಗತವಾಗಿದೆ. ಇದು ಇಂದ್ರಿಯಗಳ ಸಹಾಯವಿಲ್ಲದೆಯೇ ಸರ್ವವನ್ನು ತಿಳಿಯುವ ಸಾಮರ್ಥ್ಯ ಪಡೆದಿದೆ. ಆದರೆ ಬದ್ಧದೆಶೆಯಲ್ಲಿ ಇಂದ್ರಿಯಗಳ ಮೂಲಕ ವಿಷಯಗಳನ್ನು ತಿಳಿಯುವ ಸಾಮರ್ಥ್ಯ ಪಡೆದಿದೆ.

ಇದು ದೇವ ಮನುಷ್ಯಾದಿ ದೇಹಗಳ ಸಂಬಂಧ ರಹಿತವಾದುದಾಗಿದೆ. ಆದರೆ ಬದ್ಧದೆಶೆಯಲ್ಲಿ ದೇವ ಮನುಷ್ಯಾದಿ ದೇಹಗಳನ್ನು ಭರಿಸುವ ಸಾಮರ್ಥ್ಯವನ್ನು ಪಡೆದಿದೆ. ಇದು ಸತ್ವಾದಿ ಗುಣರಹಿತವಾದುದೂ ಆಗಿದೆ ಮತ್ತು ಸತ್ವಾದಿಗುಣ ಭೋಗಸಮರ್ಥವೂ ಆಗಿದೆ. ಶುದ್ಧಜೀವಾತ್ಮನು ಅಶರೀರಿಯಾಗಿ ಪೃಥಿವ್ಯಾದಿ ಭೂತಗಳ ಹೊರಗೆ ಇದ್ದಾನೆ. ಬದ್ಧ ಜೀವಾತ್ಮನು ಅದರ ಒಳಗೆ ಇದ್ದಾನೆ. ಇವನು ಸ್ವಭಾವತಃ ಅಚರನೂ, ದೇಹಯುಕ್ತನಾಗಿರುವಾಗ ಚರನೂ ಆಗಿದ್ದಾನೆ.

ಶುದ್ಧಆತ್ಮನು ಸೂಕ್ಷ್ಮನಾಗಿರುವುದರಿಂದ ತಿಳಿಯಲಶಕ್ಯನಾಗಿದ್ದಾನೆ. ಅಮಾನಿತ್ವಾದಿಗುಣಗಳಿಲ್ಲದವರಿಗೆ ಅವರ ಶರೀರದ ಒಳಗೆ ಇದ್ದರೂ ಅವರಿಂದ ತಿಳಿಯಲಾರದವನಾಗಿಯೂ, ಅಮಾನಿತ್ವಾದಿಗುಣಗಳನ್ನು ಪಡೆದ ಜ್ಞಾನಿಗಳಿಗೆ ಅತ್ಯಂತ ಸಮೀಪದಲ್ಲಿರುವವನಾಗಿಯೂ ಇದ್ದಾನೆ.

ಶುದ್ಧಆತ್ಮನು ಜ್ಞಾನಮಾತ್ರಸ್ವರೂಪನಾಗಿ ವಿಭಾಗ ಮಾಡಲು ಅನರ್ಹನಾಗಿ ಇದ್ದಾನೆ. ಬದ್ಧದೆಶೆಯಲ್ಲಿ ದೇಹಗಳನ್ನು ಧರಿಸಿರುವುದರಿಂದ 'ಇವನು ದೇವ, ಇವನು ಮನುಷ್ಯ' ಎಂದು ಬೇರೆಬೇರೆಯಾಗಿ ವಿಭಾಗಮಾಡಿ ಹೇಳಲು ಶಕ್ಯನಾಗಿದ್ದಾನೆ.

ಶುದ್ಧಆತ್ಮನು ದೇಹಗಳಿಗೆ ಅಂತರಾತ್ಮನಾಗಿ ಅವುಗಳಿಗೆ ಭರ್ತಾವಾಗಿ (ಯಜಮಾನನಾಗಿ) ಇದ್ದಾನೆ. ಶರೀರದಲ್ಲಿ ಇದ್ದುಕೊಂಡು, ಅನ್ನಾದಿಗಳನ್ನು ಭುಜಿಸುತ್ತಾ, ಅದನ್ನು ಜೀರ್ಣಿಸಿಕೊಳ್ಳುತ್ತಾ ಶರೀರವನ್ನು ಪೋಷಿಸುತ್ತಾ ಇರುವವನಾಗಿದ್ದಾನೆ.

ಶುದ್ಧಆತ್ಮನು ಪ್ರಕಾಶವಾಗಿರುವ ಜ್ಯೋತಿಗಿಂತ ಪ್ರಕಾಶ ಮಾನನಾಗಿಯೂ, ಪ್ರಕೃತಿಗಿಂತಲು ಉತ್ಕೃಷ್ಟನಾಗಿಯೂ, ಇದ್ದಾನೆ. ಇವನು ಜ್ಞಾನಸ್ವರೂಪನೂ, ಜ್ಞಾನೈಕಾಕಾರನೂ, ಜ್ಞಾನಗಮ್ಯನೂ ಅಂದರೆ ಅಮಾನಿತ್ವಾದಿ ಜ್ಞಾನಾಭ್ಯಾಸಗಳಿಂದ ತಿಳಿಯಲ್ಪಡತಕ್ಕವನೂ ಆಗಿದ್ದಾನೆ ಮತ್ತು ಮನುಷ್ಯನೇ ಮೊದಲಾದ ಸರ್ವಪ್ರಾಣಿಗಳ ಹೃದಯದಲ್ಲಿ ನೆಲೆಸಿರುವವನೂ ಆಗಿದ್ದಾನೆ.

**IV ಜೀವಾತ್ಮನಿಗೆ ಶರೀರ ಸಂಬಂಧ ಉಂಟಾಗಿ ಸಂಸಾರಬಂಧ ಉಂಟಾಗುವುದಕ್ಕೆ ಕಾರಣ- (ಶ್ಲೋಕ 19-21) (ತ್ರಿಗುಣಗಳ ಸಂಬಂಧವೇ ಕಾರಣ)**

ಪ್ರಕೃತಿಯೂ, ಪುರುಷನೂ (ಅಂದರೆ ಅಚಿತ್ತೂ-ಚಿತ್ತೂ ಎರಡೂ) ಅನಾದಿಯಾದವರು. ಅಂದರೆ ಯಾವಾಗಲೂ ಇರುವವರಾಗಿದ್ದಾರೆ. ಅವರಿಗೆ ಆದಿಯೂ ಅಂತವೂ ಇಲ್ಲ. ಜೀವಾತ್ಮನಿಗೆ ಬಂಧಕ್ಕೆ ಕಾರಣವಾದ ಇಚ್ಛಾದ್ವೇಷಾದಿವಿಕಾರಗಳೂ ಮತ್ತು ಮೋಕ್ಷಕ್ಕೆ ಕಾರಣವಾದ ಅಮಾನಿತ್ವಾದಿಗುಣಗಳೂ ಪ್ರಕೃತಿ ಸಂಬಂಧದಿಂದ ಉಂಟಾಗುತ್ತವೆ. ಶರೀರದಲ್ಲಿರುವ ತ್ರಿಗುಣಗಳೂ ಇಂದ್ರಿಯಗಳೂ ಕಾರ್ಯಗಳನ್ನು ಮಾಡುತ್ತವೆ. ಆದರೆ ಆ ಕಾರ್ಯಗಳಿಂದ ಉಂಟಾಗುವ ಸುಖದುಃಖಗಳನ್ನು ಆ ಶರೀರದಲ್ಲಿರುವ ಜೀವಾತ್ಮನು ಅನುಭವಿಸುತ್ತಾನೆ. ಆದ್ದರಿಂದ ಕಾರ್ಯಕಾರಣ ಕರ್ತೃತ್ವಾದಿಗಳಿಗೆಲ್ಲಾ ಪ್ರಕೃತಿಯೇ (ಶರೀರವೇ) ಕಾರಣವಾಗಿದೆ. ಆಕಾರ್ಯದಿಂದ ಉಂಟಾಗುವ ಸುಖದುಃಖಗಳನ್ನು ಅದರಲ್ಲಿರುವ ಪುರುಷನು (ಜೀವಾತ್ಮನು) ಭೋಗಿಸುತ್ತಾನೆ.

ಪ್ರಕೃತಿಸಂಬಂಧಪಡೆದಜೀವಾತ್ಮನು ತನ್ನ ಶರೀರದಲ್ಲಿರುವ ತ್ರಿಗುಣ ಗಳಿಂದ ಪ್ರೇರಿತನಾಗಿ ಪುಣ್ಯಪಾಪಕಾರ್ಯಗಳಲ್ಲಿ ಪ್ರವರ್ತಿಸುತ್ತಾನೆ. ಆಯಾ ಕಾರ್ಯಗಳ ಫಲವಾಗಿ ಒಳ್ಳೆಯ ಮತ್ತು ಕೆಟ್ಟ ಯೋನಿಗಳಲ್ಲಿ

ಹುಟ್ಟುತ್ತಾನೆ. ಅದರ ಮೂಲಕ ಮತ್ತೆ ಪುಣ್ಯ ಪಾಪ ಕಾರ್ಯಗಳನ್ನು ಮಾಡುತ್ತಾ ಅದಕ್ಕೆ ಸರಿಯಾದ ಜನ್ಮಗಳನ್ನು ಪಡೆಯುತ್ತಾನೆ. ಎಂದಿನವರೆಗೆ ಅವನು ಅಮಾನಿತ್ವಾದಿ ಗುಣಗಳನ್ನು ಆಚರಿಸುವುದಿಲ್ಲವೋ ಅಂದಿನವರೆಗೆ ಜನ್ಮ ಪರಂಪರೆಗಳಲ್ಲಿ ಹುಟ್ಟುತ್ತಲೇ ಇರುತ್ತಾನೆ. ಇಂದಿನ ಜನ್ಮದಲ್ಲಿರುವ ಸತ್ತ್ವರಜಸ್ತಮೋ ಗುಣಗಳೇ ಮುಂದಿನ ಜನ್ಮಗಳಿಗೆ ಕಾರಣವಾಗುತ್ತವೆ. ಆದ್ದರಿಂದ ಆತ್ಮನಿಗೆ ಶರೀರ ಸಂಬಂಧ ಉಂಟಾಗಿ ಬಂಧ ಉಂಟಾಗುವುದಕ್ಕೆ ಸತ್ತ್ವರಜಸ್ತಮೋಗುಣಗಳ ಸಂಬಂಧವೇ ಕಾರಣವಾಗಿದೆ.

## V ಚೇತನನು ತನ್ನ ಶರೀರಸಂಬಂಧವನ್ನು ಹೋಗಲಾಡಿಸಿಕೊಳ್ಳಲು ಅರಿಯಬೇಕಾದ ವಿವೇಕಜ್ಞಾನ (ಶ್ಲೋ॰ 22-34)

ಶುದ್ಧಆತ್ಮನು ಪ್ರಕೃತಿ ಸಂಬಂಧ ಪಡೆದ ಮೇಲೆ ತನ್ನ ಆ ಒಂದು ದೇಹ ಮಾತ್ರಕ್ಕೆ ತಾನೇ ಯಜಮಾನನೂ, ಉಪದ್ರಷ್ಟಾ, ಅನುಮಂತಾ, ಭರ್ತಾ, ಭೋಕ್ತಾ ಮತ್ತು ಮಹೇಶ್ವರನೂ ಆಗಿದ್ದಾನೆ. ಅದು ಹೇಗೆಂದರೆ- ತಾನು ಪಡೆದಿರುವ ದೇಹದಲ್ಲಿ ಉಂಟಾಗುವ ಶಾರೀರಿಕ, ಮಾನಸಿಕ ಪ್ರವೃತ್ತಿಗಳನ್ನು ಅರಿತು ಸಾಕ್ಷಿಯಾಗಿ ನೋಡಿಕೊಂಡು ಆ ದೇಹಕ್ಕೆ **ಉಪದ್ರಷ್ಟಾ** ಆಗಿದ್ದಾನೆ. ಆ ದೇಹದಲ್ಲಿ ದುಃಖಗಳನ್ನು ಕಡಿಮೆ ಮಾಡಿಕೊಂಡು, ಸುಖವನ್ನು ಅನುಭವಿಸುವುದಕ್ಕಾಗಿ ತನ್ನ ದೇಹ, ಇಂದ್ರಿಯ, ಮನಸ್ಸುಗಳಿಗೆ ಕಾರ್ಯ ಮಾಡಲು ಅನುಮತಿ ನೀಡುವವನಾಗಿ **ಅನುಮಂತ,** ಆಗಿದ್ದಾನೆ. ಆ ದೇಹವನ್ನು ಹುಟ್ಟಿದಂದಿನಿಂದ ಸಾಯುವವರೆಗೆ ಭರಿಸುತ್ತಾ ಅದಕ್ಕೆ **ಭರ್ತಾ** ಆಗಿದ್ದಾನೆ. ಆ ದೇಹದಲ್ಲಿ ಉಂಟಾಗುವ ಸುಖದುಃಖಗಳನ್ನು ಅನುಭವಿಸುತ್ತಾ **ಭೋಕ್ತಾ** ಆಗಿದ್ದಾನೆ. ಆ ದೇಹಕ್ಕೆ ಸ್ವಾಮಿಯಾಗಿ ಅದನ್ನು ಧರಿಸಿ, ನಿಯಮಿಸಿ, ಆಳುತ್ತಾ ಆ ತನ್ನದೇಹಮಾತ್ರಕ್ಕೆ ಅವನು **ಮಹೇಶ್ವರನೂ** ಆಗಿದ್ದಾನೆ. ಈ ರೀತಿಯಾಗಿ ಜೀವಾತ್ಮನನ್ನೂ, ಅವನಿರುವ ಪ್ರಾಕೃತಿಕ ಶರೀರವನ್ನೂ, ಅದರಲ್ಲಿರುವ ತ್ರಿಗುಣಗಳನ್ನೂ, ಅವುಗಳೆಲ್ಲದರ ನಿಜ ಸ್ವರೂಪವನ್ನೂ ಯಥಾವತ್ತಾಗಿ ವಿವೇಚಿಸಿ ತಿಳಿಯುವವನು ಪುನರ್ಜನ್ಮವನ್ನು ಪಡೆಯುವುದಿಲ್ಲ.

ಕೆಲವರು ಆತ್ಮನನ್ನು ಧ್ಯಾನಯೋಗದಿಂದಲೂ, ಕೆಲವರು ಜ್ಞಾನ ಯೋಗದಿಂದಲೂ, ಕೆಲವರು ಕರ್ಮಯೋಗದಿಂದಲೂ, ಮತ್ತೆ ಕೆಲವರು

ತತ್ತ್ವದರ್ಶಿಗಳಾದ ಜ್ಞಾನಿಗಳಿಂದ ಕೇಳಿ ಉಪದೇಶ ಪಡೆದು ಅದರಂತೆ ಸಾಧನೆ, ಉಪಾಸನೆ ಮಾಡುವುದರ ಮೂಲಕವೂ ಆತ್ಮಸಾಕ್ಷಾತ್ಕಾರ ಪಡೆದು ಮೃತ್ಯುವನ್ನು ದಾಟುವರು.

ಜ್ಞಾನಿಯು ಶ್ರೇಯಸ್ಸನ್ನು ಪಡೆಯಲು ಆತ್ಮಸ್ವರೂಪದ ವಿವೇಕಾನುಸಂಧಾನವನ್ನು ಮಾಡುತ್ತಿರಬೇಕು. ಜಗತ್ತಿನಲ್ಲಿ ಹುಟ್ಟಿರುವ ಪ್ರತಿಯೊಂದು ಜಂತುವೂ ಕ್ಷೇತ್ರ ಮತ್ತು ಕ್ಷೇತ್ರಜ್ಞರ (ಶರೀರ ಮತ್ತು ಜೀವಾತ್ಮರ) ಸಂಯೋಗದಿಂದಲೇ ಉಂಟಾಗಿವೆ. ದೇವಮನುಷ್ಯಾದಿ ಸಮಸ್ತ ಶರೀರಗಳೂ ಹುಟ್ಟುತ್ತಲೂ, ಬೆಳೆಯುತ್ತಲೂ ನಾಶಹೊಂದುತ್ತಲೂ ಇವೆ. ಆದರೆ ಆಯಾ ಶರೀರಗಳಲ್ಲಿರುವ ಜೀವಾತ್ಮನು ಮಾತ್ರ ಎಂದಿಗೂ ನಾಶಹೊಂದುವುದಿಲ್ಲ, ಶರೀರ ಶರೀರಗಳಲ್ಲಿ ಭೇದವಿದೆಯೇ ವಿನಹ ಅವುಗಳಲ್ಲಿ ಅಂತರಾತ್ಮನಾಗಿರುವ ಜೀವಾತ್ಮರೆಲ್ಲರೂ ಪರಿಶುದ್ಧ ಆತ್ಮಸ್ವರೂಪದಲ್ಲಿ ಜ್ಞಾನಾಕಾರದಿಂದ ಸಮನಾಗಿರುವರು.

ಸರ್ವ ಕರ್ಮಗಳೂ ಪ್ರಕೃತಿಯಿಂದ ನಡೆಸಲ್ಪಡುತ್ತಿವೆ. ಶರೀರದಲ್ಲಿರುವ ಶುದ್ಧಆತ್ಮನು ತನ್ನ ನಿಜಸ್ವರೂಪದಲ್ಲಿ ಕರ್ಮಗಳನ್ನು ಮಾಡುವುದೂ ಇಲ್ಲ, ಮತ್ತು ಕರ್ಮಗಳು ಅವನನ್ನು ಬಂಧಿಸುವುದೂ ಇಲ್ಲ ಎಂಬುದನ್ನೂ, ಪ್ರಕೃತಿ, ಆತ್ಮ, ಕರ್ಮ, ಇವುಗಳ ನಿಜಸ್ವರೂಪವನ್ನೂ ಅರಿಯುವವನು ತನ್ನ ನಿಜಸ್ವರೂಪವಾದ ಪ್ರತ್ಯಗಾತ್ಮನನ್ನು ಸಾಕ್ಷಾತ್ಕರಿಸುವನು.

ಆಕಾಶವು ಹೇಗೆ ಎಲ್ಲೆಲ್ಲೂ ವ್ಯಾಪಿಸಿಕೊಂಡಿದ್ದರೂ, ಎಲ್ಲ ವಸ್ತುಗಳೊಂದಿಗೆ ಸೇರಿಕೊಂಡಿದ್ದರೂ, ಅತಿ ಸೂಕ್ಷ್ಮವಾಗಿರುವುದರಿಂದ ಆಯಾ ವಸ್ತುಗಳ ಗುಣದೋಷಗಳನ್ನು ಹೊಂದುವುದಿಲ್ಲವೋ, ಹಾಗೆಯೇ ಆತ್ಮನು ಅತ್ಯಂತ ಸೂಕ್ಷ್ಮನಾಗಿರುವುದರಿಂದ ಸರ್ವತ್ರ ದೇವಮನುಷ್ಯಾದಿ ದೇಹದಲ್ಲಿದ್ದರೂ ಕೂಡ ಆಯಾ ದೇಹಗಳ ಸ್ವಭಾವಗಳು ಅವನಿಗೆ ಅಂಟುವುದಿಲ್ಲ, ಒಬ್ಬನೇ ಆದ ಸೂರ್ಯನು ತನ್ನ ಪ್ರಭೆಯಿಂದ ಸಮಸ್ತ ಲೋಕವನ್ನೂ ಪ್ರಕಾಶಪಡಿಸುವಂತೆ ಕ್ಷೇತ್ರದಲ್ಲಿರುವ ಕ್ಷೇತ್ರಿಯು (ಅಂದರೆ ಶರೀರದಲ್ಲಿರುವ ಜೀವಾತ್ಮನು) ಸಮಸ್ತ ಕ್ಷೇತ್ರವನ್ನೂ (ಶರೀರವನ್ನೂ) ಆಪಾದಮಸ್ತಕವಾಗಿ ತನ್ನ ಜ್ಞಾನದಿಂದ ಪ್ರಕಾಶಪಡಿಸುತ್ತಾನೆ.

"ಮೇಲೆ ತಿಳಿಸಿರುವಂತೆ ಜ್ಞಾನವೆಂಬ ಕಣ್ಣಿನ ಮೂಲಕ ಕ್ಷೇತ್ರ ಮತ್ತು ಕ್ಷೇತ್ರಜ್ಞರ (ಶರೀರ ಮತ್ತು ಜೀವಾತ್ಮರ) ಸ್ವರೂಪ ಮತ್ತು ಭೇದಗಳನ್ನು ಅರಿತು, ಪ್ರತ್ಯಗಾತ್ಮನನ್ನೂ, ದೇವಮನುಷ್ಯಾದಿ ರೂಪದಲ್ಲಿರುವ ಪ್ರಕೃತಿಯನ್ನೂ, ಅವುಗಳ ನಿಜಸ್ವರೂಪವನ್ನೂ ತಿಳಿದು, ಪ್ರಕೃತಿಯಿಂದ ಬಿಡುಗಡೆ ಹೊಂದಲು ಬೇಕಾದ ಅಮಾನಿತ್ವಾದಿ ಸಾಧನೆಗಳನ್ನೂ ಅರಿತು, ಅದರ ಪ್ರಕಾರ ಆಚರಿಸುವವರು ಪ್ರತ್ಯಗಾತ್ಮಸ್ವರೂಪ ಸಾಕ್ಷಾತ್ಕಾರವನ್ನು ಪಡೆಯುತ್ತಾರೆ' - ಎಂದು ಈ ಅಧ್ಯಾಯದ ಕೊನೆಯಲ್ಲಿ ಪರಮಾತ್ಮನು ಉಪದೇಶ ಮಾಡಿದ್ದಾನೆ.

ಈ ಅಧ್ಯಾಯದಲ್ಲಿ ಕ್ಷೇತ್ರ ಮತ್ತು ಕ್ಷೇತ್ರಜ್ಞ (ಶರೀರ ಮತ್ತು ಜೀವಾತ್ಮ) ಇವರುಗಳ ವಿಚಾರವು ವಿವರಿಸಲ್ಪಟ್ಟಿದೆ.

★★★★

# ಭಗವದ್ಗೀತೆ ಅಧ್ಯಾಯ 14

## ಗುಣತ್ರಯವಿಭಾಗಯೋಗ

## ಗೀತಾರ್ಥಸಂಗ್ರಹ ಶ್ಲೋಕ 18

ಗುಣಬಂಧವಿಧಾ ತೇಷಾಂ
ಕರ್ತೃತ್ವಂ ತನ್ನಿವರ್ತನಂ।
ಗತಿತ್ರಯಸ್ವ ಮೂಲತ್ವಂ
ಚತುರ್ದಶಉದೀರ್ಯತೇ॥

ಈ ಶ್ಲೋಕದಲ್ಲಿ ಭಗವದ್ಗೀತೆಯ 14ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

ಗುಣಬಂಧವಿಧಾಂ - ಸತ್ತ್ವರಜಸ್ತಮೋಗುಣಗಳು ಚೇತನನಿಗೆ ಸಂಸಾರ ಬಂಧವನ್ನು (ಶರೀರ ಸಂಬಂಧವನ್ನು) ಉಂಟುಮಾಡುವ ಪ್ರಕಾರವೂ;

ತೇಷಾಂಕರ್ತೃತ್ವಂ - ಆ ತ್ರಿಗುಣಗಳು ಚೇತನನ ಕಾರ್ಯಗಳಿಗೆ ಕಾರಣವಾಗಿರುವಿಕೆಯೂ;

ತನ್ನಿವರ್ತನಂ - ಆ ತ್ರಿಗುಣಗಳ ಪ್ರಭಾವವನ್ನು ಹೋಗಲಾಡಿಸಿಕೊಳ್ಳಲು ಮಾರ್ಗವೂ; ಗತಿತ್ರಯ ಸ್ವಮೂಲತ್ವಂ- ಐಶ್ವರ್ಯ ಕೈವಲ್ಯ ಮತ್ತು ಭಗವದನುಭವಾದಿ ಗತಿತ್ರಯಗಳ ಪ್ರಾಪ್ತಿಗೆ ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯವು ಎಂಬುದೂ;

ಚತುರ್ದಶ ಉದೀರ್ಯತೇ - 14ನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಭಗವದ್ಗೀತೆಯ 14ನೆಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

I ತ್ರಿಗುಣಗಳು ಚೇತನನಿಗೆ ಸಂಸಾರಬಂಧ ಉಂಟುಮಾಡುವ ಪ್ರಕಾರ - (ಶ್ಲೋ 1-8)

ಜಗತ್ಸೃಷ್ಟಿಗೆ ಕಾರಣವಾದ ಈ ಮೂಲ ಪ್ರಕೃತಿಯು ಪರಮಾತ್ಮನಿಗೆ ಸೇರಿದ್ದು.

ಪರಮಾತ್ಮನು ಈ ಭೋಗಕ್ಷೇತ್ರವಾದ ಅಚೇತನಪ್ರಕೃತಿಯೊಂದಿಗೆ ಭೋಕ್ತವಾದ ಚೇತನ ಪ್ರಕೃತಿಯನ್ನು ಸೇರಿಸಿ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಆದ್ದರಿಂದ ಅವನೇ ಈ ಸಮಸ್ತ ಜಗತ್ತಿಗೂ ಬೀಜಪ್ರದನಾದ ತಂದೆಯಾಗಿದ್ದಾನೆ.

ಈ ಪ್ರಕೃತಿಯಲ್ಲಿ ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರು ಗುಣಗಳಿವೆ. ಸ್ವತಃ ವಿಕಾರರಹಿತವಾದ ಆತ್ಮನು ಪ್ರಕೃತಿಸಂಬಂಧ ಪಡೆದಮೇಲೆ ಪ್ರಕೃತಿಯ ಈ ತ್ರಿಗುಣಗಳಿಂದ ಬಂಧಿತನಾಗಿ ತ್ರಿಗುಣಗಳ ತಾರತಮ್ಯಕ್ಕೆ ಅನುಗುಣವಾದ ಶರೀರಗಳನ್ನು ಪಡೆಯುತ್ತಾನೆ.

ತ್ರಿಗುಣಗಳಲ್ಲಿ, ಸತ್ತ್ವಗುಣವು - ನಿರ್ಮಲವಾದುದೂ, ವಸ್ತುಗಳ ನಿಜಸ್ವರೂಪ ಪ್ರಕಾಶಕವಾದುದೂ, ಆರೋಗ್ಯಪ್ರದವಾದುದೂ ಆಗಿದೆ. ಇದು ದೇಹಿಗೆ ಜ್ಞಾನವನ್ನು, ಸುಖಸಂತೋಷಗಳನ್ನು ಉಂಟುಮಾಡುತ್ತದೆ. ಮತ್ತು ಅದರ ಮೂಲಕ ಆತ್ಮನನ್ನು ಬಂಧಿಸುತ್ತದೆ.

ರಜೋಗುಣವು - ರಾಗ (ಕಾಮ) ರೂಪವಾದುದು. ಇದು ಚೇತನನಿಗೆ ಶಬ್ದಾದಿ ವಿಷಯಗಳಲ್ಲಿ ಆಸೆ (ಕಾಮ) ಉಂಟುಮಾಡುವುದಕ್ಕೂ ಪುತ್ರಮಿತ್ರಾದಿ ಬಂಧುಗಳಲ್ಲಿ ಮೋಹ ಉಂಟುಮಾಡುವುದಕ್ಕೂ ಕಾರಣವಾಗಿದೆ. ಇದು ದೇಹಿಗೆ ಕರ್ಮದಲ್ಲಿ ಆಸೆ ಉಂಟುಮಾಡುವುದರ ಮೂಲಕ ಆತ್ಮನನ್ನು ಬಂಧಿಸುತ್ತದೆ.

ತಮೋಗುಣವು ಅಜ್ಞಾನಜನ್ಯವಾದುದು. ಇದು ಪ್ರಮಾದ (ಅಂದರೆ ಮಾಡಬೇಕಾದ ಕರ್ಮವನ್ನು ಬಿಟ್ಟು ಮತ್ತೊಂದನ್ನು ಮಾಡುವುದು;) ಆಲಸ್ಯ (ಅಂದರೆ ಯಾವ ಕೆಲಸವನ್ನೂ ಆರಂಭಿಸದಂತೆ ಮಾಡುವ

ಸ್ವಭಾವ) ಭ್ರಮೆ, ನಿದ್ರೆ ಇವುಗಳನ್ನು ಉಂಟುಮಾಡಿ ಆತ್ಮನನ್ನು ಬಂಧಿಸುತ್ತದೆ. ತಮೋಗುಣವು ಅಧಿಕವಾದಾಗ ಚೇತನನು ಬುದ್ಧಿಯಲ್ಲಿ ಮಂಕುಕವಿದು ಬೇಸರ, ಜಡತ್ವನೊಂದಿ ಸೋಮಾರಿಯಾಗಿ ಇರುತ್ತಾನೆ.

II **ಸತ್ತ್ವರಜಸ್ತಮೋಗುಣಗಳ ಕಾರ್ಯಕಲಾಪಗಳು-(ಶ್ಲೋ 9-18)**

ಈ ಸತ್ತ್ವರಜಸ್ತಮೋಗುಣಗಳೇ ಚೇತನನ ಕಾರ್ಯಗಳಿಗೆ ಪ್ರಧಾನ ಕಾರಣವಾಗಿವೆ. ಈ ಮೂರು ಗುಣಗಳಲ್ಲಿ ಒಂದು ಗುಣವು ಪ್ರಧಾನವಾದಾಗ ಅದು ಮತ್ತೆರಡು ಗುಣಗಳನ್ನು ಅಡಗಿಸಿ ತಾನು ಚೇತನನ ಮೂಲಕ ಕೆಲಸಮಾಡಿಸುತ್ತದೆ. - ಹೇಗೆಂದರೆ

**ಸತ್ತ್ವಗುಣವು** ಅಧಿಕವಾಗಿ ಅದು ತಲೆಎತ್ತಿದಾಗ - ಆ ಶರೀರದಲ್ಲಿ ಪ್ರಕಾಶವುಂಟಾಗಿ ಜ್ಞಾನವು ಉಂಟಾಗುತ್ತದೆ. ಸತ್ತ್ವಗುಣದಿಂದ ಅವನಿಗೆ ನಿರ್ಮಲವಾದ, ದುಃಖರಹಿತವಾದ ಸಾತ್ತ್ವಿಕಫಲವು ಲಭಿಸಿ ಆತ್ಮ ಸಾಕ್ಷಾತ್ಕಾರಜ್ಞಾನವೂ ಲಭಿಸಬಲ್ಲದು. ಅವನು ಮೇಲಾದ ಉತ್ತಮ ಪದವಿಯನ್ನು ಹೊಂದುತ್ತಾನೆ

**ರಜೋಗುಣವು** ಅಧಿಕವಾಗಿ ಅದು ತಲೆ ಎತ್ತಿದಾಗ - ಆ ಚೇತನನ ಶರೀರದಲ್ಲಿ ಲೋಭಸ್ವಭಾವವೂ, ವ್ಯರ್ಥವಾಗಿ ಕರ್ಮಮಾಡುವ ಮತ್ತು ಫಲಕ್ಕಾಗಿಯೇ ಕರ್ಮ ಮಾಡುವ ಪ್ರವೃತ್ತಿ, ಇಂದ್ರಿಯಸುಖಗಳಲ್ಲಿ ಇಚ್ಛೆ, ವಿಷಯಾಸಕ್ತಿ ಇವುಗಳೆಲ್ಲವೂ ಉಂಟಾಗುತ್ತವೆ. ರಜೋಗುಣದಿಂದ ಸ್ವರ್ಗಾದಿಫಲಗಳಲ್ಲಿ ಆಸೆ ಉಂಟಾಗುತ್ತದೆ. ಅವನು ಫಲಸಾಧನೆಗಾಗಿಯೇ ಕರ್ಮಗಳನ್ನು ಮಾಡುತ್ತಾ, ಫಲಾನುಭವಕ್ಕಾಗಿ ಪುನರ್ಜನ್ಮಗಳನ್ನು ಹೊಂದುತ್ತಾ, ಮೇಲಾದ ಪದವಿಯನ್ನೂ ಹೊಂದದೆ, ಅಧೋಗತಿಗೂ ಇಳಿಯದೇ ಮಧ್ಯದ ಅವಸ್ಥೆಯಲ್ಲಿ ನಿಲ್ಲುವನು.

**ತಮೋಗುಣವು** ಅಧಿಕವಾಗಿ ಅದು ತಲೆ ಎತ್ತಿದಾಗ ಆ ಚೇತನನ ಶರೀರದಲ್ಲಿ ಬುದ್ಧಿಗೆ ಮಂಕು ಕವಿದು, ಬೇಸರ ಉಂಟಾಗಿ ಕೆಲಸ ಮಾಡಲು ಸೋಮಾರಿತನ, ನಿದ್ರೆ, ಅಜಾಗ್ರತೆ, ಮೋಹ (ಅಂದರೆ ವಿಪರೀತಜ್ಞಾನ)ಇವೆಲ್ಲವೂ ಉಂಟಾಗುತ್ತವೆ.

ತಮೋಗುಣದಿಂದ ಅಜ್ಞಾನವು ಪ್ರಾಪ್ತವಾಗಿ, ಕೆಟ್ಟಕಾರ್ಯಗಳಲ್ಲಿ ಪ್ರವೃತ್ತಿ ಉಂಟಾಗಿ, ಪ್ರಮಾದ, ವಿಪರೀತ ಜ್ಞಾನ ಇವುಗಳೆಲ್ಲವೂ ಉಂಟಾಗುತ್ತವೆ.

ಸತ್ತ್ವಗುಣವೃದ್ಧಿಯಾಗಿರುವಾಗ ಮರಣ ಹೊಂದಿದರೆ-ಆಗ ಅವನು ತತ್ತ್ವಗಳನ್ನು ಅರಿತವರ ಉತ್ತಮ ವಂಶದಲ್ಲಿ ಹುಟ್ಟಿ, ಸತ್ತ್ವಸ್ಥ ಪುಣ್ಯ ಕರ್ಮಗಳನ್ನು ಮಾಡಿ ನಿರ್ಮಲವೂ ಸಾತ್ತ್ವಿಕವೂ ಆದ ಫಲವನ್ನು ಹೊಂದುತ್ತಾನೆ -ಮತ್ತು ಉತ್ತಮವಾದ ಗತಿಯನ್ನು ಹೊಂದುತ್ತಾನೆ -ರಜೋಗುಣವು ಅಧಿಕವಾಗಿರುವಾಗ ಮರಣ ಹೊಂದಿದರೆ-ಫಲಾಪೇಕ್ಷೆಯಿಂದ ಕರ್ಮ ಮಾಡುವವರ ಕುಲದಲ್ಲಿ ಹುಟ್ಟಿ ಕರ್ಮಗಳನ್ನು ಮಾಡುತ್ತಾ, ಆ ಕರ್ಮಗಳನ್ನು ಅನುಭವಿಸಲು ಮತ್ತೆ ಮತ್ತೆ ಜನ್ಮ ಹೊಂದುತ್ತಾ ಜನ್ಮ ಪರಂಪರೆಗಳಲ್ಲಿ ಸಾಂಸಾರಿಕ ದುಃಖ ಪರಂಪರೆಗಳನ್ನು ಅನುಭವಿಸುತ್ತಾ ಇರುವನು. ತಮೋಗುಣವು ಅಧಿಕವಾಗಿರುವಾಗ ಮರಣ ಹೊಂದಿದವನು ಜ್ಞಾನವಿಲ್ಲದ ಪ್ರಾಣಿಗಳ ಯೋನಿಯಲ್ಲಿ ಜನಿಸುತ್ತಾನೆ.

III ತ್ರಿಗುಣಗಳ ಪ್ರಭಾವವನ್ನು ಹೋಗಲಾಡಿಸಿಕೊಳ್ಳಬೇಕು. (ಶ್ಲೋ 19 - 20)

ಚೇತನನು ತಾನು ನಿಜಸ್ವರೂಪದಲ್ಲಿ ತ್ರಿಗುಣಾತೀತನು ಅಂದರೆ ತ್ರಿಗುಣಗಳಿಗಿಂತ ಬೇರ್ಪಟ್ಟವನು ಎಂಬುದನ್ನು ಅರಿಯ ಬೇಕು-ಸಾತ್ತ್ವಿಕ ಆಹಾರಗಳನ್ನು ಭುಜಿಸುತ್ತಾ ಭಗವದಾರಾಧನ ರೂಪವಾಗಿ ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳನ್ನು ಆಚರಿಸುತ್ತಾ ರಜೋಗುಣ, ತಮೋಗುಣಗಳ ಪ್ರಭಾವವನ್ನು ಹೋಗಲಾಡಿಸಿಕೊಳ್ಳಬೇಕು. ತನ್ನ ಶರೀರದಲ್ಲಿರುವ ತ್ರಿಗುಣಗಳನ್ನು ಕರ್ಮಗಳ ಕರ್ತೃವಾಗಿಯೂ, ಆತ್ಮನಾದ ತನ್ನನ್ನು ಅಕರ್ತೃವಾಗಿಯೂ ತಿಳಿದು, ತಾನು ಆತ್ರಿಗುಣಗಳಿಗಿಂತ ಬೇರೆಯಾಗಿ ಜ್ಞಾನಾಕಾರವಾಗಿರುವ ಆತ್ಮನು ಎಂದು ಅರಿತು ಆತ್ಮಾನುಭವ ಪಡೆಯಬೇಕು. ಆಗ ಅವನು ತ್ರಿಗುಣಗಳನ್ನು ದಾಟಿ ತ್ರಿಗೂಣಾತೀತನಾಗಿ, ಜನ್ಮ ಮೃತ್ಯು ಜರೆ ಇವುಗಳಿಂದ ಬಿಡಲ್ಪಟ್ಟವನಾಗಿ ಅಮೃತರೂಪವಾದ ಶುದ್ಧಾತ್ಮಾನುಭವ ಹೊಂದುತ್ತಾನೆ.

ತ್ರಿಗುಣಾತೀತನಾದ ಪುರುಷನ ಆಚಾರ ವ್ಯವಹಾರಗಳು (ಶ್ಲೋಕ 21 - 25)

ತ್ರಿಗುಣಾತೀತನ ನಡುನುಡಿಗಳಾವುವು ಮತ್ತು ತ್ರಿಗುಣಾತೀತನಾಗಲು ಉಪಾಯವೇನು ಎಂದು ಅರ್ಜುನನು ಪರಮಾತ್ಮನನ್ನು ಕೇಳುತ್ತಾನೆ. ಅದಕ್ಕೆ ಪರಮಾತ್ಮನು ಈರೀತಿಉಪದೇಶ ನೀಡುತ್ತಾನೆ.

ತ್ರಿಗುಣಾತೀತನಾದ ಪುರುಷನು ಆತ್ಮನಿಗಿಂತ ಬೇರೆಯಾದ ವಸ್ತುಗಳಲ್ಲಿ ವ್ಯಾಮೋಹವಿಲ್ಲದವನಾಗಿ ಇರುತ್ತಾನೆ. ಆದ್ದರಿಂದ ತ್ರಿಗುಣಗಳಿಂದ ಉಂಟಾಗುವ ಪ್ರಕಾಶ, ಪ್ರವೃತ್ತಿ ಮೋಹಗಳಿಂದ ಮನಸ್ಸು ಕಲಕದವನಾಗಿ ಇರುತ್ತಾನೆ. ಅವುಗಳಿಂದ ಉಂಟಾಗುವ ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿಗಳನ್ನು ಇಚ್ಛಿಸದೆ ಮತ್ತು ದ್ವೇಷಿಸದೆ ಉದಾಸೀನನಾಗಿ ಇರುತ್ತಾನೆ. ತನ್ನ ಶರೀರದಲ್ಲಿರುವ ಸತ್ತ್ವರಜಸ್ತಮೋಗುಣಗಳು ಅವುಗಳ ಕಾರ್ಯವಾದ ಪ್ರಕಾಶ, ಪ್ರವೃತ್ತಿ ಮತ್ತು ಮೋಹಾದಿಕಾರ್ಯಗಳನ್ನು ಮಾಡುತ್ತಿವೆ; ಆತ್ಮನಾದ ತಾನು ಏನನ್ನೂ ಮಾಡುತ್ತಿಲ್ಲ ಎಂದು ಸುಮ್ಮನೆ ಇರುತ್ತಾನೆ ಮತ್ತು ತ್ರಿಗುಣಗಳ ಕಾರ್ಯಗಳಿಗೆ ಅನುಗುಣವಾಗಿ ವರ್ತಿಸುವುದಿಲ್ಲ, ಅಷ್ಟು ಮಾತ್ರವಲ್ಲದೆ ಸುಖದುಃಖಗಳನ್ನೂ ಕಲ್ಲು ಚಿನ್ನಗಳನ್ನೂ, ಪ್ರಿಯ ಅಪ್ರಿಯವಾದವುಗಳನ್ನೂ ಎಲ್ಲವನ್ನೂ ಸಮನಾಗಿ ಭಾವಿಸಿ, ಆತ್ಮನಾದ ತನಗೆ ಅವುಗಳೊಂದಿಗೆ ಯಾವ ಸಂಬಂಧವೂ ಇಲ್ಲ ಎಂದು ಅರಿತು ಸಮಚಿತ್ತನಾಗಿ ಶಾಂತನಾಗಿ ಇರುವನು. ತನಗಾಗಿ ಯಾವ ಕಾರ್ಯವನ್ನೂ ಪ್ರಾರಂಭಿಸುವುದಿಲ್ಲ, ಈ ರೀತಿಯಾಗಿ ಇರುವವನು ತ್ರಿಗುಣಾತೀತ ನೆನಿಸಿಕೊಳ್ಳುವನು.

## IV ತ್ರಿಗುಣಾತೀತನಾಗುವುದಕ್ಕೂ ಗತಿತ್ರಯಗಳ ಪ್ರಾಪ್ತಿಗೂ ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯವು (ಶ್ಲೋಕಗಳು 26-27)

ಜೀವಾತ್ಮನಿಗೆ ಪ್ರಕೃತಿಯ ವಾಸನೆಗಳೂ ತ್ರಿಗುಣಗಳ ಸಂಬಂಧವೂ ಅನಾದಿಕಾಲದಿಂದ ಪ್ರಾಪ್ತವಾಗಿ ಅನುವರ್ತಿಸಿಕೊಂಡು ಬಂದಿರುವುದರಿಂದ ಕೇವಲ ಪ್ರಕೃತಿ, ಆತ್ಮ ಇವುಗಳ ವಿವೇಕಜ್ಞಾನ ಅನುಸಂಧಾನದಿಂದ ಮಾತ್ರ ತ್ರಿಗುಣಾತೀತನಾಗಲು ಸಾಧ್ಯವಿಲ್ಲ, ಆಶ್ರಿತ ವತ್ಸಲನಾದ ಪರಮಾತ್ಮನಲ್ಲಿ ನಿಶ್ಚಲವಾದ ಭಕ್ತಿಹೊಂದಿ ಪರಮಾತ್ಮನೊಬ್ಬನಲ್ಲೇ ಸ್ಥಿರವಾಗಿ ನೆಲೆಸಿರುವ ಏಕಾಂತ ಭಕ್ತಿಯಿಂದ ಅವನನ್ನು ಸೇವೆ ಮಾಡುವವನು ಈ ಜಯಿಸಲು ಅಸಾಧ್ಯವಾದ ತ್ರಿಗುಣಗಳನ್ನು ದಾಟಿ ಬ್ರಹ್ಮಭಾವ ಹೊಂದುವನು ಎಂದು (ಈ ಅಧ್ಯಾಯದ ೨೬ನೇ ಶ್ಲೋಕದಲ್ಲಿ) ಶ್ರೀಕೃಷ್ಣಪರಮಾತ್ಮನು ತಿಳಿಸಿದ್ದಾನೆ. ತ್ರಿಗುಣಾತೀತನಾಗುವುದಕ್ಕೂ ಐಶ್ವರ್ಯ ಕೈವಲ್ಯ ಮೋಕ್ಷಾದಿ ಗತಿತ್ರಯಗಳ

ಪ್ರಾಪ್ತಿಗೂ ಪರಮಾತ್ಮನಲ್ಲಿ ಅನನ್ಯಭಕ್ತಿಹೊಂದಿ ಶರಣಾಗುವುದೇ ಉಪಾಯವು.

ಈ ಅಧ್ಯಾಯದಲ್ಲಿ ಸತ್ತ್ವರಜಸ್ತಮೋ ಗುಣಗಳು, ಜೀವಾತ್ಮನನ್ನು ಬಂಧಿಸುವ ಪ್ರಕಾರವೂ, ಅವುಗಳ ಬಂಧನವನ್ನು ಬಿಡಿಸಿಕೊಳ್ಳಲು ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯವು ಎಂಬುದೂ ತಿಳಿಸಲ್ಪಟ್ಟಿದೆ.

★★★★

# ಭಗವದ್ಗೀತೆ ಅಧ್ಯಾಯ 15

## ಪುರುಷೋತ್ತಮಯೋಗ

### ಗೀತಾರ್ಥಸಂಗ್ರಹ ಶ್ಲೋಕ ೧೯

**ಅಚಿನ್ಮಿಶ್ರಾದ್ವಿಶುದ್ಧಾಚ್ಚ**
**ಚೇತನಾತ್ಪುರುಷೋತ್ತಮಃ ।**
**ವ್ಯಾಪನಾದ್ಭರಣಾತ್ಸ್ವಾಮ್ಯಾತ್**
**ಅನ್ಯಃ ಪಂಚದಶೋದಿತಃ ॥**

ಈ ಶ್ಲೋಕದಲ್ಲಿ ಭಗವದ್ಗೀತೆಯ ೧೫ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಅಚಿನ್ಮಿಶ್ರಾತ್ ಚೇತನಾತ್** - ಪ್ರಕೃತಿಸಂಬಂಧದಿಂದ ಕೂಡಿದ ಬದ್ಧ ಜೀವಾತ್ಮರಿಗಿಂತಲೂ,

**ವಿಶುದ್ಧಾತ್ ಚ** - ಪ್ರಕೃತಿಸಂಬಂಧದಿಂದ ಬಿಡುಗಡೆ ಹೊಂದಿದ ಮುಕ್ತ ಜೀವಾತ್ಮರಿಗಿಂತಲೂ,

**ವ್ಯಾಪನಾತ್, ಭರಣಾತ್, ಸ್ವಾಮ್ಯಾತ್** - ಅವರನ್ನು ಒಳಗೂ ಹೊರಗೂ ವ್ಯಾಪಿಸಿ, ಧರಿಸಿ, ನಿಯಮಿಸುತ್ತಾ ಒಡೆಯನಾಗಿ ಇರುವುದರಿಂದ

ಪುರುಷೋತ್ತಮತ್ವ - ಪುರುಷೋತ್ತಮನಾದ ಪರಮಾತ್ಮನು ಬೇರೆಯಾದವನಾಗಿದ್ದಾನೆ ಎಂದು

<u>ಶರಣಾಗತಿ</u> - ೧೫ನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಭಗವದ್ಗೀತೆಯ ಈ 15ನೆಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

I **ಈ ಪ್ರಾಕೃತಿಕ ಜಗತ್ತಿಗಿಂತಲೂ, ಮತ್ತು ಅದರೊಂದಿಗೆ ಸೇರಿಕೊಂಡಿರುವ ಬದ್ಧಜೀವಾತ್ಮರಿಗಿಂತಲೂ ಪರಮಾತ್ಮನು ಬೇರ್ಪಟ್ಟವನಾಗಿದ್ದಾನೆ. (ಶ್ಲೋಕ ೧-೧೦)**

ಈ ಜಗತ್ತೂ, ಜಗತ್ತಿನಲ್ಲಿರುವ ಜೀವಿಗಳೂ ಪರಮಾತ್ಮನ ವಿಭೂತಿಗಳಾಗಿದ್ದಾರೆ. ಅಂದರೆ ಅವನ ಅಧೀನದಲ್ಲಿರುವ ಅವನ ಸ್ವತ್ತಾಗಿ ಇದ್ದಾರೆ. (ಶ್ಲೋಕ ೧-೭)

ಇಲ್ಲಿ ಮೊದಲು ಪರಮಾತ್ಮನು ಈ ಜಗತ್ತನ್ನು ಒಂದು ಅಶ್ವತ್ಥವೃಕ್ಷಕ್ಕೆ ಹೋಲಿಸಿದ್ದಾನೆ. ಈ ಜಗತ್ತೆಂಬ ಅಶ್ವತ್ಥ ವೃಕ್ಷವು ಮೇಲು ಲೋಕದಲ್ಲಿರುವ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿರುವುದರಿಂದ ಇದರ ಬೇರು ಮೇಲು ಲೋಕದಲ್ಲಿದೆ. ಇದರ ಶಾಖೆಗಳು ತ್ರಿಗುಣಗಳಿಂದ ಬೆಳೆದು, ಶಬ್ದಾದಿ ವಿಷಯಗಳಿಂದ ವೃದ್ಧಿಹೊಂದಿ, ಮೇಲೆಯೂ, ಕೆಳಗೂ ವಿಸ್ತಾರವಾಗಿ ಹರಡಿಕೊಂಡಿದೆ. ಅವು ಮೇಲೆ ದೇವಾದಿಗಳಾಗಿಯೂ, ಕೆಳಗೆ ಈ ಜಗತ್ತಿನಲ್ಲಿರುವ ಮೃಗ, ಪಕ್ಷಿ, ಕ್ರಿಮಿ, ಕೀಟ, ಸ್ಥಾವರಗಳಾಗಿ ಶಾಖೋಪಶಾಖೆಗಳಾಗಿ ಕೊನೆಮೊದಲಿಲ್ಲದೆ, ಆದಿಅಂತವೇ ತಿಳಿಯದಂತೆ ಹರಡಿಕೊಂಡು ಬೆಳೆಯುತ್ತಿವೆ. ವೇದವೇ ಇದರ ಎಲೆಗಳು ಎಂದು ಹೇಳಲ್ಪಟ್ಟಿದೆ.

ಜೀವನು ಈ ಸಂಸಾರವೆಂಬ ಅಶ್ವತ್ಥವೃಕ್ಷವನ್ನು ವಿಷಯವೈರಾಗ್ಯವೆಂಬ ಅಸಂಗರೂಪವಾದ ಶಸ್ತ್ರದಿಂದ ಕತ್ತರಿಸಿ ಪುನರ್ಜನ್ಮವಿಲ್ಲದ ಮೋಕ್ಷಪದವಿಯನ್ನು ಹೊಂದಲು ಪ್ರಯತ್ನಿಸಬೇಕು. ಆದರೆ ಇದು ಬಹಳ ಕಷ್ಟಸಾಧ್ಯವಾದುದು. ಏಕೆಂದರೆ ಅನಾದಿಕಾಲದಿಂದ ಅನುವರ್ತಿಸಿಕೊಂಡು ಬಂದಿರುವ ಈ ವಿಷಯಸುಖಗಳಲ್ಲಿ

ವೈರಾಗ್ಯ ಲಭಿಸುವುದು ಬಹಳ ಕಷ್ಟ ಆದ್ದರಿಂದ ಪರಮಾತ್ಮನಲ್ಲಿ ಶರಣಾಗತಿ ಮಾಡುವುದೇ ಇದಕ್ಕೆ ಉಪಾಯವೆಂದು ಪರಮಾತ್ಮನು ಇಲ್ಲಿ ತಿಳಿಸಿದ್ದಾನೆ. "ಯಾವ ಪರಮಪುರುಷನಿಂದ ಈ ವಿಷಯೋಪಭೋಗಗಳಲ್ಲಿ ಆಸೆ ಎಂಬ ಪ್ರವೃತ್ತಿಯು ಅನಾದಿಯಾಗಿ ಉಂಟಾಗಿದೆಯೋ ಆ ಆದಿಪುರುಷನಾದ ಪರಮಾತ್ಮನಲ್ಲೇ ಆ ವಿಷಯಸುಖಗಳಲ್ಲಿ ವೈರಾಗ್ಯಹೊಂದಲು ಶರಣಾಗುತ್ತೇನೆ." (ಶ್ಲೋಕ ೭) ಎಂದು ಪರಮಾತ್ಮನಲ್ಲಿ ಶರಣಾಗಬೇಕು, ಭಗವಂತನಲ್ಲಿ ಶರಣಾದವರು ಪುನರ್ಜನ್ಮವಿಲ್ಲದ ಪರಮಪದವನ್ನು ಹೊಂದುವರು ಎಂದು ಪರಮಾತ್ಮನು ತಿಳಿಸಿದ್ದಾನೆ.

ಬದ್ಧಜೀವಾತ್ಮರು - ಪ್ರಕೃತಿಸಂಬಂಧ ಹೊಂದಿ ಸಂಸಾರದಲ್ಲಿ ಬಂಧಿತರಾಗಿರುವವರೇ ಬದ್ಧಜೀವಾತ್ಮರು. (ಶ್ಲೋಕ ೮-೧೦) ಅವರು ಭಗವದಂಶಭೂತರಾಗಿದ್ದಾಗ್ಯೂ ಸಂಕುಚಿತಜ್ಞಾನಹೊಂದಿದವರಾಗಿ, ತಾವು ಮಾಡುವ ಕರ್ಮಗಳಿಗೆ ಅನುಗುಣವಾದ ದೇವ ಮನುಷ್ಯಾದಿ ಶರೀರಗಳನ್ನು ಪಡೆದು, ತಮ್ಮ ಇಂದ್ರಿಯಗಳನ್ನೂ ಮನಸ್ಸನ್ನೂ ತಮ್ಮ ಭೋಗಕ್ಕಾಗಿ ಪ್ರೇರೇಪಿಸುತ್ತಾರೆ. ಅವರು ಒಂದು ಶರೀರವನ್ನು ಬಿಟ್ಟು ಇನ್ನೊಂದು ಶರೀರವನ್ನು ಹೊಂದುವಾಗ, ಗಾಳಿಯು ಪುಷ್ಪಗಳ ಪರಿಮಳವನ್ನು ತೆಗೆದುಕೊಂಡು ಹೋಗುವಂತೆ ತಮ್ಮ ಶರೀರದಲ್ಲಿರುವ ಇಂದ್ರಿಯಗಳನ್ನು ಸೂಕ್ಷ್ಮರೂಪವಾಗಿ ತೆಗೆದುಕೊಂಡು ಹೋಗುತ್ತಾರೆ. ಅನಂತರ ಆ ಇಂದ್ರಿಯಗಳ ಮೂಲಕ ಮತ್ತೆ ವಿಷಯ ಸುಖಗಳನ್ನು ಅನುಭವಿಸುತ್ತಾರೆ. ತತ್ತ್ವಜ್ಞಾನವಿಲ್ಲದ, ಪರಮಾತ್ಮನಲ್ಲಿ ಶರಣಾಗತಿ ಮಾಡದ ಅವರು ತಮ್ಮ ಶರೀರದಲ್ಲಿರುವ ಮತ್ತು ಹೊರಗೆ ಹೋಗುವ ಜ್ಞಾನೈಕಾಕಾರನಾದ ಜೀವಾತ್ಮನನ್ನು ಪ್ರಯತ್ನಪಟ್ಟರೂ ಸಾಕ್ಷಾತ್ಕರಿಸಲಾರರು. ಇವರು ಪರಮಾತ್ಮನ ಸ್ವತ್ತಾಗಿ ಅವನ ವಿಭೂತಿಯಾಗಿದ್ದಾರೆ.

**II ಮುಕ್ತ ಜೀವಾತ್ಮರೂ ಪರಮಾತ್ಮನ ಅಧೀನದಲ್ಲಿರುವ ಅವನ ಸ್ವತ್ತಾಗಿ ಇದ್ದಾರೆ - (ಶ್ಲೋ 10-11)**

ಭಗವಂತನಲ್ಲಿ ಶರಣಾಗತಿ ಮಾಡಿ ಶರೀರ ಸಂಬಂಧವನ್ನು ಹೋಗಲಾಡಿಸಿಕೊಂಡು ಸಂಸಾರದಿಂದ ಮುಕ್ತಿಪಡೆದವರೇ ಮುಕ್ತರು.

ಕರ್ಮಯೋಗ ಜ್ಞಾನಯೋಗಗಳ ಮೂಲಕ ಪ್ರಯತ್ನ ಮಾಡಿ ಪರಿಶುದ್ಧವಾದ ಮನಸ್ಸನ್ನು ಪಡೆದ ಯೋಗಿಗಳು ಆತ್ಮಜ್ಞಾನ ಪಡೆದವರಾಗಿ, ಜ್ಞಾನದೃಷ್ಟಿಯಿಂದ ಆತ್ಮನನ್ನು ಎಲ್ಲಾ ಅವಸ್ಥೆಗಳಲ್ಲೂ ಸಾಕ್ಷಾತ್ಕರಿಸುತ್ತಾರೆ. ಇವರೂ ಪರಮಾತ್ಮನ ಸ್ವತ್ತಾಗಿ ಅವನ ವಿಭೂತಿಯಾಗಿದ್ದಾರೆ.

**III ಪರಮಾತ್ಮನು ಬದ್ಧ ಮುಕ್ತಜೀವಿಗಳನ್ನು ತನಗೆ ವಿಭೂತಿಯಾಗಿ ಹೊಂದಿ ಪುರುಷೋತ್ತಮನಾಗಿದ್ದಾನೆ. (ಶ್ಲೋಕ 12-20)**

ಎಲ್ಲಾ ವಸ್ತುಗಳನ್ನೂ ಧರಿಸಿರುವ ಭೂಮಿಯ ಧಾರಣಾಶಕ್ತಿಯೂ, ಪ್ರಕಾಶರೂಪವಾಗಿರುವ ಸೂರ್ಯನ ತೇಜಸ್ಸೂ, ಚಂದ್ರ ಮತ್ತು ಅಗ್ನಿಗಳ ತೇಜಸ್ಸೂ ಎಲ್ಲವೂ ಪರಮಾತ್ಮನದೇ ಆಗಿವೆ. ಅವನು ಸಮಸ್ತ ವಸ್ತುಗಳ ಹೃದಯದಲ್ಲಿ ಪ್ರವೇಶಿಸಿ, ತನ್ನ ಸಂಕಲ್ಪದಿಂದಲೇ ಅವೆಲ್ಲವನ್ನೂ ವೃದ್ಧಿಪಡಿಸಿ, ನಿಯಮಿಸಿ ಆಳುತ್ತಿದ್ದಾನೆ. ಸಮಸ್ತ ವೇದವಾಕ್ಯಗಳೂ ಭಗವಂತನನ್ನೇ ತಿಳಿಸುತ್ತವೆ.

ವೇದದಲ್ಲಿ ತಿಳಿಸಿರುವಂತೆ ಜಗತ್ತಿನಲ್ಲಿ ಕ್ಷರ ಮತ್ತು ಅಕ್ಷರ ಎಂಬ ಎರಡು ವಿಧವಾದ ಪುರುಷರುಗಳು ಇದ್ದಾರೆ ಮತ್ತು ಉತ್ತಮ ಪುರುಷನಾದ ಪರಮಾತ್ಮನೂ ಇದ್ದಾನೆ. ಶರೀರಸಂಬಂಧ ಪಡೆದಿರುವ ಬದ್ಧಜೀವಾತ್ಮರೇ ಕ್ಷರಪುರುಷರು. ಶರೀರ ಸಂಬಂಧದಿಂದ ಮುಕ್ತಿ ಪಡೆದ ಮುಕ್ತರೇ ಅಕ್ಷರ ಪುರುಷರು. ಉತ್ತಮಪುರುಷನಾದ ಪರಮಾತ್ಮನು ಕ್ಷರ ಮತ್ತು ಅಕ್ಷರ ಪುರುಷರುಗಳಿಗಿಂತ (ಬದ್ಧ ಮತ್ತು ಮುಕ್ತರುಗಳಿಗಿಂತ) ಬೇರೆಯಾದವನಾಗಿ ಪಾಶ ರಹಿತನಾಗಿ ಇದ್ದಾನೆ. ಅವನು ಜಗತ್ತಿಗೂ, ಬದ್ಧ ಮುಕ್ತರಿಗೂ ಅಂತರಾತ್ಮನಾಗಿ , ಅವರುಗಳೆಲ್ಲರನ್ನೂ ಸೃಷ್ಟಿಸಿ, ವ್ಯಾಪಿಸಿ, ಧರಿಸಿ, ಅವರಿಗೆಲ್ಲಾ ಸ್ವಾಮಿಯಾಗಿ ಅವರನ್ನು ಆಳುವ ಪುರುಷೋತ್ತಮನಾಗಿ ಇದ್ದಾನೆ. ಆದ್ದರಿಂದ ಜೀವರು ಪ್ರಕೃತಿ ಸಂಬಂಧವನ್ನು ಬಿಡಿಸಿಕೊಳ್ಳಲು ಪುರುಷೋತ್ತಮನಾದ ಪರಮಾತ್ಮನ ಅನುಗ್ರಹ ಪಡೆಯಬೇಕು. "ಯಾವನು ಅಜ್ಞಾನರಹಿತನಾಗಿ ನನ್ನನ್ನು ಹೀಗೆ ಪುರುಷೋತ್ತಮನಾಗಿ ಅರಿಯುತ್ತಾನೆಯೋ ಅವನು ನನ್ನಲ್ಲಿ

ಅಧಿಕವಾದ ಪ್ರೀತಿ, ಭಕ್ತಿಗಳನ್ನು ಹೊಂದಿ ನನ್ನನ್ನು ಭಜಿಸಿ, ಪೂಜಿಸಿ ಸಮಸ್ತ ಫಲಗಳನ್ನೂ ಹೊಂದುತ್ತಾನೆ'' ಎಂದು ಶ್ರೀ ಕೃಷ್ಣಪರಮಾತ್ಮನು ಇಲ್ಲಿ (೧೯ನೇ ಶ್ಲೋಕದಲ್ಲಿ) ತಿಳಿಸಿದ್ದಾನೆ.

ಈ ಅಧ್ಯಾಯದಲ್ಲಿ ಭಗವಂತನು ಬದ್ಧ ಮತ್ತು ಮುಕ್ತ ಜೀವಿಗಳಿಗಿಂತ ಬೇರ್ಪಟ್ಟವನಾಗಿ ಪುರುಷೋತ್ತಮನಾಗಿ ಇದ್ದಾನೆ ಎಂಬುದು ತಿಳಿಸಲ್ಪಟ್ಟಿದೆ.

★★★★

# ಭಗವದ್ಗೀತೆ ಅಧ್ಯಾಯ 16

## ದೇವಾಸುರಸಂಪದ್ವಿಭಾಗಯೋಗ

## ಗೀತಾರ್ಥಸಂಗ್ರಹ ಶ್ಲೋಕ ೨೦

**ದೇವಾಸುರವಿಭಾಗೋಕ್ತಿ**
**ಪೂರ್ವಿಕಾಶಾಸ್ತ್ರವಶ್ಯತಾ ।**
**ತತ್ತ್ವಾನುಷ್ಠಾನವಿಜ್ಞಾನ**
**ಸ್ಥೇಮ್ನೇಷೋಡಶಉಚ್ಯತೇ ॥**

ಈ ಶ್ಲೋಕದಲ್ಲಿ ಭಗವದ್ಗೀತೆಯ ೧೬ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ತತ್ತ್ವಾನುಷ್ಠಾನವಿಜ್ಞಾನಸ್ಥೇಮ್ನೇ** - ಶಾಸ್ತ್ರದಲ್ಲಿ ಹೇಳಿರುವ ತತ್ತ್ವಗಳನ್ನು ಅರಿಯುವುದೂ, ಅನುಷ್ಠಿಸುವುದೂ ಆವಶ್ಯಕವಾದುದು ಎಂಬುದನ್ನು ಸ್ಥಿರಪಡಿಸುವುದಕ್ಕಾಗಿ

**ದೇವಾಸುರವಿಭಾಗೋಕ್ತಿಪೂರ್ವಿಕಾ** - ಜಗತ್ತಿನಲ್ಲಿರುವ ಜೀವಿಗಳನ್ನು ದೈವೀ ಮತ್ತು ಆಸುರೀ ಸಂಪತ್ತುಳ್ಳವರೆಂದು ಎರಡು ಬಗೆಯಾಗಿ ಇರುವುದನ್ನು

ಅವರ ಲಕ್ಷಣ ಅನುಷ್ಠಾನಗಳೊಂದಿಗೆ ನಿರೂಪಿಸಿ, ತನ್ಮೂಲಕ

**ಶಾಸ್ತ್ರವಶ್ಯತಾ** - ಶಾಸ್ತ್ರಗಳನ್ನು ಅವಶ್ಯವಾಗಿ ಅರಿಯಬೇಕು ಮತ್ತು ಅನುಷ್ಠಿಸಬೇಕು ಎಂಬುದನ್ನು

**ಷೋಡಶ ಉಚ್ಯತೆ** - ೧೬ನೆಯ ಅಧ್ಯಾಯದಲ್ಲಿ ಪರಮಾತ್ಮನು ಹೇಳಿದ್ದಾನೆ.

ಭಗವದ್ಗೀತೆಯ ಈ 16ನೇ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ

I ದೈವೀಪ್ರವೃತ್ತಿಉಳ್ಳವರ ಲಕ್ಷಣ ಮತ್ತು ಅನುಷ್ಠಾನಗಳು (ಶ್ಲೋ: ೧-೩)

ಪರಮಾತ್ಮನು ದೈವೀಸಂಪತ್ತುಳ್ಳವರ ಲಕ್ಷಣ ಗಳನ್ನು ಮೊದಲು ತಿಳಿಸಿದ್ದಾನೆ. ಇಷ್ಟಅನಿಷ್ಟವಸ್ತುಗಳ ಸಂಯೋಗವಿಯೋಗಗಳಲ್ಲಿ ಭಯರಹಿತನಾಗಿ ಇರುವುದು, ಅಂತಃಕರಣವು ಸತ್ತ್ವಗುಣಭರಿತವಾಗಿರುವುದು, ಪ್ರಕೃತಿ ವಿಯುಕ್ತ ಆತ್ಮಸ್ವರೂಪಜ್ಞಾನ ಪಡೆಯುವುದು, ನ್ಯಾಯವಾಗಿ ಸಂಪಾದಿಸಿದ ಹಣವನ್ನು ಸತ್ಪಾತ್ರರಿಗೆ ಕೊಡುವುದು (ದಾನಮಾಡುವುದು), ಮನಸ್ಸನ್ನು ವಿಷಯಗಳ ಹಿಂದೆ ಹೋಗದಂತೆ ತಡೆಯುವುದು (ದಮ), ಫಲಾಭಿಸಂಧಿರಹಿತವಾಗಿ ಭಗವಂತನ ಆರಾಧನರೂಪಮಹಾಯಜ್ಞಾದಿಕರ್ಮಗಳನ್ನು ಮಾಡುವುದು, ವೇದಾಧ್ಯಯನದಲ್ಲಿ ನಿರತವಾಗಿರುವುದು (ಸ್ವಾಧ್ಯಾಯ), ಕೃಚ್ಛ್ರಚಾಂದ್ರಾಯಣಏಕಾದಶಿ ವ್ರತಗಳನ್ನು ಅನುಷ್ಠಿಸುವುದು, ವ್ಯವಹಾರಾದಿಗಳಲ್ಲಿ ಸತ್ತ್ವನಿಷ್ಠೆಯುಳ್ಳವನಾಗಿ ಇರುವುದು (ಆರ್ಜವ), ಕಾಯಾವಾಚಾಮನಸಾ ಇತರರಿಗೆ ಹಿಂಸೆ ಮಾಡದೇ ಇರುವುದು (ಅಹಿಂಸೆ), ಸತ್ಯವನ್ನು ಹೇಳುವುದು, ಕೋಪವಿಲ್ಲದೇ ಇರುವುದು, ಆತ್ಮಹಿತಕ್ಕೆ ವಿರೋಧವಾದವುಗಳನ್ನು ತ್ಯಜಿಸುವುದು, ಶಾಂತವಾಗಿರುವುದು, ಇತರರಿಗೆ ಅಹಿತವನ್ನುಂಟುಮಾಡುವ ವಾಕ್ಯವನ್ನು ಹೇಳದಿರುವುದು, ಭೂತಗಳಲ್ಲಿ ದಯೆಹೊಂದಿರುವುದು, ವಿಷಯಗಳಲ್ಲಿ ಅತಿಆಸೆ ಇಲ್ಲದಿರುವುದು, ಮೃದುಸ್ವಭಾವ ಹೊಂದಿರುವುದು, ಕೆಟ್ಟಕಾರ್ಯ ಮಾಡುವುದರಲ್ಲಿ ನಾಚಿಕೆ ಹೊಂದಿರುವುದು, ಚಪಲವಿಲ್ಲದಿರುವುದು, ತೇಜಸ್ಸು, ಸಹನೆ, ಧೈರ್ಯ, ಕ್ಷಮೆ ಇವುಗಳನ್ನು ಹೊಂದಿರುವುದು, ಅಂತರಬಾಹ್ಯಇಂದ್ರಿಯಗಳು ಪರಿಶುದ್ಧವಾಗಿರುವುದು, ಇತರರಿಗೆ

ದ್ರೋಹಮಾಡದಿರುವುದು, ಗರ್ವವಿಲ್ಲದಿರುವುದು ಇವುಗಳೆಲ್ಲವೂ ದೈವೀಸಂಪತ್ತನ್ನು ಪಡೆದಿರುವವರ ಗುಣಗಳಾಗಿವೆ.

ದೈವೀಸಂಪತ್ತುಳ್ಳವರ ಅನುಷ್ಠಾನಗಳಾದ ಕರ್ಮ, ಜ್ಞಾನ, ಭಕ್ತಿ ಯೋಗ ಸಾಧನೆಗಳೆಲ್ಲವೂ ಹಿಂದಿನ ಅಧ್ಯಾಯಗಳಲ್ಲಿಯೇ ವಿವರವಾಗಿ ತಿಳಿಸಲ್ಪಟ್ಟಿವೆ.

II ಆಸುರೀಪ್ರವೃತ್ತಿ ಉಳ್ಳವರ ಲಕ್ಷಣಗಳು ಮತ್ತು ಅನುಷ್ಠಾನಗಳು (ಶ್ಲೋ. ೪-೫)

ಪ್ರಸಿದ್ಧಿಹೊಂದುವುದಕ್ಕಾಗಿ ಧರ್ಮಾನುಷ್ಠಾನ ಮಾಡುವ ದಂಭ, ವಿಷಯಾನುಭವದಿಂದ ಆನಂದಪಡುವ ದರ್ಪ, ತನ್ನ ಜನ್ಮ ಕುಲ, ವಿದ್ಯೆ ಇವುಗಳಲ್ಲಿ ಅಭಿಮಾನವಿಲ್ಲದ ಅತಿಮಾನ, ಇತರರನ್ನು ಹಿಂಸಿಸುವ ಚಿತ್ತವಿಕಾರವಾದ ಕ್ರೋಧ, ಸಾಧುಗಳಿಗೆ ಭಯಉಂಟುಮಾಡುವ ಪಾರುಷ್ಯ, ಇಹಪರತತ್ತ್ವಗಳನ್ನೂ ಕರ್ತವ್ಯಾಕರ್ತವ್ಯಗಳನ್ನೂ ಅರಿಯದಿರುವ ಅಜ್ಞಾನ, ಇವುಗಳೆಲ್ಲವೂ ಅಸುರಸಂಪತ್ತನ್ನು ಹೊಂದಿರುವವರ ಗುಣಗಳಾಗಿವೆ.

ದೈವೀಸಂಪತ್ತು ಮೋಕ್ಷವನ್ನೂ, ಅಸುರೀಸಂಪತ್ತು ಸಂಸಾರಬಂಧವನ್ನೂ ಉಂಟುಮಾಡುತ್ತದೆ. ಆದರೆ ಅರ್ಜುನನು ಧಾರ್ಮಿಕಾಗ್ರೇಸರನಾದ ಪಾಂಡುವಿನ ಮಗನಾಗಿ ದೈವೀಸಂಪತ್ತನ್ನು ಪಡೆದು ಹುಟ್ಟಿರುವುದರಿಂದ ಅವನು ಶೋಕಿಸಬೇಕಾಗಿಲ್ಲವೆಂದು ಅರ್ಜುನನಿಗೆ ಪರಮಾತ್ಮನು ಧೈರ್ಯ ಹೇಳುತ್ತಾನೆ.

ಆಸುರೀಪ್ರವೃತ್ತಿಉಳ್ಳವರ ಅನುಷ್ಠಾನಗಳು, ಪರಿಣಾಮಗಳು (ಶ್ಲೋ. ೬-೨೦)

ಅಸುರ ಸ್ವಭಾವವುಳ್ಳವರು ಲೌಕಿಕ ಉನ್ನತಿಗೆ ಬೇಕಾದ ಪ್ರವೃತ್ತಿ ಧರ್ಮವನ್ನೂ, ಮೋಕ್ಷಸಾಧನವಾದ ನಿವೃತ್ತಿಧರ್ಮವನ್ನೂ ತಿಳಿದಿಲ್ಲ, ಬಾಹ್ಯಶುದ್ಧಿಗೆ ಬೇಕಾದ ಸದಾಚಾರಗಳೂ, ಅಂತರ ಶುದ್ಧಿಗೆ ಬೇಕಾದ ಆತ್ಮಗುಣಗಳೂ ಅವರಲ್ಲಿ ಇಲ್ಲ, ಭೂತಹಿತವಾದ ಸತ್ಯವಚನವೂ ಅವರಲ್ಲಿ ಇಲ್ಲ.

ಇವರು ಸಮಸ್ತ ಜಗತ್ತೂ ಕಾಮದಿಂದ ಉಂಟಾಗಿದೆ; ಕಾಮವೇ ಜಗತ್ತಿಗೆ ಕಾರಣ, ಜಗತ್ತನ್ನು ಸೃಷ್ಟಿಸಿ ಆಳುವ ಪರಮಾತ್ಮನೆಂಬುವನೇ ಇಲ್ಲ ಎಂದೆಲ್ಲಾ ಹೇಳುತ್ತಾರೆ. ಇವರು ವಿಪರೀತ ಬುದ್ಧಿಉಳ್ಳವರಾಗಿ, ಉಗ್ರವಾದ ಕರ್ಮಗಳನ್ನು ಮಾಡುತ್ತಾ ಪ್ರಪಂಚವನ್ನು ನಾಶಮಾಡುವುದಕ್ಕೇ ಹುಟ್ಟಿದವರಾಗಿದ್ದಾರೆ. ಕಾಮೋಪಭೋಗವನ್ನೇ ಪುರುಷಾರ್ಥವಾಗಿ ಹೊಂದಿ ಅಧಕ್ಕಾಗಿ ಅನ್ಯಾಯದಿಂದ ಧನವನ್ನು ಗಳಿಸಿ ದಂಭಮಾನಮದಾಶ್ರಿತರಾಗಿ ವರ್ತಿಸುತ್ತಾರೆ. ಭಗವಂತನ ಸಹಾಯವಿಲ್ಲದೆ ತಾವೇ ಸಮಸ್ತವನ್ನೂ ಮಾಡಲು ಶಕ್ತರು ಎಂಬ ಅಜ್ಞಾನದಿಂದ ಕೂಡಿ, ಕಾಮೋಪಭೋಗನಿರತರಾಗಿ, ಮೃತರಾದ ಮೇಲೆ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ. ಸರ್ವರ ಹೃದಯದಲ್ಲಿ ಅಂತರಾತ್ಮನಾಗಿ ಇದ್ದುಕೊಂಡು, ಸಕಲ ಕಾರ್ಯಗಳನ್ನೂ ಮಾಡುತ್ತಿರುವ ಪರಮಾತ್ಮನನ್ನು ದ್ವೇಷಿಸುತ್ತಾ ಅತ್ಯಂತ ಅಹಂಕಾರ ಹೊಂದಿದವರಾಗಿ, ಡಂಭಕ್ಕಾಗಿ ಕಪಟ ಯಜ್ಞಯಾಗಾದಿಗಳನ್ನು ಶಾಸ್ತ್ರವಿದಿತವಲ್ಲದ ಅಕ್ರಮವಾದ ರೀತಿಯಲ್ಲಿ ಮಾಡುತ್ತಾರೆ.

ಹೀಗೆ ಮೋಹಜಾಲದಲ್ಲಿ ಸಿಕ್ಕಿ ಬಿದ್ದು ಅಹಂಕಾರ, ಬಲ, ದರ್ಪ ಕಾಮ ಕ್ರೋಧಾದಿಗಳಿಂದ ಕೂಡಿ, ಕಾಮೋಪಭೋಗಗಳಲ್ಲಿ ನಿರತರಾಗಿರುವ, ಪರಮಾತ್ಮನನ್ನು ದ್ವೇಷಿಸುವ, ಅಹಂಕಾರದಿಂದ ಅಕ್ರಮವಾಗಿ ಯಾಗ ಮಾಡುವ ಈ ಅಸುರ ಸ್ವಭಾವವುಳ್ಳವರನ್ನು, ಅವರು ಕಾಲವಾದ ಮೇಲೆ ಪರಮಾತ್ಮನು ಅವರನ್ನು ಅಸುರ ಯೋನಿಗಳಲ್ಲಿಯೇ ಮತ್ತೆ ಮತ್ತೆ ಹುಟ್ಟಿಸಿ ಅಧೋಗತಿ ಹೊಂದುವಂತೆ ಮಾಡುತ್ತಾನೆ. ಇದರಿಂದ ಭಗವಂತನನ್ನು ಹೊಂದಲು ಅವಕಾಶವಿಲ್ಲದೆ, ಅದಕ್ಕೆ ವಿರೋಧವಾದ ಜನ್ಮಗಳನ್ನು ಹೊಂದುತ್ತಾ, ಪ್ರತಿಜನ್ಮದಲ್ಲೂ ವಿಪರೀತಜ್ಞಾನಹೊಂದಿದವರಾಗಿ ಪರಮಾತ್ಮನು ಇರುವನು ಎಂಬ ಜ್ಞಾನ ಹೊಂದದೆ ಇನ್ನೂ ಕೆಳಗಿನಜನ್ಮಹೊಂದುತ್ತಾ ಅಧೋಗತಿ ಹೊಂದುತ್ತಾರೆ.

**ಅಸುರಸ್ವಭಾವ ಉಂಟಾಗಲು ಕಾಮಕ್ರೋಧಲೋಭಾದಿಗಳೂ ಮತ್ತು ಶಾಸ್ತ್ರಗಳ ಅನಾದರಣೆಯೂ ಮೂಲ ಕಾರಣವಾಗಿವೆ (ಶ್ಲೋ ೨೧-೨೩)**

ಶಬ್ದಾದಿವಿಷಯಸುಖಗಳಲ್ಲಿ ಆಸೆ ಎಂಬ ಕಾಮವೂ, ಇತರರನ್ನು ಪೀಡಿಸುವ ಮನೋವಿಕಾರವೆಂಬ ಕ್ರೋಧವೂ, ಮತ್ತು ತನ್ನ ಸ್ವತ್ತನ್ನು ಯಾವ ಸಂದರ್ಭದಲ್ಲೂ ಇತರರಿಗೆ ಕೊಡದಂತಹ ಮನೋಭಾವವೆಂಬ ಲೋಭವೂ - ಇವು ಮೂರು ಅಸುರಸ್ವಭಾವವೆಂಬ ನರಕಕ್ಕೆ ಮುಖ್ಯವಾದ ಮೂರು ಬಾಗಿಲುಗಳಾಗಿವೆ

ಮತ್ತು ಇವು ಆತ್ಮನನ್ನು ನಾಶಗೊಳಿಸುತ್ತವೆ. ಇದರಿಂದ ಚೇತನನು ಇಹದಲ್ಲಿ ಸುಖವನ್ನೂ ಪಡೆಯುವುದಿಲ್ಲ; ಪರಲೋಕಸಿದ್ಧಿಯನ್ನೂ ಪಡೆಯುವುದಿಲ್ಲ ಮತ್ತು ಪರಮಗತಿಯನ್ನೂ ಹೊಂದುವುದಿಲ್ಲ. ಈ ಪರಕ್ಕೆ ಶಾಸ್ತ್ರದ ಅಂದರೆ ವೇದದ ಅನಾದರಣೆಯೇ ಪ್ರಧಾನ ಕಾರಣ ಎಂದು ಪರಮಾತ್ಮನು ತಿಳಿಸಿದ್ದಾನೆ.

ಚೇತನನು ಕಾಮಕ್ರೋಧಲೋಭಾದಿಗಳನ್ನು ತ್ಯಜಿಸಿ ಶ್ರೇಯಸ್ಸಿನ ಮಾರ್ಗವನ್ನು ಆಶ್ರಯಿಸಬೇಕು ಮತ್ತು ಶಾಸ್ತ್ರಗಳ ಮೂಲಕ ಪರಮಾತ್ಮವಿಷಯ ಜ್ಞಾನ ಹೊಂದಿ ಪರಮಾತ್ಮನ ಸಾಕ್ಷಾತ್ಕಾರ ಹೊಂದಲು ಪ್ರಯತ್ನಿಸಬೇಕು ಎಂದು ಪರಮಾತ್ಮನು ಉಪದೇಶ ನೀಡಿದ್ದಾನೆ.

**III ಕಾರ್ಯಅಕಾರ್ಯವ್ಯವಸ್ಥೆಗಳಿಗೆಲ್ಲಾ ಶಾಸ್ತ್ರವೇ ಪ್ರಮಾಣ. ಅದರಲ್ಲಿ ತಿಳಿಸಿರುವುದನ್ನು ಅರಿತು ಆಚರಿಸಬೇಕು (ಶ್ಲೋ 24)**

ಶಾಸ್ತ್ರವೆಂದರೆ ವೇದಶಾಸ್ತ್ರವು, ಧರ್ಮಶಾಸ್ತ್ರ , ಇತಿಹಾಸ, ಪುರಾಣಾದಿಗಳಿಗೆಲ್ಲಾ ವೇದವೇ ಆಧಾರವಾದುದು. ಆದ್ದರಿಂದ ವೇದಶಾಸ್ತ್ರದಲ್ಲಿ ಉಪದೇಶಿಸಿರುವಂತೆ ಪರತತ್ತ್ವವಾದ, ಪುರುಷೋತ್ತಮನಾದ ಪರಮಾತ್ಮನ ಆರಾಧನೆಯನ್ನೂ ಮತ್ತು ಅವನ ಪ್ರಾಪ್ತಿಗಾಗಿ ಮಾಡಬೇಕಾದ ಕರ್ಮಗಳನ್ನೂ ಸರಿಯಾಗಿ ಅರಿತುಕೊಂಡು ಆಚರಿಸಬೇಕು ಎಂದು ಪರಮಾತ್ಮನು ಉಪದೇಶ ಮಾಡಿದ್ದಾನೆ.

ಈ ಅಧ್ಯಾಯದಲ್ಲಿ ದೈವೀ ಸಂಪತ್ತನ್ನು ಹೊಂದಿರುವ ಮತ್ತು ಆಸುರೀ ಸಂಪತ್ತನ್ನು ಹೊಂದಿರುವ ಜೀವಿಗಳ ಗುಣಗಳನ್ನೂ, ಅವರ ರೀತಿ ನಡತೆಗಳನ್ನೂ, ಅನುಷ್ಠಾನಗಳನ್ನೂ ಮತ್ತು ಅವರು ಹೊಂದುವ ಫಲಗಳನ್ನೂ ಪರಮಾತ್ಮನು ತಿಳಿಸಿದ್ದಾನೆ. ಮತ್ತು ಕಾರ್ಯಅಕಾರ್ಯ ವ್ಯವಸ್ಥೆಗಳಿಗೆಲ್ಲಾ ಶಾಸ್ತ್ರವೇ ಪ್ರಮಾಣವೆಂದೂ, ಅದರಲ್ಲಿ ತಿಳಿಸಿರುವ ನಿಯಮಗಳನ್ನು ಅರಿತು ಶ್ರದ್ಧೆಯಿಂದ ಆಚರಿಸಬೇಕೆಂದೂ ಉಪದೇಶ ನೀಡಿದ್ದಾನೆ.

★★★★

# ಭಗವದ್ಗೀತೆ ಅಧ್ಯಾಯ 17

## ಶ್ರದ್ಧಾತ್ರಯವಿಭಾಗಯೋಗ

### ಗೀತಾರ್ಥಸಂಗ್ರಹ ಶ್ಲೋಕ ೨೧

ಅಶಾಸ್ತ್ರಮಾಸುರಂ ಕೃತ್ಸ್ನಂ
ಶಾಸ್ತ್ರೀಯಂ ಗುಣತಃ ಪೃಥಕ್ ।
ಲಕ್ಷಣಂ ಶಾಸ್ತ್ರಸಿದ್ಧಸ್ಯ
ತ್ರಿಧಾ ಸಪ್ತದಶೋದಿತಂ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ ೧೭ನೆಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಅಶಾಸ್ತ್ರ ಕೃತ್ಸ್ನಂಆಸುರಂ** - ಶಾಸ್ತ್ರವಿಧಿಯನ್ನು (ವೇದವನ್ನು) ಅನುಸರಿಸದೇ ಇರುವ ಯಜ್ಞಾದಿಕರ್ಮಗಳೆಲ್ಲ ಅಸುರ ಸ್ವಭಾವಕ್ಕೆ ಸೇರಿದವುಗಳಾಗಿವೆ ಎಂದೂ

**ಶಾಸ್ತ್ರೀಯಂಗುಣತಃಪೃಥಕ್** - ವೇದಶಾಸ್ತ್ರವಿಧಿತವಾದ ಕರ್ಮಗಳೂ ಸತ್ವರಜಸ್ತಮೋಗುಣಗಳ ಮೂಲಕ ಮೂರು ವಿಭಾಗವಾಗಿವೆ ಎಂದೂ, **ಶಾಸ್ತ್ರಸಿದ್ಧಸ್ಯ ಲಕ್ಷಣಂತ್ರಿಧಾ** - ಶಾಸ್ತ್ರಸಿದ್ಧವಾದ ಕರ್ಮಗಳನ್ನು ಶ್ರದ್ಧೆಯಿಂದ ಮಾಡಲು ಮೂರು ವಿಧವಾದ ಲಕ್ಷಣಗಳಿವೆ ಎಂದೂ ,

**ಸಪ್ತದಶೋದಿತಂ** ೧೭ನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಭಗವದ್ಗೀತೆಯ ಈ 17ನೆಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

1 ಶಾಸ್ತ್ರವಿಧಿಯನ್ನು ಅನುಸರಿಸದೆ ಆಚರಿಸುವ ಯಜ್ಞಾದಿಕರ್ಮಗಳೆಲ್ಲವೂ ಅಸುರಪ್ರಕೃತಿಗೆ ಸೇರಿದವುಗಳಾಗಿ ಅನರ್ಥಫಲವುಳ್ಳದ್ದಾಗಿವೆ. (ಶ್ಲೋ: ೧-೬)

ಶಾಸ್ತ್ರವಿಧಿರಹಿತವಾಗಿ ಯಜ್ಞಾದಿಕರ್ಮಗಳನ್ನು ಶ್ರದ್ಧೆಯಿಂದ ಮಾಡಿದರೆ ಅದಕ್ಕೆ ಫಲವುಂಟೇ, ಅವು ಸತ್ತ್ವರಜಸ್ತಮೋಗುಣಗಳಲ್ಲಿ ಯಾವ ಗುಣಕ್ಕೆ ಸೇರಿದವುಗಳಾಗಿವೆ. ಎಂದು ಅರ್ಜುನನು ಕೇಳುತ್ತಾನೆ. ಅದಕ್ಕೆ ಉತ್ತರ ಹೇಳುವ ಸಲುವಾಗಿ ಪರಮಾತ್ಮನು ಮೊದಲು ಶ್ರದ್ಧೆಯೆಂಬುದು ಸತ್ತ್ವಾದಿತ್ರಿಗುಣಗಳಿಂದ ಮೂರು ವಿಧವಾಗಿದೆ ಎಂಬುದನ್ನು ತಿಳಿಸುತ್ತಾನೆ.

ತ್ರಿವಿಧ' ಶ್ರದ್ಧೆಗಳು - ಸಾತ್ವಿಕಶ್ರದ್ಧೆಯುಳ್ಳವರು ದೇವತೆಗಳನ್ನು ಪೂಜಿಸಿ ಉತ್ಕೃಷ್ಟವಾದ ಸುಖವನ್ನು ಪಡೆಯುವರು. ರಾಜಸಶ್ರದ್ಧೆಯುಳ್ಳವರು - ಯಕ್ಷರಾಕ್ಷಸಾದಿಗಳನ್ನು ಪೂಜಿಸಿ ದುಃಖಮಿಶ್ರವಾದ ಅಲ್ಪಸುಖವನ್ನು ಪಡೆಯುವರು. ತಾಮಸಶ್ರದ್ಧೆಯುಳ್ಳವರು ಭೂತಪ್ರೇತಗಳನ್ನು ಆರಾಧಿಸಿ ಅತ್ಯಲ್ಪಸುಖವನ್ನು ಪಡೆಯುವರು. ಜೀವನು ತನ್ನ ಪ್ರಾಚೀನ ಗುಣಗಳಿಗೆ ಅನುಗುಣವಾದ ಶ್ರದ್ಧೆ ಹೊಂದುತ್ತಾನೆ ಮತ್ತು ತನ್ಮೂಲಕ ಆಯಾಗುಣ ಪ್ರಯುಕ್ತವಾದ ಫಲವನ್ನು ಅನುಭವಿಸುತ್ತಾನೆ.

ಶಾಸ್ತ್ರವಿಧಿತವಲ್ಲದ ಉಗ್ರವಾದ ತಪಸ್ಸನ್ನು ಶಾಸ್ತ್ರವಿಧಿರಹಿತವಾಗಿ, ಅಹಂಕಾರದಿಂದಕೂಡಿ ಆಚರಿಸುವವರು ಅಸುರಪ್ರವೃತ್ತಿ ಉಳ್ಳವರಾಗಿದ್ದಾರೆ ಎಂದೂ ಅವರು ತಮ್ಮ ಶರೀರ, ಇಂದ್ರಿಯಗಳನ್ನೂ ಅದರೊಳಗೆ ಅಂತರಾತ್ಮನಾಗಿರುವ ಭಗವದಂಶಭೂತವಾದ ಜೀವಾತ್ಮನನ್ನೂ ಕಷ್ಟಪಡಿಸುತ್ತಾರೆ ಎಂದೂ ಪರಮಾತ್ಮನು ಅರ್ಜುನನ ಪ್ರಶ್ನೆಗೆ ಉತ್ತರ ಹೇಳಿದ್ದಾನೆ.

II ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಕರ್ಮಗಳೂ ಸಾತ್ತ್ವಿಕ ರಾಜಸ ತಾಮಸ ಎಂದು ಮೂರು ವಿಧವಾದವುಗಳಾಗಿದೆ. ಶಾಸ್ತ್ರವಿಧಿತವಾದ ಆಹಾರ, ಯಜ್ಞ, ದಾನ, ತಪಸ್ಸು, ಇವುಗಳೆಲ್ಲವೂ ತ್ರಿಗುಣಗಳಿಂದ ಮೂರು ವಿಧವಾದವುಗಳಾಗಿದೆ.

೧. ತ್ರಿವಿಧಆಹಾರಗಳು (ಶ್ಲೋ ೮-೧೦) ಸಾತ್ತ್ವಿಕ ಆಹಾರ - ಸತ್ತ್ವಗುಣವುಳ್ಳವರಿಗೆ ಸಾತ್ತ್ವಿಕ ಆಹಾರವು ಪ್ರಿಯವಾಗಿದೆ. ಆಯುಸ್ಸು, ಜ್ಞಾನ, ಬಲ, ಆರೋಗ್ಯ, ಸುಖ (ಸಂತೋಷ) ಪ್ರೀತಿ ಇವುಗಳನ್ನು ವೃದ್ಧಿಗೊಳಿಸುವಂತಹ, ಮಧುರವಾದ ರಸವುಳ್ಳ, ಜಿಡ್ಡಿನಿಂದ ಕೂಡಿದ, ದೇಹಕ್ಕೆ ಪುಷ್ಟಿಕೊಡುವ, ರಮ್ಯವಾಗಿರುವ ಆಹಾರಗಳು ಸತ್ತ್ವಗುಣವನ್ನು ವೃದ್ಧಿಪಡಿಸುತ್ತವೆ.

ರಾಜಸ ಆಹಾರ - ಅತಿ ಕಹಿಯಾದ, ಅತಿ ಹುಳಿಯಾದ, ಅತಿ ಉಪ್ಪಾದ, ಅತಿ ಬಿಸಿಯಾದ, ಅತ್ಯಂತ ತೀಕ್ಷ್ಣವಾದ, ದೇಹವನ್ನು ಶೋಷಿಸುವ, ತಾಪ, ಶೋಕ ಉಂಟುಮಾಡುವ ಆಹಾರವು ರಾಜಸ ಆಹಾರ.

ತಾಮಸ ಆಹಾರ- ಹಳಸಿ ಹೋಗಿರುವ, ರಸಹೀನವಾದ, ದುರ್ಗಂಧದಿಂದ ಕೂಡಿರುವ, ಇತರರ ಎಂಜಲಾಗಿರುವ, ಅಶುಚಿಯಾದ, ಯಜ್ಞದಲ್ಲಿ ಉಪಯೋಗಿಸಲು ಅನರ್ಹವಾದ, ತಮೋಗುಣವನ್ನು ವೃದ್ಧಿಗೊಳಿಸುವಂತಹ ಆಹಾರವು ತಾಮಸ ಆಹಾರ.

ಸತ್ತ್ವಗುಣವನ್ನು ವೃದ್ಧಿಪಡಿಸಿಕೊಳ್ಳಲು ಸಾತ್ತ್ವಿಕ ಆಹಾರವನ್ನೇ ಸೇವನೆ ಮಾಡಬೇಕು.

೨. ತ್ರಿವಿಧಯಜ್ಞಗಳು (ಶ್ಲೋ ೧೧-೧೩.) ಸಾತ್ತ್ವಿಕ ಯಜ್ಞ - ಫಲದಲ್ಲಿ ಆಸೆ ಹೊಂದದೆ, ಶಾಸ್ತ್ರವಿಧಿಯನ್ನು ಅನುಸರಿಸಿ, ಭಗವಂತನ ಆರಾಧನೆ ಎಂದು ಭಾವಿಸಿ, ಕರ್ಮ ಮಾಡುವುದೇ ತನ್ನ ಕರ್ತವ್ಯವೆಂದು ಅನುಸಂಧಾನ ಮಾಡಿಕೊಂಡು ಸಂತೋಷದಿಂದ ಮಾಡುವ ಯಜ್ಞವು ಸಾತ್ತ್ವಿಕ ಯಜ್ಞವು.

ರಾಜಸಯಜ್ಞ - ಐಹಿಕ ಆಮುಷ್ಮಿಕ ಫಲ ಹೊಂದಬೇಕೆಂದು ಫಲಾಸಕ್ತಿಹೊಂದಿ, ಧಂಭಕ್ಕಾಗಿಯೂ, ಯಶಸ್ಸಿಗಾಗಿಯೂ ಮಾಡುವ ಯಜ್ಞಾದಿಕರ್ಮಗಳು ರಾಜಸಯಜ್ಞಗಳು.

ತಾಮಸಯಜ್ಞ - ಶಾಸ್ತ್ರವಿಧಿಗಳು, ಮಂತ್ರದಕ್ಷಿಣೆ, ಅನ್ನದಾನಾದಿಗಳಿಲ್ಲದೆ, ಶ್ರದ್ಧೆಯಿಲ್ಲದೆ ಮಾಡಲ್ಪಡುವ ಯಜ್ಞಾದಿ ಕರ್ಮಗಳು ತಾಮಸಯಜ್ಞಗಳು.

## ೩. ತ್ರಿವಿಧ ತಪಸ್ಸುಗಳು (ಶ್ಲೋಕ ೧೪-೧೯)

ತಪಸ್ಸುಗಳು ಶರೀರ, ವಾಕ್ಕು ಮತ್ತು ಮನಸ್ಸು ಇವುಗಳಿಂದ ಮಾಡಲ್ಪಡಬೇಕಾಗಿರುವುದರಿಂದ ಮೂರುಬಗೆಯ ತಪಸ್ಸುಗಳು ಮೊದಲು ತಿಳಿಸಲ್ಪಟ್ಟಿವೆ.

ಶಾರೀರಿಕ ತಪಸ್ಸು - ದೇವತೆಗಳು, ಬ್ರಹ್ಮವಿತ್ತುಗಳು, ಗುರುಗಳು, ಜ್ಞಾನಿಗಳು, ಇವರುಗಳನ್ನು ಪೂಜಿಸುವುದು, ಪುಣ್ಯತೀರ್ಥಸ್ನಾನಾದಿಗಳ ಮೂಲಕ ಪರಿಶುದ್ಧವಾಗಿರುವುದು, ಕಪಟವಿಲ್ಲದಿರುವುದು, ಬ್ರಹ್ಮಚರ್ಯ, ಅಹಿಂಸೆ (ಪರರನ್ನು ಪೀಡಿಸದಿರುವುದು) ಇವುಗಳೆಲ್ಲವೂ ಶರೀರದ ಮೂಲಕ ಆಚರಿಸುವ ತಪಸ್ಸುಗಳು.

ವಾಚಿಕ ತಪಸ್ಸು - ಇತರರ ಮನಸ್ಸನ್ನು ನೋಯಿಸದಂತಹ, ಅವರಿಗೆ ಉದ್ವೇಗ, ಕ್ಲೇಶ ಉಂಟಾಗದಂತಹ, ಸತ್ಯವಾದ, ಪ್ರಿಯವಾದ, ಹಿತವಾದ ಮಾತುಗಳನ್ನು ಹೇಳುವುದು, ವೇದಾಧ್ಯಯನ ಮಾಡುವುದು ಇವುಗಳು ವಾಕ್ಕಿನ ಮೂಲಕ ಮಾಡುವ ತಪಸ್ಸುಗಳು.

ಮಾನಸಿಕ ತಪಸ್ಸು- ಮನಸ್ಸಿನಲ್ಲಿ ಕ್ರೋಧವಿಲ್ಲದೆ ಪ್ರಸನ್ನವಾಗಿ, ಶಾಂತವಾಗಿ ಇರುವುದು, ಇತರರ ಅಭ್ಯುದಯವನ್ನು ಕೋರುವುದು, ಮೌನವ್ರತವು (ವಾಕ್ಪ್ರವೃತಿಯನ್ನು ತಡೆಯುವುದು), ಮನಸ್ಸನ್ನು ಐಹಿಕವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದು ಆತ್ಮ ಪರಮಾತ್ಮ ಚಿಂತನೆಯಲ್ಲಿ ನಿಲ್ಲಿಸುವುದು, ಮನಸ್ಸಿನಭಾವಗಳು ಕಲ್ಮಷರಹಿತವಾಗಿ ಪರಿಶುದ್ಧವಾಗಿ ಇರುವುದು ಇವುಗಳು ಮನಸ್ಸಿನಮೂಲಕ ಆಚರಿಸುವ ತಪಸ್ಸುಗಳು

ಈ ಮೂರುಬಗೆಯ ತಪಸ್ಸುಗಳೂ ತ್ರಿಗುಣಗಳ ತಾರತಮ್ಯದಿಂದ ಸಾತ್ತ್ವಿಕ, ರಾಜಸ, ಮತ್ತು ತಾಮಸ ಎಂದು ಮೂರು ವಿಧವಾಗಿವೆ.

**ಸಾತ್ತ್ವಿಕ ತಪಸ್ಸು** - ಕರ್ಮಫಲದಲ್ಲಿ ಆಸೆ ಹೊಂದದೆ, ಪರಮಾತ್ಮನ ಆರಾಧನೆ ಎಂಬ ಭಾವನೆ ಹೊಂದಿ, ಶರೀರವಾಕ್ಕು ಮನಸ್ಸುಗಳಿಂದ ಅತಿಶ್ರದ್ಧೆಯಿಂದ ಆಚರಿಸಲ್ಪಡುವ ತಪಸ್ಸು ಸಾತ್ತ್ವಿಕ ತಪಸ್ಸು.

**ರಾಜಸ ತಪಸ್ಸು** - ಇತರರು ತನ್ನನ್ನು ಮನಸ್ಸಿನಲ್ಲಿ ಆದರಿಸಲಿ, ಮಾತಿನಿಂದ ಪ್ರಶಂಸೆ ಮಾಡಲಿ, ಶರೀರದಿಂದ ನಮಸ್ಕಾರ ಪೂಜಾದಿಗಳನ್ನು ಮಾಡಲಿ ಎಂಬ ಆಸೆಹೊಂದಿ, ಫಲಾಪೇಕ್ಷೆ ಹೊಂದಿ, ಡಂಭಕ್ಕಾಗಿ ಮಾಡುವ ಕಾಯಿಕ, ವಾಚಿಕ, ಮಾನಸಿಕ ತಪಸ್ಸುಗಳು ರಾಜಸತಪಸ್ಸು. ಇದು ಅಸ್ಥಿರವಾದುದೂ ಕ್ಷಯಿಸುವಂತಹುದೂ ಆಗಿದೆ.

**ತಾಮಸ ತಪಸ್ಸು** - ವಿವೇಕವಿಲ್ಲದ ಮೂಢಜನರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಅರಿಯದೆ, ತಮ್ಮನ್ನೂ ಇತರರನ್ನೂ ಹಿಂಸಿಸಿಕೊಂಡು, ಇತರರ ಕೇಡನ್ನು ಬಯಸಿ, ಅವರನ್ನು ಹಿಂಸಿಸುವುದಕ್ಕಾಗಿ ಮಾಡುವ ಕಾಯಿಕ, ವಾಚಿಕ, ಮಾನಸಿಕ ತಪಸ್ಸು ತಾಮಸತಪಸ್ಸು.

## ೪. ತ್ರಿವಿಧ ದಾನಗಳು (ಶ್ಲೋ. ೨೦-೨೨)

<u>ಸಾತ್ತ್ವಿಕದಾನ</u> - ಪ್ರತ್ಯುಪಕಾರವನ್ನು ಬಯಸದೆ, ದಾನಮಾಡುವುದು ತನ್ನ ಕರ್ತವ್ಯವೆಂದು ಭಾವಿಸಿ, ತನಗೆ ಉಪಕಾರವೇನನ್ನೂ ಮಾಡದವನಿಗೆ, ಸತ್ಪಾತ್ರನಿಗೆ, ಸದ್ದೇಶ, ಸತ್ಕಾಲದಲ್ಲಿ ಕೊಡಲ್ಪಡುವ ದಾನವು ಸಾತ್ತ್ವಿಕ ದಾನವೆನ್ನಿಸಲ್ಪಡುತ್ತದೆ.

**ರಾಜಸದಾನ** : ಪ್ರತ್ಯುಪಕಾರವನ್ನು ಅಪೇಕ್ಷಿಸಿ, ಫಲಾಪೇಕ್ಷೆ ಹೊಂದಿ, ಒಳ್ಳೆಯದಲ್ಲದ, ಅಮಂಗಳವಾದ ವಸ್ತುವನ್ನು ಕೊಡುವ ದಾನವು ರಾಜಸದಾನ.

**ತಾಮಸದಾನ** : ಒಳ್ಳೆಯದಲ್ಲದ ದೇಶ ಕಾಲಗಳಲ್ಲಿ, ಸತ್ಪಾತ್ರರಲ್ಲದವರಿಗೆ, ಗೌರವರಹಿತವಾಗಿ, ತಿರಸ್ಕಾರದಿಂದ, ಉಪಚಾರವಿಲ್ಲದೆ ಕೊಡುವ ದಾನವು ತಾಮಸದಾನವು.

**ಶಾಸ್ತ್ರಸಿದ್ಧವಾದ ಕರ್ತವ್ಯ ಕರ್ಮಗಳನ್ನೂ ''ಓಂ ತತ್ ಸತ್'' ಎಂಬುದನ್ನು ಅರ್ಥ ಸಹಿತ ಅನುಸಂಧಾನ ಮಾಡಿಕೊಂಡು ಶ್ರದ್ಧೆಯೊಂದಿಗೆ ಆಚರಿಸಬೇಕು. (ಶ್ಲೋ ೨೩-೨೮)**

'"ಓಂ ತತ್ ಸತ್" ಎಂಬ ಮೂರು ಪದಗಳೂ ವೇದದಲ್ಲಿ ಹೇಳಲ್ಪಟ್ಟಿವೆ. ಬ್ರಹ್ಮವಾದಿಗಳು ಮಾಡುವ ಯಜ್ಞ, ದಾನ, ತಪಸ್ಸು ಮೊದಲಾದ ಶಾಸ್ತ್ರೋಕ್ತವಾದ ಕರ್ಮಗಳೆಲ್ಲವೂ, 'ಓಂತತ್ ಸತ್' ಎಂಬ ಶಬ್ದದೊಂದಿಗೆ ಪ್ರಾರಂಭಿಸಲ್ಪಡುತ್ತವೆ. ವೇದವಿಧಿತವಲ್ಲದ ಯಜ್ಞಾದಿಕರ್ಮಗಳನ್ನು ಶ್ರದ್ಧೆಯಿಂದ ಮಾಡಿದರೂ ಅದಕ್ಕೆ ಫಲವಿಲ್ಲವೆಂದು ಪರಮಾತ್ಮನು ಮೊದಲೇ ತಿಳಿಸಿದ್ದಾನೆ. ಈಗ ವೇದವಿಧಿತವಾದ ಕರ್ಮಗಳನ್ನೂ 'ಓಂ ತತ್ ಸತ್' ಎಂದು ಹೇಳಿಕೊಂಡು ಶ್ರದ್ಧಾಭಕ್ತಿಗಳೊಂದಿಗೆ ಆಚರಿಸಬೇಕು ಎಂದೂ, ಶ್ರದ್ಧೆಯಿಲ್ಲದೆ ಮಾಡಿದರೆ ಅದು ಐಹಿಕ ಆಮುಷ್ಮಿಕವಾದ ಯಾವ ಫಲವನ್ನೂ ಉಂಟುಮಾಡುವುದಿಲ್ಲವೆಂದೂ ತಿಳಿಸಿದ್ದಾನೆ.

'ಓಂ ಎಂಬುದು ಸಮಸ್ತ ಜಗತ್ತು ಜೀವಾತ್ಮರೂ ಭಗವಂತನೊಂದಿಗೆ ಸೇರಿದವರಾಗಿ ಅವನ ಸ್ವತ್ತಾಗಿ ಇರುವುದನ್ನು ತಿಳಿಸುತ್ತದೆ.

ತತ್ ಎಂಬುದು ಪರಬ್ರಹ್ಮನನ್ನು ತಿಳಿಸುತ್ತದೆ.

ಸತ್ ಎಂಬುದು ಪ್ರಶಸ್ತವಾದ ಕಲ್ಯಾಣಕರವಾದ ಸತ್ಕರ್ಮವನ್ನು ತಿಳಿಸುತ್ತದೆ. ಆದ್ದರಿಂದ 'ಓಂ ತತ್ ಸತ್' ಎಂದು ಹೇಳಿಕೊಂಡು ಯಜ್ಞದಾನತಪಸ್ಸು ಮುಂತಾದ ಸತ್ಕರ್ಮಗಳನ್ನು ಭಗವತ್ ಕೈಂಕರ್ಯವಾಗಿ ಆಚರಿಸಬೇಕು ಎಂದು ಶ್ರೀಕೃಷ್ಣಪರಮಾತ್ಮನು ಇಲ್ಲಿ ಉಪದೇಶ ಮಾಡಿದ್ದಾನೆ.

ಈ ಅಧ್ಯಾಯದಲ್ಲಿ ಸಾತ್ತ್ವಿಕ, ರಾಜಸ ಮತ್ತು ತಾಮಸ ಎಂಬ ತ್ರಿವಿಧ ಶ್ರದ್ಧೆಗಳೂ ತ್ರಿವಿಧ ಯಜ್ಞದಾನತಪಸ್ಸುಗಳೂ ತಿಳಿಸಲ್ಪಟ್ಟಿವೆ.

★★★★

# ಭಗವದ್ಗೀತೆ ಅಧ್ಯಾಯ 18

## ಮೋಕ್ಷಸನ್ಯಾಸಯೋಗ

## ಗೀತಾರ್ಥಸಂಗ್ರಹಶ್ಲೋಕ ೨೨

ಈಶ್ವರೇ ಕರ್ತೃತಾಬುದ್ಧಿಃ
ಸತ್ತ್ವೋಪಾದೇಯತಾನ್ತಿಮೇ ।
ಸ್ವಕರ್ಮಪರಿಣಾಮಶ್ಚ
ಶಾಸ್ತ್ರಸಾರಾರ್ಥ ಉಚ್ಯತೇ ॥

ಈ ಶ್ಲೋಕದಲ್ಲಿ ಭಗವದ್ಗೀತೆಯ ೧೮ನೇಯ ಅಧ್ಯಾಯದ ಸಾರಾರ್ಥವು ತಿಳಿಸಲ್ಪಟ್ಟಿದೆ.

**ಈಶ್ವರೇ ಕರ್ತೃತಾಬುದ್ಧಿಃ** - ಸರ್ವೇಶ್ವರನೇ ಕರ್ಮಗಳ ಕರ್ತಾ ಎಂಬ ಬುದ್ಧಿಯೂ (ಅನುಸಂಧಾನ ಪ್ರಕಾರವೂ)

**ಸತ್ತ್ವಉಪಾದೇಯತಾ** - ತ್ರಿಗುಣಗಳಲ್ಲಿ ಸತ್ತ್ವಗುಣವೇ ಸ್ವೀಕರಿಸ (ಅಂಗೀಕರಿಸ)ತಕ್ಕದ್ದು ಎಂಬುದೂ

**ಸ್ವಕರ್ಮಪರಿಣಾಮಃ** - ತಮ್ಮತಮ್ಮ ಲೌಕಿಕ, ವೈದಿಕ, ಕರ್ತವ್ಯ ಕರ್ಮಗಳನ್ನು ಭಗವದಾರಾಧನರೂಪವಾಗಿ ಆಚರಿಸುವುದರಿಂದ ಭಗವತ್ ಪ್ರಾಪ್ತಿ ಲಭಿಸಬಲ್ಲದು ಎಂಬುದೂ;

**ಶಾಸ್ತ್ರಸಾರಾರ್ಥ :** ಗೀತಾಶಾಸ್ತ್ರದ ಸಾರಾರ್ಥವಾದ - ಭಕ್ತಿ ಮತ್ತು ಶರಣಾಗತಿ ಯೋಗಗಳ ವಿವರಣೆಯೂ

**ಅಂತಿಮೇ ಉಚ್ಯತೇ -** ಭಗವದ್ಗೀತೆಯ ಕೊನೆಯ (೧೮ನೆಯ) ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಭಗವದ್ಗೀತೆಯ ಈ 18ನೆಯ ಅಧ್ಯಾಯದ ಸಾರಾರ್ಥವು ಮುಂದೆ ತಿಳಿಸಲ್ಪಟ್ಟಿದೆ.

ಈ ಅಧ್ಯಾಯದಲ್ಲಿ ಮುಖ್ಯವಾಗಿ ನಾಲ್ಕು ವಿಷಯಗಳು ತಿಳಿಸಲ್ಪಟ್ಟಿವೆ.

I **ಭಗವಂತನೇ ಸಮಸ್ತ ಕರ್ಮಗಳ ಪ್ರಧಾನಕರ್ತಾ ಎಂಬುದನ್ನು ತಿಳಿಯಬೇಕು (ಶ್ಲೋ ೧ ರಿಂದ ೧೭)**

೧. ತ್ಯಾಗ ಮತ್ತು ಸನ್ಯಾಸ ಎಂಬ ಎರಡುಪದಗಳ ಅರ್ಥವೂ ಒಂದೇ ಎಂದು ಪರಮಾತ್ಮನು ಮೊದಲು ತಿಳಿಸುತ್ತಾನೆ.

ತ್ಯಾಗದಲ್ಲಿ ತ್ರಿಗುಣಗಳ ಮೂಲಕ ಮೂರು ವಿಧಗಳಿವೆ - ಕರ್ಮಗಳನ್ನು ಸಂಸಾರ ಬಂಧಕ್ಕೆ ಕಾರಣವೆಂದು ಅಜ್ಞಾನದಿಂದ ತ್ಯಜಿಸುವುದು ತಾಮಸ ತ್ಯಾಗವು; ಶರೀರಶ್ರಮಕ್ಕೆ ಭಯಪಟ್ಟು ಕಷ್ಟಸಾಧ್ಯವೆಂದು ತಿಳಿದು ಕರ್ಮಗಳನ್ನು ಮಾಡದೇ ಬಿಡುವುದು ರಾಜಸತ್ಯಾಗವು; ಮತ್ತು ಕರ್ತೃತ್ವ-ಮಮತಾಫಲತ್ಯಾಗದೊಂದಿಗೆ ಕರ್ಮಗಳನ್ನು ಮಾಡುವುದು ಸಾತ್ತ್ವಿಕತ್ಯಾಗವು ಅಂದರೆ ಕರ್ಮವು ತನ್ನದು ಎಂಬ ಮಮಕಾರವನ್ನೂ, ಕರ್ಮವನ್ನುಮಾಡುವವನು ತಾನು ಎಂಬ ಅಹಂಕಾರವನ್ನೂ, ಕರ್ಮದ ಫಲವು ತನಗೇ ಲಭಿಸಬೇಕೆಂಬ ಫಲಾಸಕ್ತಿಯನ್ನೂ ತ್ಯಜಿಸಿ ಶಾಸ್ತ್ರವಿಧಿತವಾದ ನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳನ್ನು ಮಾಡುವುದು ತನ್ನ ಕರ್ತವ್ಯವೆಂಬ ಭಾವನೆ ಹೊಂದಿ ಮಾಡುವುದೇ ಸಾತ್ತ್ವಿಕತ್ಯಾಗವು. ದೇಹಿಯಾದವನಿಗೆ ಕರ್ಮಗಳನ್ನು ಸಂಪೂರ್ಣವಾಗಿ ಬಿಡುವುದು ಸಾಧ್ಯವಿಲ್ಲ. ಕರ್ತವ್ಯ ಕರ್ಮಗಳನ್ನು ಕರ್ತೃತ್ವಮಮತಾಫಲತ್ಯಾಗದೊಂದಿಗೆ ಚೆನ್ನಾಗಿ ಮಾಡುವವನೇ ಸಾತ್ತ್ವಿಕತ್ಯಾಗಿಯು. ಆದ್ದರಿಂದ ಕರ್ಮ ಮಾಡದೇ ಅದನ್ನು ತ್ಯಜಿಸುವುದು ತ್ಯಾಗವಲ್ಲ. ಕರ್ಮದ ಕರ್ತೃತ್ವಮಮತಾ

ಫಲತ್ಯಾಗವೇ ಸಾತ್ತ್ವಿಕ ತ್ಯಾಗವು, ಅದೇ ಸನ್ಯಾಸವು. ಆದ್ದರಿಂದ ತ್ಯಾಗ ಮತ್ತು ಸನ್ಯಾಸ ಎಂಬ ಎರಡು ಪದಗಳ ಅರ್ಥವೂ ಒಂದೇ ಎಂದು ಇಲ್ಲಿ ಪರಮಾತ್ಮನು ತಿಳಿಸಿದ್ದಾನೆ.

೨. **ಪರಮಾತ್ಮನೇ ಕರ್ಮಗಳ ಪ್ರಧಾನಕರ್ತಾ ಎಂಬುದು ವಿವರಿಸಲ್ಪಟ್ಟಿದೆ.**

ಕರ್ಮಗಳ ಕರ್ತೃತ್ವವು ಪರಮಾತ್ಮನಿಗೆ ಸೇರಿದೆ; ಅವನೇ ಕರ್ಮಗಳ ಪ್ರಧಾನಕರ್ತಾ ಎಂಬುದನ್ನು ಇಲ್ಲಿ ವಿವರಿಸಿ ತಿಳಿಸಿದ್ದಾನೆ. ಒಂದು ಕರ್ಮವು ಮಾಡಲ್ಪಡಬೇಕಾದರೆ ಅದಕ್ಕೆ **ಅಧಿಷ್ಠಾನ** ಎಂದರೆ ಶರೀರ, <u>**ಕರ್ತಾ**</u> ಎಂದರೆ ಜೀವಾತ್ಮ, **ಕರಣ** ಎಂದರೆ ವಾಕ್ಕುಪಾಣಿಪಾದ ಮುಂತಾದ ಕರ್ಮೇಂದ್ರಿಯಗಳೂ ಮತ್ತು ಮನಸ್ಸು. <u>**ಚೇಷ್ಟಾ**</u> ಎಂದರೆ ಪ್ರಾಣವಾಯು ಮತ್ತು ದೈವ ಎಂದರೆ ಅಂತರ್ಯಾಮಿಯಾಗಿರುವ ಪರಮಾತ್ಮ. ಹೀಗೆ ಶರೀರ, ಜೀವಾತ್ಮ, ಇಂದ್ರಿಯಗಳು, ಪ್ರಾಣವಾಯು ಮತ್ತು ಪರಮಾತ್ಮ ಈ ಐದೂ ಕರ್ಮಕ್ಕೆ ಕಾರಣವಾಗಿರುವಾಗ ಕೇವಲ ಒಂದು ಅಂಶವಾಗಿರುವ ಜೀವಾತ್ಮನು ತಾನೇ ಕರ್ಮದ ಕರ್ತಾ ಎಂದು ಭಾವಿಸಿಕೊಂಡರೆ ಅದು ಸರಿಯಲ್ಲ, ಕರ್ಮದ ಕರ್ತೃವೂ ಅವನಲ್ಲ; ಅದರ ಫಲವೂ ಅವನದಲ್ಲ, ಅವನು ಮಾಡುವ ನಿತ್ಯ ನೈಮಿತ್ತಿಕ ಕರ್ತವ್ಯ ಕರ್ಮಗಳೂ, ಅವುಗಳ ಕರ್ತೃತ್ವವೂ, ಅವುಗಳ ಫಲವೂ ಎಲ್ಲವೂ ಅವನಿಗೆ ಶರೀರ ಇಂದ್ರಿಯಗಳನ್ನು ಕೊಟ್ಟು ಅವನಲ್ಲಿ ಅಂತರಾತ್ಮನಾಗಿರುವ ಭಗವಂತನಿಗೆ ಸೇರಿದವುಗಳಾಗಿವೆ. ಆದ್ದರಿಂದ ಕರ್ಮವೂ, ಅದರ ಕರ್ತೃತ್ವವೂ, ಅದರ ಫಲವೂ ಪರಮಾತ್ಮನಿಗೇ ಸೇರಿದವುಗಳಾಗಿವೆ ಎಂಬುದನ್ನು ಅರಿತು, ನಿತ್ಯನೈಮಿತ್ತಿಕ ಕರ್ತವ್ಯಕರ್ಮಗಳನ್ನು ಭಗವತ್‌ಕೈಂಕರ್ಯವಾಗಿ ಭಕ್ತಿಯಿಂದ ಮಾಡಬೇಕು ಎಂದು ಪರಮಾತ್ಮನು ಇಲ್ಲಿ ವಿವರಿಸಿ ತಿಳಿಸಿದ್ದಾನೆ. ಈ ರೀತಿಯಾಗಿ ಕರ್ಮಗಳನ್ನು ಮಾಡುವವನಿಗೆ ಕರ್ಮಬಂಧ ಉಂಟಾಗುವುದಿಲ್ಲ.

(ಜೀವಾತ್ಮನು ಕರ್ಮಕ್ಕೆ ಪ್ರಧಾನ ಕಾರಣನಲ್ಲದಿದ್ದರೂ ಅವನು ತನ್ನಲ್ಲಿರುವ ಪೂರ್ವಾರ್ಜಿತವಾದ ಸತ್ತ್ವರಜಸ್ತಮೋಗುಣಗಳಿಂದ ಪ್ರೇರಿತನಾಗಿ ತನ್ನ ಸ್ವಬುದ್ಧಿಯಿಂದ ಕರ್ಮಗಳಲ್ಲಿ ಪ್ರವರ್ತಿಸುವುದರಿಂದ ಅವನು

ಶಾಸ್ತ್ರಗಳಲ್ಲಿ ವಿಧಿಸಿರುವ ವಿಧಿ ನಿಷೇಧಗಳನ್ನು ಅರಿತು ಕರ್ಮಗಳನ್ನು ಆಚರಿಸಲು ಪ್ರಯತ್ನಿಸಬೇಕು ಎಂಬ ನಿಶ್ಚಿತಾರ್ಥವನ್ನು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.)

ಕರ್ಮವು ತನ್ನದಲ್ಲ, ಪರಮಾತ್ಮನದು; ಕರ್ಮದ ಕರ್ತೃ ತಾನಲ್ಲ, ಪರಮಾತ್ಮ ಮತ್ತು ಕರ್ಮದ ಫಲವೂ ತನ್ನದಲ್ಲ, ಪರಮಾತ್ಮನದು ಎಂಬ ಅಕರ್ತೃತ್ವಾನುಸಂಧಾನವೂ ಮತ್ತು ಫಲಾಭಿಸಂಧಿರಹಿತತ್ವವೂ ಚೇತನನಿಗೆ ಸುಲಭವಾಗಿ ಲಭಿಸುವುದಿಲ್ಲ, ಅದು ಸತ್ತ್ವಗುಣವು ವೃದ್ಧಿಹೊಂದುವುದರ ಮೂಲಕ ಉಂಟಾಗಬಲ್ಲದು. ಆದ್ದರಿಂದ ಚೇತನನು ಸತ್ತ್ವಗುಣವನ್ನು ಅಂಗೀಕರಿಸಿ ಅದನ್ನು ವೃದ್ಧಿಪಡಿಸಿಕೊಳ್ಳಬೇಕೆಂದು ಪರಮಾತ್ಮನು ತಿಳಿಸಿದ್ದಾನೆ.

## II ಕರ್ಮಾಚರಣೆಯಲ್ಲಿ ತ್ರಿಗುಣಗಳ ಕಾರ್ಯದ ಮತ್ತು ಸತ್ತ್ವಗುಣದ ಪ್ರಧಾನತೆಯ ವಿವರಣೆ (ಶ್ಲೋ। ೧೮-೪೦)

ಒಂದು ಕರ್ಮವನ್ನು ಮಾಡಬೇಕಾದರೆ ಆ ಕರ್ಮವಿಷಯವಾದ ಜ್ಞಾನವೂ, ಅನುಷ್ಠಿಸಲ್ಪಡುವ ಕರ್ಮವೂ, ಅದನ್ನು ಅನುಷ್ಠಿಸುವ ಕರ್ತೃವೂ, ಇರಬೇಕು. ಕರ್ಮವು ಯಶಸ್ವಿಯಾಗಿ ಅನುಷ್ಠಿಸಲ್ಪಡಬೇಕಾದರೆ ಅದಕ್ಕೆ ಕರ್ಮಮಾಡುವ ಚೇತನನಲ್ಲಿ ಒಳ್ಳೆಯಬುದ್ಧಿಯೂ, ಮತ್ತು ಧೃತಿಯೂ ಅಂದರೆ ಮನೋಬಲವೂ ಇರಬೇಕು. ಇವುಗಳೆಲ್ಲದರಿಂದ ಕರ್ಮವು ಮಾಡಲ್ಪಟ್ಟು ಅದರಿಂದ ಸುಖಪ್ರಾಪ್ತಿ ಉಂಟಾಗುತ್ತದೆ. ಕರ್ಮಕ್ಕೆ ಬೇಕಾದ ಜ್ಞಾನ, ಕರ್ಮ, ಕರ್ತಾ, ಬುದ್ಧಿ, ಧೃತಿ, ಮತ್ತು ಕರ್ಮದಿಂದ ಲಭಿಸುವ ಸುಖ ಇವುಗಳೆಲ್ಲವೂ ತ್ರಿಗುಣಗಳ ಪ್ರಭಾವದಿಂದ ಮೂರು ವಿಧವಾದವುಗಳಾಗಿವೆ. ಅವುಗಳಲ್ಲಿರುವ ತಾರತಮ್ಯವನ್ನೂ, ಅವುಗಳಲ್ಲಿ ಸತ್ತ್ವಗುಣವೇ ಅಂಗೀಕರಿಸತಕ್ಕದ್ದು ಎಂಬುದನ್ನೂ ಪರಮಾತ್ಮನು ತಿಳಿಸಿದ್ದಾನೆ.

### ೧. ತ್ರಿವಿಧಜ್ಞಾನಗಳು

ಸಾತ್ತ್ವಿಕ ಜ್ಞಾನ - ಸಮಸ್ತ ಜೀವಿಗಳ ಶರೀರಗಳಲ್ಲಿ ಭಿನ್ನತೆ ಇದ್ದರೂ ಅವುಗಳಲ್ಲಿ ಅಂತರಾತ್ಮನಾಗಿರುವ ಆತ್ಮರುಗಳಲ್ಲಿ ವ್ಯತ್ಯಾಸವಿಲ್ಲವೆಂದೂ ಆತ್ಮನು ನಾಶರಹಿತನಾಗಿ ಏಕರೂಪನಾಗಿ ಇರುವನು ಎಂದೂ ಅರಿಯುವ ಜ್ಞಾನವು ಸಾತ್ತ್ವಿಕಜ್ಞಾನವು.

ರಾಜಸಜ್ಞಾನ - ಸರ್ವಜೀವಿಗಳ ಬಾಹ್ಯಆಕಾರಗಳು ಬೇರೆ

ಬೇರೆಯಾಗಿರುವಂತೆ ಅವರೊಳಗೆ ಅಂತರಾತ್ಮನಾಗಿರುವ ಆತ್ಮನೂ ಬೇರೆ ಬೇರೆ ಆಕಾರ, ಬೇರೆ ಬೇರೆ ಗುಣಗಳುಳ್ಳವನಾಗಿರುವನು ಎಂದು ತಿಳಿಯುವ ಜ್ಞಾನವು ರಾಜಸಜ್ಞಾನವು.

ತಾಮಸಜ್ಞಾನ - ಒಂದೇ ಒಂದು ಕರ್ಮದ ಮೂಲಕ ಸಮಸ್ತ ಫಲಗಳನ್ನೂ ಹೊಂದಬೇಕೆಂಬ ಆಸೆ ಹೊಂದಿ, ಅತ್ಯಲ್ಪ ಫಲಕ್ಕೆ ಆಸೆಪಟ್ಟು ಸಾಧನವಲ್ಲದ್ದನ್ನು ಸಾಧನವೆಂದು ಭಾವಿಸುವ ಜ್ಞಾನವು ತಾಮಸಜ್ಞಾನವು

೨. ತ್ರಿವಿಧ ಕರ್ಮಗಳು

ಸಾತ್ತ್ವಿಕಕರ್ಮ : ಅಕರ್ತೃತ್ವಾನುಸಂಧಾನದೊಂದಿಗೂ, ರಾಗದ್ವೇಷ ರಹಿತವಾಗಿಯೂ, ಫಲಾಸಕ್ತಿ ರಹಿತವಾಗಿಯೂ, ಶ್ರದ್ಧೆಯಿಂದ ಮಾಡುವ ನಿತ್ಯನೈಮಿತ್ತಿಕಕರ್ತವ್ಯಕರ್ಮವು ಸಾತ್ತ್ವಿಕಕರ್ಮವು.

ರಾಜಸಕರ್ಮ - ತಾನೇ ಕರ್ಮದ ಕರ್ತಾ ಎಂಬ ಅಹಂಭಾವಹೊಂದಿ, ಫಲಾಪೇಕ್ಷೆಯಿಂದ ಕೂಡಿ, ಅದಕ್ಕಾಗಿ ಅತ್ಯಂತ ಶ್ರಮವಹಿಸಿ ಮಾಡುವ ಕರ್ಮವು ರಾಜಸ ಕರ್ಮವು.

ತಾಮಸಕರ್ಮ - ತಾನು ಮಾಡುವ ಕರ್ಮದಿಂದ ಮುಂದೆ ಬರುವ ಕಷ್ಟವನ್ನೂ (ಹಣದ ಖರ್ಚನ್ನೂ) ಅದರಿಂದ ತನಗೂ ಇತರರಿಗೂ ಉಂಟಾಗುವ ಹಾನಿಯನ್ನೂ, ಕರ್ಮವನ್ನು ಮಾಡಿ ಮುಗಿಸಲು ತನಗೆ ಸಾಮರ್ಥ್ಯವಿದೆಯೇ ಎಂಬುದನ್ನೂ ಯೋಚಿಸದೆ ಅಜ್ಞಾನದಿಂದ ಆರಂಭಿಸುವ ಕರ್ಮವು ತಾಮಸಕರ್ಮವು.

(3) ತ್ರಿವಿಧ ಕರ್ತೃಗಳು-

ಸಾತ್ತ್ವಿಕಕರ್ತೃ - ಫಲಸಂಗರಹಿತನಾಗಿ, ತಾನು ಕರ್ಮದ ಕರ್ತೃ ಎಂಬ ಅಹಂಕಾರರಹಿತನಾಗಿ, ಧೈರ್ಯಉತ್ಸಾಹಭರಿತನಾಗಿ, ಫಲದ ಸಿದ್ಧಿಅಸಿದ್ಧಿಗಳಲ್ಲಿ ಚಿತ್ತವಿಕಾರವಿಲ್ಲದವನಾಗಿ ಇರುವ ಕರ್ತನು ಸಾತ್ತ್ವಿಕ ಕರ್ತನು

ರಾಜಸಕರ್ತೃ - ಯಶಸ್ಸನ್ನೂ ಕರ್ಮದ ಫಲವನ್ನೂ ಕೋರುವವನೂ, ಕರ್ಮಕ್ಕೆ ಬೇಕಾದ ದ್ರವ್ಯವನ್ನು ಖರ್ಚುಮಾಡದ ಲೋಭ

ಸ್ವಭಾವವುಳ್ಳವನೂ, ಇತರರನ್ನು ಹಿಂಸಿಸಿ ಕರ್ಮಮಾಡಿಸುವವನೂ, ಕರ್ಮಮಾಡಲುಬೇಕಾದ ಪರಿಶುದ್ಧಿ ಇಲ್ಲದೇ ಅಶುಚಿಯಾದವನೂ, ಜಯಾಪಜಯಗಳಲ್ಲಿ ಹರ್ಷಶೋಕವುಳ್ಳವನೂ ಆದ ಕರ್ತನು ರಾಜಸಕರ್ತನು.

ತಾಮಸಕರ್ತೃ - ಕರ್ಮಗಳನ್ನು ಆಚರಿಸಲು ಯೋಗ್ಯತೆ ಇಲ್ಲದೆ ಅಸಮರ್ಥನಾದವನೂ, ಕರ್ಮವನ್ನು ಆರಂಭಿಸದೇ ಸೋಮಾರಿಯಾಗಿರುವವನೂ, ಆರಂಭಿಸಿದ ಕರ್ಮವನ್ನು ಮುಂದುವರಿಸದ ಮೊಂಡಪ್ರವೃತ್ತಿಯುಳ್ಳವನೂ, ವಂಚಿಸುವವನೂ, ಅತಿಯಾಗಿ ದುಃಖ ಪಡುವುದಕ್ಕೇ ಸ್ವಭಾವವಾಗಿಯುಳ್ಳವನೂ, ಇತರರಿಗೆ ಕೇಡು ಮಾಡುವ ಮನೋಭಾವವುಳ್ಳವನೂ ಆದ ಕರ್ತೃವು ತಾಮಸಕರ್ತೃವು.

4. ತ್ರಿವಿಧಬುದ್ಧಿಗಳು

ಸಾತ್ತ್ವಿಕಬುದ್ಧಿ - ಪ್ರವೃತ್ತಿ ನಿವೃತ್ತಿಧರ್ಮಗಳನ್ನೂ, ಕಾರ್ಯ ಅಕಾರ್ಯಗಳನ್ನೂ, ಭಯಾಭಯಗಳನ್ನೂ, ಬಂಧಮೋಕ್ಷಗಳನ್ನೂ ವಿವೇಚನೆಯಿಂದ ತಿಳಿಯುವ ಬುದ್ಧಿಯು ಸಾತ್ತ್ವಿಕಬುದ್ಧಿಯು.

ರಾಜಸಬುದ್ಧಿ - ಧರ್ಮ ಅಧರ್ಮಗಳನ್ನೂ, ಕಾರ್ಯ ಅಕಾರ್ಯಗಳನ್ನೂ, ಯಥಾವತ್ತಾಗಿ ತಿಳಿಯದ ಬುದ್ಧಿಯು ರಾಜಸಬುದ್ಧಿಯು.

ತಾಮಸಬುದ್ಧಿ - ಧರ್ಮವನ್ನು ಅಧರ್ಮವಾಗಿಯೂ, ಅಧರ್ಮವನ್ನು ಧರ್ಮವಾಗಿಯೂ, ಹೀಗೆ ಅಜ್ಞಾನದಿಂದ ಎಲ್ಲವನ್ನೂ ವಿಪರೀತವಾಗಿ ತಿಳಿಯುವ ಬುದ್ಧಿಯು ತಾಮಸಬುದ್ಧಿಯು.

(5) ತ್ರಿವಿಧಧೃತಿಗಳು : ಧೃತಿ ಎಂದರೆ ಮನೋಬಲವು

ಸಾತ್ತ್ವಿಕಧೃತಿ - ಯೋಗಯುಕ್ತವಾದ ಧೈರ್ಯದಿಂದ ಮನಸ್ಸು, ಪ್ರಾಣ, ಇಂದ್ರಿಯಗಳನ್ನು ವಶಪಡಿಸಿಕೊಂಡು ಅವುಗಳ ಕಾರ್ಯಗಳನ್ನು ತಡೆಯುವ ಮನೋಬಲವೇ ಸಾತ್ತ್ವಿಕಧೃತಿಯು.

ರಾಜಸಧೃತಿ : ಫಲಾಸಕ್ತಿ ಹೊಂದಿದವನು ಯಾವ ಮನೋಬಲದಿಂದ ತನ್ನ ಮನಸ್ಸು ಮತ್ತು ಇಂದ್ರಿಯಗಳ ಮೂಲಕ ಧರ್ಮ ಅರ್ಥ

ಕಾಮಾದಿಗಳನ್ನು ಹೊಂದಲು ಕರ್ಮಗಳನ್ನು ಮಾಡುತ್ತಾನೆಯೋ ಆ ಮನೋಬಲವು ರಾಜಸಧೃತಿಯು.

ತಾಮಸಧೃತಿ : ಯಾವ ಮನೋಬಲದಿಂದ ಕುಬುದ್ಧಿಯುಳ್ಳ ಮನುಷ್ಯನು ನಿದ್ರೆ, ಭಯ, ದುಃಖ, ಚಿಂತೆ, ಮದ ಮುಂತಾದುವುಗಳನ್ನು ಉಂಟುಮಾಡುವ ಕಾರ್ಯಗಳನ್ನು ಬಿಡದೆ ಆಚರಿಸುವನೋ ಆ ಮನೋಬಲವು ತಾಮಸಧೃತಿಯು.

(6) ತ್ರಿವಿಧಸುಖಗಳು : ಇಲ್ಲಿಯವರೆಗೆ ತಿಳಿಸಿದ ಜ್ಞಾನ , ಕರ್ಮ, ಕರ್ತೃ, ಬುದ್ಧಿ, ಧೃತಿ ಇವೆಲ್ಲವೂ ಸುಖಪ್ರಾಪ್ತಿಗೆ ಕಾರಣವಾಗಿವೆ. ಸುಖಗಳೂ ಸತ್ತ್ವಾದಿ ಗುಣಗಳಿಂದ ಮೂರು ವಿಧವಾಗಿವೆ.

ಸಾತ್ತ್ವಿಕಸುಖ - ಯಾವ ಸುಖವು ಮೊದಲು ಅಭ್ಯಾಸ ಕಾಲದಲ್ಲಿ ವಿಷದಂತೆ ತೋರಿ, ಪರಿಣಾಮದಲ್ಲಿ ಅಮೃತಕ್ಕೆ ಸಮಾನವಾಗಿ ಇರುವುದೋ ಅಂತಹ ಆತ್ಮಜ್ಞಾನದಿಂದ ಉಂಟಾಗುವ ಸುಖವು ಸಾತ್ತ್ವಿಕಸುಖವು.

ರಾಜಸಸುಖ - ವಿಷಯಗಳೊಡನೆ ಇಂದ್ರಿಯಗಳ ಸಂಬಂಧದಿಂದ ಉಂಟಾಗುವ ಯಾವ ಸುಖವು ಮೊದಲು ಅಮೃತದಂತೆ ಪ್ರಿಯವಾಗಿ ತೋರಿ ಕೊನೆಗೆ ಪರಿಣಾಮದಲ್ಲಿ ವಿಷದಂತೆ ಆಗುವುದೋ ಅದು ರಾಜಸಸುಖವು.

ತಾಮಸಸುಖ :- ಯಾವ ಸುಖವು ಮೊದಲು ಅಂದರೆ ಸುಖಾನುಭವ ಕಾಲದಲ್ಲೂ ಮತ್ತು ಪರಿಣಾಮದೆಶೆಯಲ್ಲೂ ಚೇತನನ ಬುದ್ಧಿಗೆ ಮೋಹವನ್ನುಂಟುಮಾಡಿ, ನಿದ್ರೆ, ಆಲಸ್ಯ, ಸೋಮಾರಿತನ, ಅಜಾಗ್ರತೆ, ಪ್ರಮಾದಾದಿಗಳನ್ನು ಉಂಟುಮಾಡುತ್ತದೆಯೋ ಅದು ತಾಮಸ ಸುಖವು

ಈ ಜಗತ್ತಿನಲ್ಲಿರುವ ಸಮಸ್ತಪ್ರಾಣಿಗಳೂ, ಮನುಷ್ಯರೂ, ದೇವಲೋಕದಲ್ಲಿರುವ ದೇವತೆಗಳೂ ಮುಂತಾಗಿ ಸಮಸ್ತ ಜೀವಿಗಳಲ್ಲಿ ಯಾರೂ ಯಾವುದೂ ಪ್ರಕೃತಿಯಿಂದ ಉಂಟಾದ ಸತ್ತ್ವ ರಜಸ್ತಮಸ್ಸೆಂಬ ಈ ತ್ರಿಗುಣಗಳ ಪ್ರಭಾವದಿಂದ ಬಿಡಲ್ಪಟ್ಟವರಲ್ಲ, ಆದ್ದರಿಂದ

ಮೋಕ್ಷೇಚ್ಛೆಯುಳ್ಳವರು ರಜೋಗುಣತಮೋಗುಣಗಳನ್ನು ಅಡಗಿಸಿ, ಸತ್ತ್ವಗುಣವನ್ನು ವೃದ್ಧಿಪಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂಬುದೇ ಇಲ್ಲಿ ಶ್ರೀ ಕೃಷ್ಣಪರಮಾತ್ಮನ ಉಪದೇಶ.

**III ವರ್ಣಾಶ್ರಮೋಚಿತವಾದ ಕರ್ತವ್ಯಕರ್ಮಗಳನ್ನು ಭಗವದಾರಾಧನ ರೂಪವಾಗಿ ಭಕ್ತಿಯಿಂದ ಆಚರಿಸಿದರೆ ಭಗವತ್ಪ್ರಾಪ್ತಿ ಉಂಟಾಗುತ್ತದೆ (ಶ್ಲೋ॥ ೪೧-೬೦)**

ಚೇತನರು ತಮ್ಮ ತಮ್ಮ ಪೂರ್ವಕರ್ಮಗಳ ಮೂಲಕ ತಾವು ಪಡೆದಿರುವ ಸತ್ತ್ವರಜಸ್ತಮೋಗುಣಗಳಿಗೆ ಅನುಗುಣವಾದ ಸ್ವಭಾವ ಹೊಂದಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳಲ್ಲಿ ಜನ್ಮಹೊಂದುತ್ತಾರೆ. ಆಯಾ ವರ್ಣದವರ ಸ್ವಭಾವ ಮತ್ತು ಗುಣಗಳಿಗೆ ಅನುಗುಣವಾಗಿ ಅವರವರಿಗೆ ಶಾಸ್ತ್ರದಲ್ಲಿ ಬೇರೆ ಬೇರೆ ಕರ್ಮಗಳೂ ಮತ್ತು ವೃತ್ತಿಗಳೂ ವಿಭಾಗಿಸಲ್ಪಟ್ಟು ತಿಳಿಸಲ್ಪಟ್ಟಿವೆ.

**ಬ್ರಾಹ್ಮಣನ ಗುಣ, ಸ್ವಭಾವ ಮತ್ತು ತದನುಗುಣವಾದ ಕರ್ಮಗಳು-** ಬ್ರಾಹ್ಮಣನ ಪ್ರಧಾನ ಗುಣವು ರಜಸ್ಸನ್ನೂ ತಮಸ್ಸನ್ನೂ ಅಡಗಿಸಿ ವೃದ್ಧಿ ಹೊಂದಿರುವ ಸತ್ತ್ವಗುಣವು. ಆದ್ದರಿಂದ ಅಂತರ ಮತ್ತು ಬಾಹ್ಯ ಇಂದ್ರಿಯಗಳನ್ನು ಅಡಗಿಸುವುದು, ತಪಸ್ಸು, ಪರಿಶುದ್ಧತೆ, ಸಹನೆ, ಕಪಟವಿಲ್ಲದಿರುವುದು, ಜ್ಞಾನ, ವಿಜ್ಞಾನ (ಅಂದರೆ ವೇದಾಂತ ಜ್ಞಾನ) ಪರಮಾತ್ಮನಲ್ಲಿ ದೃಢವಾದ ನಂಬಿಕೆ ಇವೆಲ್ಲವೂ ಬ್ರಾಹ್ಮಣನ ಸ್ವಭಾವ ಜನ್ಯವಾದ ಗುಣ ಮತ್ತು ಕರ್ಮಗಳು. ಅವನಲ್ಲಿ ಸತ್ತ್ವಗುಣವು ಅಧಿಕವಾಗಿರುವುದರಿಂದ ಈ ಗುಣಗಳೆಲ್ಲವೂ ಅವನಿಗೆ ಸುಲಭ 'ವಾದುದಾಗಿವೆ.

**ಕ್ಷತ್ರಿಯನ ಗುಣ, ಸ್ವಭಾವ ಮತ್ತು ಕರ್ಮಗಳು -** ಕ್ಷತ್ರಿಯನ ಪ್ರಧಾನಗುಣವು ತಮಸ್ಸನ್ನೂ ಸತ್ತ್ವವನ್ನೂ ಅಡಗಿಸಿ ವೃದ್ಧಿಹೊಂದಿರುವ ರಜೋಗುಣವು. ಆದ್ದರಿಂದ ಶೌರ್ಯ ತೇಜಸ್ಸು ಧೈರ್ಯ ಸಾಮರ್ಥ್ಯ, ಯುದ್ಧದಲ್ಲಿ ಭಯಹೊಂದಿ ಓಡದಿರುವುದು, ದಾನಕೊಡುವುದು, ನಿಯಮಿಸುವ ಸಾಮರ್ಥ್ಯ ಇವೆಲ್ಲವೂ ಕ್ಷತ್ರಿಯನ ಸ್ವಭಾವ ಜನ್ಯವಾದ ಗುಣ ಮತ್ತು ಕರ್ಮಗಳಾಗಿವೆ.

ವೈಶ್ಯನ ಗುಣ, ಸ್ವಭಾವ ಮತ್ತು ತದನುಗುಣವಾದ ಕರ್ಮಗಳು - ವೈಶ್ಯನ ಪ್ರಧಾನಗುಣವು ರಜಸ್ಸನ್ನೂ, ಸತ್ತ್ವವನ್ನೂ ಅಡಗಿಸಿ ಸ್ವಲ್ಪವಾಗಿ ವೃದ್ಧಿಹೊಂದಿರುವ ತಮೋಗುಣವು. ಆದ್ದರಿಂದ ಕೃಷಿ ಅಂದರೆ ಧಾನ್ಯಬೆಳೆಯಲು ಭೂಮಿಉಳುವುದು, ಪಶುಪಾಲನೆ, ಸಂಪಾದನೆಗಾಗಿ ಪದಾರ್ಥಗಳನ್ನು ಕೊಂಡು ಮಾರುವುದು (ವ್ಯಾಪಾರ), ಇವುಗಳೆಲ್ಲಾ ವೈಶ್ಯನ ಸ್ವಭಾವಜನ್ಯವಾದ ಗುಣ ಮತ್ತು ಕರ್ಮಗಳಾಗಿವೆ.

ಶೂದ್ರನ ಸ್ವಭಾವ ಮತ್ತು ತದನುಗುಣವಾದ ಕರ್ಮಗಳು - ಶೂದ್ರನ ಪ್ರಧಾನ ಗುಣವು ರಜಸ್ಸನ್ನೂ, ಸತ್ತ್ವವನ್ನೂ ಅಡಗಿಸಿ ಅಧಿಕವಾಗಿ ವೃದ್ಧಿ ಹೊಂದಿರುವ ತಮೋಗುಣವು. ಆದ್ದರಿಂದ ಶೂದ್ರನ ಸ್ವಭಾವಕ್ಕೆ ಅನುಗುಣವಾದ ಕರ್ಮವು ಪರಿಚರ್ಯಾತ್ಮಕ ಕರ್ಮವು. ಅಂದರೆ ಸೇವೆ ಮಾಡುವುದು ಇವರ ಸ್ವಭಾವಜನ್ಯವಾದ ಕರ್ಮವಾಗಿದೆ ಎಂದು ತಿಳಿಸಿದೆ.

ತನಗೆ ಜನ್ಮ ಪ್ರಾಪ್ತವಾಗಿರುವ, ತನ್ನ ವರ್ಣಾಶ್ರಮಕ್ಕೆ ಅನುಗುಣವಾದ ನಿತ್ಯನೈಮಿತ್ತಿಕಕರ್ತವ್ಯಕರ್ಮಗಳನ್ನು ಭಗವದಾರಾಧನ ರೂಪವಾಗಿ ಮಾಡುವ ಪುರುಷನು ತನ್ನ ಕರ್ಮಗಳಿಂದಲೇ ಸಮಸ್ತಲೋಕಗಳ ಮತ್ತು ಜೀವಿಗಳ ಉತ್ಪತ್ತಿಗೆ ಕಾರಣನಾದ ಭಗವಂತನನ್ನು ಆರಾಧಿಸಿ ಉತ್ತಮ ಗತಿಯನ್ನು ಹೊಂದುವನು. ಅವನು ಸಂಸಾರ ಬಂಧವನ್ನು ಹೊಂದುವುದಿಲ್ಲ, ಅವನು ಕರ್ಮಯೋಗಾನುಷ್ಠಾನದಿಂದ ಶಾಂತಚಿತ್ತನಾಗಿ, ಧ್ಯಾನಯೋಗ ನಿರತನಾಗಿ, ಆತ್ಮಾನುಭವವನ್ನು ಅನುಭವಿಸುತ್ತಾ, ಕೊನೆಗೆ ಭಗವಂತನಲ್ಲಿ ಪರಭಕ್ತಿಯನ್ನು ಹೊಂದಿ ಭಗವಂತನನ್ನು ಹೊಂದುವನು ಎಂದು ಪರಮಾತ್ಮನು ತಿಳಿಸಿದ್ದಾನೆ.

ಅಷ್ಟು ಮಾತ್ರವಲ್ಲದೆ ಮಾನವನು ತಾನು ಮಾಡುವ ಸಮಸ್ತ ಕಾಮ್ಯ ಕರ್ಮಗಳನ್ನು ಕೂಡ ಭಗವಂತನಲ್ಲಿ ಕರ್ತೃತ್ವಾದಿಗಳನ್ನು ಸಮರ್ಪಿಸಿ, ಫಲತ್ಯಾಗ ಮಾಡಿ, ಭಗವದಾರಾಧನರೂಪವಾಗಿ ಭಕ್ತಿಯಿಂದ ಮಾಡಿದರೆ ಅವನೂ ಕೂಡ ಭಗವದನುಗ್ರಹದಿಂದ ಭಗವಂತನಲ್ಲಿ ಪೂರ್ಣ ಭಕ್ತಿ ಹೊಂದಿ ಉತ್ತಮಪದವನ್ನು ಹೊಂದುವನು ಎಂದು ಪರಮಾತ್ಮನು ತಿಳಿಸಿದ್ದಾನೆ.

ಆದ್ದರಿಂದ ನಿನ್ನ ವರ್ಣಾಶ್ರಮೋಚಿತ ನಿತ್ಯನೈಮಿತ್ತಿಕಸಮಸ್ತಕರ್ತವ್ಯ

ಕರ್ಮಗಳನ್ನೂ, ಮತ್ತು ಕಾಮ್ಯ ಕರ್ಮಗಳನ್ನೂ - ಅವುಗಳ ಕರ್ತೃತ್ವ ಫಲಾದಿಗಳನ್ನೆಲ್ಲಾ, ಪರಮಾತ್ಮನಲ್ಲಿ ಸಮರ್ಪಿಸಿ, ಪರಮಾತ್ಮನನ್ನೇ ಪರಮಪ್ರಾಪ್ಯನನ್ನಾಗಿ ಅನುಸಂಧಾನ ಮಾಡುತ್ತಾ, ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸಿ, ಸಮಸ್ತ ಕರ್ಮಗಳನ್ನೂ ಮಾಡುತ್ತಿದ್ದರೆ ಭಗವದನುಗ್ರಹದಿಂದ ಸಮಸ್ತ ಸಾಂಸಾರಿಕದುಃಖಗಳನ್ನು ಹೋಗಲಾಡಿಸಿಕೊಂಡವನಾಗುವೆ ಎಂದು ಪರಮಾತ್ಮನು ಅರ್ಜುನನಿಗೆ ಉಪದೇಶ ನೀಡಿದ್ದಾನೆ.

ಹಾಗೆ ಮಾಡದೆ, ಅರ್ಜುನನು ಭಗವಂತನ ಉಪದೇಶವನ್ನು ಕೇಳದೆ, ಅಹಂಕಾರ ಹೊಂದಿದವನಾಗಿ ತನಗೆ, ವರ್ಣಾಶ್ರಮೋಚಿತವಾದ ಧರ್ಮಯುದ್ಧವನ್ನು ಮಾಡುವುದಿಲ್ಲವೆಂದು ನಿಶ್ಚಯಿಸಿಕೊಂಡರೆ ಅದು ಫಲಿಸುವುದಿಲ್ಲ, ಏಕೆಂದರೆ ಅವನು ತನ್ನ ಕ್ಷತ್ರಿಯಸ್ವಭಾವಜನ್ಯವಾದ ರಜೋಗುಣದಿಂದ ಬಂಧಿಸಲ್ಪಟ್ಟ ವನಾಗಿರುವುದರಿಂದ, ಅವನ ಪ್ರಕೃತಿಯೇ ಅಂದರೆ ಸ್ವಭಾವವೇ ಅವನನ್ನು ಯುದ್ಧಮಾಡುವಂತೆ ಪ್ರೇರೇಪಿಸುತ್ತದೆ. ಅದರಿಂದ ಅವನು ಮೋಹಪರವಶನಾಗಿ ವಿವಶನಾಗಿ ಯುದ್ಧವನ್ನು ಮಾಡಿಯೇ ತೀರುವನು. ಆದ್ದರಿಂದ ''ಕ್ಷತ್ರಿಯನಾದ ನಿನ್ನ ವರ್ಣಕ್ಕೆ ಸಹಜ ಧರ್ಮವಾದ ಈ ಧರ್ಮಯುದ್ಧವನ್ನು ಭಗವದಾರಾಧನರೂಪವಾಗಿ ಮಾಡು'' ಎಂಬುದೇ ಇಲ್ಲಿ ಪರಮಾತ್ಮನು ಅರ್ಜುನನಿಗೆ ನೀಡಿರುವ ಉಪದೇಶ.

## IV ಗೀತಾಶಾಸ್ತ್ರದ ಸಾರಾರ್ಥ-ಭಗವದ್ಗೀತೆಯ ಚರಮೋಪದೇಶ ಶರಣಾಗತಿ ಯೋಗ (ಶ್ಲೋ ೬೧-೬೬)

(೧) ಪ್ರಕೃತಿಯ ಬಂಧನ ಪ್ರಕಾರವನ್ನು ತಿಳಿಸಿ ಅದರಿಂದ ಮುಕ್ತಿ ಹೊಂದಲು ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯ ಎಂಬುದನ್ನು ಪರಮಾತ್ಮನು ತಿಳಿಸುತ್ತಾನೆ.

ಈ ಜಗತ್ತಿನಲ್ಲಿರುವ ಜೀವಿಗಳು ಪ್ರಕೃತಿ ಎಂಬ ಈ ದೇಹಯಂತ್ರದಲ್ಲಿ ಸಿಕ್ಕಿಕೊಂಡಿದ್ದಾರೆ. ಪರಮಾತ್ಮನು ಅವರೆಲ್ಲರ ಹೃದಯದಲ್ಲಿ ನೆಲಸಿ ಅವರವರಿಗೆ ಅವರವರ ಪೂರ್ವಾರ್ಜಿತ ಕರ್ಮಗಳ ಫಲವಾಗಿ ಪ್ರಾಪ್ತವಾಗಿರುವ ಸತ್ವಾದಿ ತ್ರಿಗುಣಗಳಿಗೆ ಅನುಸಾರವಾಗಿ ಅವರವರನ್ನು ಆಯಾ ಪ್ರಕೃತಿ ಎಂಬ ಯಂತ್ರದ ಮೂಲಕ ತಿರುಗಿಸಿ ಆಡಿಸುತ್ತಿದ್ದಾನೆ. ಈ ಪ್ರಕೃತಿಯೆಂಬ ಮಾಯಾ ಬಂಧನದಿಂದ ಬಿಡುಗಡೆ ಹೊಂದುವುದು ಬಹಳ ಕಷ್ಟ, ಅದಕ್ಕೆ ಪರಮಾತ್ಮನಲ್ಲಿ ಶರಣಾಗತಿಯೇ

ಉಪಾಯ. ಆದ್ದರಿಂದ "ಅವನನ್ನೇ (ಪರಮಾತ್ಮನನ್ನೇ) ಸರ್ವಾತ್ಮನಾ ಶರಣು ಹೊಂದು. ಅವನ ಅನುಗ್ರಹದಿಂದ ಪರಮಶಾಂತಿಯನ್ನೂ ಶಾಶ್ವತವಾದ ಪದವಿಯನ್ನೂ ಹೊಂದುವೆ" ಎಂದು (೬೨ನೆಯ ಶ್ಲೋಕದಲ್ಲಿ) ಪರಮಾತ್ಮನು ಉಪದೇಶ ಮಾಡಿದ್ದಾನೆ.

**ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಸಮಗ್ರ ಉಪದೇಶದ ಸಾರವಾದ ಕೊನೆಯ ಉಪದೇಶ-ಭಕ್ತಿ ಮತ್ತು ಶರಣಾಗತಿ ಯೋಗಗಳು -**

ಕೊನೆಯದಾಗಿ ಪರಮಾತ್ಮನು, ಅರ್ಜುನನು ತನಗೆ ಅತ್ಯಂತ ಪ್ರಿಯನಾಗಿರುವುದರಿಂದ ಅವನಿಗೆ ಇಲ್ಲಿಯವರೆಗೆ ತಿಳಿಸಿದ ಎಲ್ಲ ಯೋಗಸಾಧನೆಗಳಿಗಿಂತ ಅತ್ಯಂತ ಮೇಲಾದ ಉಪದೇಶವನ್ನು ಮಾಡುವುದಾಗಿ ತಿಳಿಸುತ್ತಾನೆ. ಗೀತೆಯ 2ನೆಯ ಅಧ್ಯಾಯದಲ್ಲಿ "ಕಾರ್ಪಣ್ಯ ದೋಷೋಪಹತಸ್ವಭಾವಃ" ಎಂಬ 7ನೇ ಶ್ಲೋಕದಲ್ಲಿ ತನಗೆ ಶ್ರೇಯಸ್ಸಿನ ಮಾರ್ಗವನ್ನು ತೋರಿಸಿ ಕಾಪಾಡುವಂತೆ ಪ್ರಾರ್ಥಿಸಿದ ಅರ್ಜುನನಿಗೆ ಕರ್ಮಜ್ಞಾನ ಭಕ್ತಿಯೋಗಗಳನ್ನೆಲ್ಲಾ ೧೮ ಅಧ್ಯಾಯಗಳಲ್ಲಿ ವಿವರಿಸಿ ತಿಳಿಸಿ - ಕೊನೆಯಲ್ಲಿ ೧೮ನೇ ಅಧ್ಯಾಯದ ೬೫ ಮತ್ತು ೬೬ನೇ ಶ್ಲೋಕಗಳಲ್ಲಿ ಭಗವದ್ಗೀತೆಯ ಸಾರವಾದ ಭಕ್ತಿ ಮತ್ತು ಶರಣಾಗತಿ ಯೋಗಗಳ ಸಾರಾರ್ಥವನ್ನು ಉಪದೇಶಿಸಿದ್ದಾನೆ. ಈ ಎರಡು ಶ್ಲೋಕಗಳಲ್ಲಿ ಭಗವದ್ಗೀತೆಯ ಸಾರವಾದ ಉಪದೇಶವು ಅಡಗಿದೆ.

**ಮನ್ಮನಾಭವ ಮದ್ಭಕ್ತೋ**
**ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂತೇ**
**ಪ್ರತಿಜಾನೇಪ್ರಿಯೋಽಸಿಮೇ ॥ಶ್ಲೋ ೬೫ ।**

ಅಂದರೆ "ನೀನು ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗು, ನನ್ನಲ್ಲಿ ಭಕ್ತಿ ಹೊಂದು, ನನ್ನನ್ನೇ ಆರಾಧಿಸು. ನನ್ನನ್ನೇ ನಮಸ್ಕರಿಸುತ್ತಿರು. ಆಗ ನೀನು ನನ್ನನ್ನೇ ಹೊಂದುತ್ತೀಯೆ. ಇದು ಸತ್ಯವಾದ ಮಾತು. ನೀನು ನನಗೆ ಪ್ರಿಯನಾಗಿರುವುದರಿಂದ ಇದು ಸತ್ಯವೆಂದು ನಿನಗೆ ಪ್ರತಿಜ್ಞೆ ಮಾಡಿ ತಿಳಿಸುತ್ತೇನೆ" ಎಂದರ್ಥ.

ಇದರ ಸಾರಾರ್ಥವೇನೆಂದರೆ ಚೇತನನು ಪರಮಾತ್ಮನನ್ನು ಪ್ರೀತಿಯಿಂದ ಸ್ಮರಿಸುತ್ತಾ, ಅವನ ಭಕ್ತನಾಗಿ ಅವನಿಗೆ ಭಕ್ತಿಯಿಂದ ಪೂಜೆಸಲ್ಲಿಸುತ್ತಾ, ಅವನನ್ನು ನಮಸ್ಕರಿಸುತ್ತಾ ಇದ್ದರೆ ಅವನಿಗೆ ಪರಮಾತ್ಮನಲ್ಲಿ ಅತ್ಯಧಿಕವಾದ ಪ್ರೀತಿ ಉಂಟಾಗುತ್ತದೆ. ಆಗ ತನ್ನನ್ನು ಅತ್ಯಂತ ಪ್ರೀತಿಯಿಂದ ಸ್ಮರಿಸುತ್ತಿರುವ ಅವನಲ್ಲಿ ಪರಮಾತ್ಮನಿಗೂ ಪ್ರೀತಿ ಉಂಟಾಗಿ, ತನಗೆ ಅತ್ಯಂತ ಪ್ರಿಯನಾದ ಆ ಭಕ್ತನ ವಿಯೋಗವನ್ನು ಸಹಿಸಲಾರದವನಾಗಿ, ಅವನು ತನ್ನನ್ನು ಹೊಂದುವಂತೆ ತಾನೇ ಮಾಡುವುದಾಗಿ ಪರಮಾತ್ಮನು ಹೇಳಿದ್ದಾನೆ. ಇದು ಸತ್ಯವಾದ ಮಾತೆಂದು ಭರವಸೆ ಕೊಟ್ಟು ಪರಮಾತ್ಮನು ಪ್ರತಿಜ್ಞೆ ಮಾಡಿ ತಿಳಿಸಿದ್ದಾನೆ. ಆದ್ದರಿಂದ ಪರಮಾತ್ಮನನ್ನು ಹೊಂದಲು ಪರಮಾತ್ಮನೇ ಉಪಾಯ ಎಂದು ತಿಳಿಸಿದ್ದಾನೆ. ಅವನಲ್ಲಿ ಶರಣಾಗುವಂತೆ ಮುಂದೆ ತಿಳಿಸುತ್ತಾನೆ.

**ಭಗವಂತನಲ್ಲಿ ಶರಣಾಗುವಂತೆ ಉಪದೇಶಿಸುವ ಭಗವದ್ಗೀತೆಯ ಚರಮಶ್ಲೋಕವು (ಶ್ಲೋಕ ೬೬)**

**ಸರ್ವಧರ್ಮಾನ್ಪರಿತ್ಯಜ್ಯ**
**ಮಾಮೇಕಂ ಶರಣಂವ್ರಜ ।**
**ಅಹಂತ್ವಾ ಸರ್ವಪಾಪೇಭ್ಯೋ**
**ಮೋಕ್ಷಯಿಷ್ಯಾಮಿ ಮಾಶುಚಃ (ಶ್ಲೋ ೬೬)**

ಅಂದರೆ "ಸಮಸ್ತ ಧರ್ಮಗಳನ್ನೂ ಸಂಪೂರ್ಣವಾಗಿ ತ್ಯಜಿಸಿ (ಅಂದರೆ ಸಾತ್ವಿಕ ತ್ಯಾಗಮಾಡಿ) ನನ್ನೊಬ್ಬನನ್ನೇ ಶರಣು ಹೊಂದು. ನಾನು ನಿನ್ನನ್ನು ಸರ್ವ ಪಾಪಗಳಿಂದಲೂ ಬಿಡಿಸುವೆನು. ನೀನು ಶೋಕಿಸಬೇಡ' ಎಂದು ಅರ್ಥ.

ಇದೇ ಭಗವದ್ಗೀತೆಯಲ್ಲಿ ಭಗವಂತನು ಅರ್ಜುನನಿಗೆ ತಿಳಿಸಿದ ಕೊನೆಯ ಉಪದೇಶ. ಇದಾದ ಮೇಲೆ ತಿಳಿಸಿರುವ ಶ್ಲೋಕಗಳೆಲ್ಲಾ ಭಗವದ್ಗೀತೆಗೆ ಉಪಸಂಹಾರವಾಗಿದೆ. ಇದು ಅರ್ಜುನನಿಗೆ ಪರಮಾತ್ಮನು ಉಪದೇಶಿಸಿದ ಚರಮೋಪದೇಶವಾಗಿರುವುದರಿಂದ ಇದನ್ನು ಚರಮಶ್ಲೋಕವೆಂದು ನಮ್ಮ ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ. ಇದು ಭಗವದ್ಗೀತೆಯಲ್ಲಿ ಬಹಳ ಮುಖ್ಯವಾದ ಶ್ಲೋಕವಾಗಿದೆ . ಇದಕ್ಕೆ ಶ್ರೀರಾಮಾನುಜಾಚಾರ್ಯರು ಅವರ ಗೀತಾಭಾಷ್ಯದಲ್ಲಿ ಎರಡು ವಿಧವಾದ ಅರ್ಥವನ್ನು ತಿಳಿಸಿದ್ದಾರೆ ಮತ್ತು ನಮ್ಮ

ಪೂರ್ವಾಚಾರ್ಯರುಗಳು ವಿಸ್ತಾರವಾದ ವ್ಯಾಖ್ಯಾನಗಳನ್ನು ರಚಿಸಿ ಇದರ ಮೂಲಕ ಶರಣಾಗತಿತತ್ತ್ವವನ್ನು ವಿವರಿಸಿ ತಿಳಿಸಿದ್ದಾರೆ.

ಇದರ ಸಾರಾರ್ಥವೇನೆಂದರೆ - **ಸರ್ವ ಧರ್ಮಾನ್ ಪರಿತ್ಯಜ್ಯ** - ಪರಮ ಶ್ರೇಯಸ್ಸಿಗೆ ಸಾಧನಗಳಾದ ಕರ್ಮಯೋಗ ಜ್ಞಾನಯೋಗ, ಭಕ್ತಿಯೋಗ ರೂಪಗಳಾದ ಸಮಸ್ತ ಧರ್ಮಗಳನ್ನೂ, ಮತ್ತು ಭಗವದಾರಾಧನೆ, ಭಗವನ್ನಾಮ ಸಂಕೀರ್ತನೆ ಮುಂತಾದ ನಿತ್ಯನೈಮಿತ್ತಿಕಕರ್ತವ್ಯಕರ್ಮಗಳೆಲ್ಲವನ್ನೂ ತ್ಯಜಿಸಿ - ಅಂದರೆ ಅವುಗಳೆಲ್ಲವನ್ನೂ ಸ್ವರೂಪತಃ ತ್ಯಜಿಸಬೇಕೆಂದು ಅರ್ಥವಲ್ಲ, ಅವುಗಳನ್ನು **ಸಾತ್ತ್ವಿಕತ್ಯಾಗ ಮಾಡಿ,** - ಅಂದರೆ ಅವುಗಳನ್ನು ಮಾಡುತ್ತಿರುವವನು ತಾನು ಎಂಬ ಅಹಂಕಾರ, ಅವುಗಳೆಲ್ಲವೂ ತನಗೇ ಸೇರಿದವುಗಳೆಂಬ ಮಮಕಾರ ಮತ್ತು ಅವುಗಳ ಫಲವು ತನಗೇ ಸೇರಬೇಕೆಂಬ ಫಲಾಭಿಲಾಷೆ ಇವುಗಳನ್ನೆಲ್ಲಾ ಬಿಟ್ಟು ತ್ಯಜಿಸಿ ಅಂದರೆ ಕರ್ತೃತ್ವಮಮತಾಫಲತ್ಯಾಗದೊಂದಿಗೆ ಅವುಗಳನ್ನು ಚೆನ್ನಾಗಿ ಅನುಷ್ಠಿಸುತ್ತಾ

**ಮಾಂ ಏಕಂ ಶರಣಂವ್ರಜ - ನನ್ನೊಬ್ಬನನ್ನೇ ಉಪಾಯವಾಗಿ ಸ್ವೀಕರಿಸು**

ಅಂದರೆ ಸರ್ವರಕ್ಷಕನಾಗಿ, ಸರ್ವಶಕ್ತನಾಗಿ, ವಾತ್ಸಲ್ಯಾದಿ ಗುಣಗಳನ್ನು ಹೊಂದಿ ನಿನಗೆ ಆಶ್ರಯನಾಗಿ, ನಿನಗೆ ಸಾರಥಿಯಾಗಿರುವ ನನ್ನೊಬ್ಬನನ್ನೇ ಉಪಾಯವಾಗಿ ಸ್ವೀಕರಿಸು - ಪರಮಾತ್ಮನಾದ ನನ್ನೊಬ್ಬನನ್ನೇ ಕರ್ತೃ, ಆರಾಧ್ಯ, ಪ್ರಾಪ್ಯ, ಉಪಾಯವೆಂದು ಅನುಸಂಧಾನ ಮಾಡುತ್ತಿರು. (ನೆನೆಸುತ್ತಿರು)

**ಅಹಂತ್ವಾ ಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ** - ಸರ್ವಜ್ಞನೂ, ಸರ್ವಶಕ್ತನೂ ಆದ ನಾನು, ಅಜ್ಞನೂ ಅಶಕ್ತನೂ ಆಗಿ ನನ್ನಲ್ಲಿ ಶರಣಾದ ನಿನ್ನನ್ನು, ನನ್ನ ಪ್ರಾಪ್ತಿಗೆ ವಿರೋಧಿಗಳಾದ ಮತ್ತು ಭಕ್ತಿಯೋಗವನ್ನು ಆರಂಭಿಸಲು ತಡೆಯಾಗಿರುವ ಅನಾದಿಕಾಲ ಸಂಚಿತವಾದ, ಅನಂತವಾದ ಪಾಪಗಳಿಂದ ಬಿಡುಗಡೆ ಮಾಡುವೆನು. ನಿನ್ನ ಪಾಪಗಳನ್ನೆಲ್ಲಾ ಹೋಗಲಾಡಿಸಿ ನಿನ್ನನ್ನು ರಕ್ಷಿಸುತ್ತೇನೆ.

**ಮಾಶುಚಃ** - ನೀನು ಶೋಕಿಸಬೇಡ ಎಂದು ಪರಮಾತ್ಮನು ಭರವಸೆ ನೀಡಿ ಅರ್ಜುನನಿಗೆ ಉಪದೇಶ ಮಾಡಿದ್ದಾನೆ. ಹೀಗೆ ಪರಮಾತ್ಮನಲ್ಲಿ ಶರಣಾಗತಿ ಮಾಡಿದ ಮೇಲೆ ಪರಮಾತ್ಮನೇ ಭಗವತ್ಪ್ರಾಪ್ತಿಗೆ ಅಡ್ಡಿಯಾಗಿರುವ ತನ್ನ ಸಮಸ್ತ ಪಾಪಗಳನ್ನೆಲ್ಲಾ ಹೋಗಲಾಡಿಸಿ ತನ್ನನ್ನು ರಕ್ಷಿಸಿಯೇ ರಕ್ಷಿಸುತ್ತಾನೆ. ಅಂದರೆ

ತಾನು ಅವನನ್ನು ಹೊಂದುವಂತೆ ಅವನೇ ಮಾಡುತ್ತಾನೆ ಎಂಬ ದೃಢ ನಂಬಿಕೆ ಹೊಂದಿ ಕಳವಳರಹಿತನಾಗಿ ಶಾಂತಚಿತ್ತನಾಗಿ ಇರಬೇಕೆಂದು ''ಮಾಶುಚಃ'' ಎಂದು ಸ್ಪಷ್ಟವಾಗಿ ತಿಳಿಸಿದ್ದಾನೆ.

**ಶರಣಾಗತಿಯ ಮಹತ್ವ**

ಪರಮಾತ್ಮನು ಶರಣಾಗತಿಯನ್ನು ಗೀತೆಯ ೧೮ನೆಯ ಅಧ್ಯಾಯದಲ್ಲಿ ಉಪದೇಶ ಮಾಡಿದ್ದಾನೆ. ೨ನೆಯ ಅಧ್ಯಾಯದಲ್ಲಿ ''ಶಿಷ್ಯಸ್ತೇ ಅಹಂ ಶಾದಿ ಮಾಂ'' ಅಂದರೆ ''ನಿನಗೆ ಶಿಷ್ಯನಾಗಿದ್ದೇನೆ ನನಗೆ ಸರಿಯಾದ ದಾರಿತೋರಿಸಿ ಕಾಪಾಡು'' ಎಂದು ಪ್ರಾರ್ಥಿಸಿದ, ತನ್ನಲ್ಲಿ ಶರಣಾದ ಅರ್ಜುನನಿಗೆ ತಕ್ಷಣವೇ ''ಸರ್ವ ಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ'' - ಎಂದು ತನ್ನಲ್ಲಿ ಶರಣಾಗುವಂತೆ ಉಪದೇಶ ಮಾಡದೆ, ಪರಮಾತ್ಮನು ಮೊದಲು ಕರ್ಮ, ಜ್ಞಾನ, ಭಕ್ತಿಯೋಗಗಳನ್ನೆಲ್ಲಾ ವಿವರವಾಗಿ ತಿಳಿಸಿ, ಕೊನೆಯಲ್ಲಿ ೧೮ನೇ ಅಧ್ಯಾಯದಲ್ಲಿ ಶರಣಾಗತಿಯನ್ನು ಉಪದೇಶ ಮಾಡಿದ್ದಾನೆ. ಆದರೆ ಅದರ ಮಹತ್ವವನ್ನು ಆರಂಭದಿಂದಲೇ ತಿಳಿಸಿದ್ದಾನೆ. ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗ ಸಾಧನೆಗಳನ್ನು ಆಚರಿಸಲು ತನಗೆ ಶಕ್ತಿ ಸಾಲದೆಂದು ಅರ್ಜುನನು ಕಳವಳಗೊಂಡಾಗಲೆಲ್ಲಾ ಪರಮಾತ್ಮನು, ''ನನ್ನಲ್ಲಿ ಶರಣಾದರೆ ನೀನು ಅವುಗಳನ್ನು ಸುಖವಾಗಿ ಆಚರಿಸಬಲ್ಲೆ'' ಎಂದು ಉಪದೇಶ ಮಾಡಿದ್ದಾನೆ. ಕೊನೆಯಲ್ಲಿ ತನ್ನಲ್ಲಿ ಶರಣಾಗತಿ ಮಾಡಿದ ಭಕ್ತನ ಸಮಸ್ತ ಪಾಪಗಳನ್ನೂ ಹೋಗಲಾಡಿಸಿ, ಅವನನ್ನು ತಾನೇ ರಕ್ಷಿಸುವುದಾಗಿಯೂ ಭರವಸೆ ನೀಡಿದ್ದಾನೆ.

ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳೆಲ್ಲಾ ಬೇರೆ ಬೇರೆ ಪ್ರತ್ಯೇಕವಾದ ಸಾಧನೆಗಳಲ್ಲ, ಇವುಗಳೆಲ್ಲ ಒಂದರೊಂದಿಗೆ ಒಂದು ಸೇರಿಕೊಂಡಿವೆ ಎಂದೂ ಮತ್ತು ಕರ್ಮಯೋಗ ಅಭ್ಯಾಸದಿಂದ ಜ್ಞಾನಯೋಗವೂ, ಕರ್ಮಯೋಗ ಮತ್ತು ಜ್ಞಾನಯೋಗಗಳಿಂದ ಭಕ್ತಿಯೋಗವೂ ಸಾಧಿಸಲ್ಪಡುತ್ತದೆ ಎಂದೂ ತಿಳಿಸಿದ್ದಾರೆ. ಪರಮಾತ್ಮನಲ್ಲಿ ಶರಣಾದವನ ಭಗವತ್ಪ್ರಾಪ್ತಿಗೆ ಅಡ್ಡಿಯಾಗಿರುವ ಸಮಸ್ತ ಪಾಪಗಳನ್ನೆಲ್ಲಾ ಪರಮಾತ್ಮನು ತಾನೇ ಹೋಗಲಾಡಿಸುವುದಾಗಿಯೂ ಭರವಸೆ ನೀಡಿದ್ದಾನೆ.

ಶರಣಾಗತಿ ಮಾಡಿದ ಮೇಲೆ ಕರ್ಮ, ಜ್ಞಾನ ಮತ್ತು ಭಕ್ತಿಸಾಧನೆಗಳೆಲ್ಲಾ ಭಗವತ್ಪ್ರಾಪ್ತಿಗೆ ಸಾಧನೆಗಳಾಗಿ ಮಾಡಲ್ಪಡದೆ, ಭಗವಂತನಲ್ಲಿ ಪ್ರೀತಿ ಭಕ್ತಿಯಿಂದ ಮಾಡುವ ಭಗವತ್ ಕೈಂಕರ್ಯಗಳಾಗಿ ಮಾಡಲ್ಪಡುತ್ತವೆ ಎಂದು

ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ. ಕರ್ಮವು ಭಗವಂತನ ಕೈಂಕರ್ಯವಾಗಿ ಮಾರ್ಪಡುತ್ತದೆ. ಅಂದರೆ ಶರಣಾಗತನಾದ ಭಕ್ತನು ತನ್ನ ನಿತ್ಯನೈಮಿತ್ತಿಕಕರ್ತವ್ಯಕರ್ಮಗಳನ್ನೆಲ್ಲಾ ಭಗವಂತನ ಕೈಂಕರ್ಯವಾಗಿ ಪ್ರೀತಿ ಭಕ್ತಿಗಳಿಂದ ಮಾಡುತ್ತಾನೆ. ಧ್ಯಾನವು ಅಂದರೆ ಅವನು ಮಾಡುವ ಆತ್ಮಪರಮಾತ್ಮಚಿಂತನ, ಧ್ಯಾನಾದಿ ಜ್ಞಾನಾಭ್ಯಾಸಗಳೆಲ್ಲಾ ಭಗವತ್ಸ್ವರೂಪಜ್ಞಾನಾನುಸಂಧಾನವಾಗಿ ಮಾರ್ಪಡುತ್ತವೆ. ಭಕ್ತಿಯು ಭೋಜನಕ್ಕೆ ಹಸಿವಿನಂತೆ ಭಗವಂತನ ಕೈಂಕರ್ಯಕ್ಕೆ ಬೇಕಾದ ರುಚಿಯಾಗಿ ಮಾರ್ಪಡುತ್ತದೆ. ಹಸಿವಿಲ್ಲದಿದ್ದರೆ ಭೋಜನವು ರುಚಿಸುವುದಿಲ್ಲ, ಅದರಂತೆ ಭಕ್ತಿಯಿಲ್ಲದಿದ್ದರೆ ಭಗವಂತನ ಕೈಂಕರ್ಯವು ರುಚಿಸುವುದಿಲ್ಲ, ಶರಣಾಗತಿ ಮಾಡಿದ ಅನಂತರ ಚೇತನನು ಭಗವಂತನ ಸ್ತೋತ್ರ, ಅರ್ಚನೆ, ಪೂಜೆ, ಧ್ಯಾನಾದಿಗಳನ್ನೆಲ್ಲಾ ಭಗವತ್ಕೈಂಕರ್ಯವಾಗಿ ಪ್ರೀತಿ ಭಕ್ತಿಗಳಿಂದ ಮಾಡುತ್ತಾನೆ. ಆದ್ದರಿಂದ ಭಗವಂತನಲ್ಲಿ ಶರಣಾದ ಭಕ್ತನು ಕರ್ಮಜ್ಞಾನಭಕ್ತಿಗಳನ್ನೆಲ್ಲ ಧರ್ಮ ಅರ್ಥ ಕಾಮ ಮೋಕ್ಷ ಪುರುಷಾರ್ಥಗಳಿಗೆ ಸಾಧನವಾಗಿ ಅನುಷ್ಠಿಸುವುದಿಲ್ಲ, ಅವುಗಳೆಲ್ಲವೂ ಪ್ರೀತಿ, ಭಕ್ತಿಗಳಿಂದ ಮಾಡುವ ಭಗವತ್ಕೈಂಕರ್ಯಗಳಾಗಿ ಮಾರ್ಪಡುತ್ತವೆ.

ಆದ್ದರಿಂದ ಮಾನವರು ತಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿಕೊಂಡು ಪರಮಪುರುಷಾರ್ಥವನ್ನು ಹೊಂದಲು ಪರಮಾತ್ಮನ ಕೃಪೆಯೇ ಉಪಾಯ ಎಂಬುದನ್ನು ಅರಿತು, ಪರಮಾತ್ಮನಲ್ಲಿ ಭಕ್ತಿಹೊಂದಿ, ಅವನಲ್ಲಿ ಶರಣಾಗಿ ಕರ್ಮ ಜ್ಞಾನಭಕ್ತಿಯೋಗ ಸಾಧನೆಗಳನ್ನೂ, ತಮ್ಮ ವೈದಿಕಲೌಕಿಕನಿತ್ಯನೈಮಿತ್ತಿಕ ಕರ್ತವ್ಯ ಕರ್ಮಗಳನ್ನೂ ಕರ್ತೃತ್ವಮಮತಾಫಲತ್ಯಾಗದೊಂದಿಗೆ ಭಗವತ್ಕೈಂಕರ್ಯವಾಗಿ ಪ್ರೀತಿಯಿಂದಲೂ, ಭಕ್ತಿಯಿಂದಲೂ ಸಂತೋಷವಾಗಿ ಆಚರಿಸುತ್ತಾ ಶಾಂತಚಿತ್ತರಾಗಿ ಇರಬೇಕು ಎಂಬುದೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನ ಸಾರವಾದ ಉಪದೇಶ ಎಂದು ನಮ್ಮ ಪೂರ್ವಾಚಾರ್ಯರುಗಳು ವಿವರಿಸಿ ತಿಳಿಸಿದ್ದಾರೆ. ಹೀಗೆ ತನ್ನಲ್ಲಿ ಶರಣಾದ ಭಕ್ತರ ಪಾಪಗಳನ್ನೆಲ್ಲಾ ಹೋಗಲಾಡಿಸಿ ಅವರನ್ನು ತಾನೇ ರಕ್ಷಿಸುವುದಾಗಿ ಭರವಸೆ ನೀಡಿ ಪರಮಾತ್ಮನು ತನ್ನ ಗೀತೋಪದೇಶವನ್ನು ಮುಗಿಸಿದ್ದಾನೆ.

### ಗೀತಾಶಾಸ್ತ್ರದ ಮಹತ್ವ (ಶ್ಲೋ 67-73)

ಅನಂತರ ಪರಮಾತ್ಮನು ಗೀತಾಶಾಸ್ತ್ರದ ಮಹತ್ವವನ್ನು ಅರ್ಜುನನಿಗೆ ತಿಳಿಸುತ್ತಾನೆ. ಗೀತಾಶಾಸ್ತ್ರವು ಬಹಳ ಶ್ರೇಷ್ಠವಾದ ಶಾಸ್ತ್ರವಾಗಿದೆ. ಇದನ್ನು ತಪಸ್ವಿಯಲ್ಲದವನಿಗೂ, ಭಗವಂತನಲ್ಲಿ ಭಕ್ತಿಇಲ್ಲದವನಿಗೂ, ಕೇಳಬೇಕೆಂಬ ಆಸೆ,

ಅಪ್ರತಿಬದ್ಧನಾಗಿಯೂ, ಭಗವಂತನನ್ನು ಧ್ಯಾನಯೋಗದಿಂದ ಚಿಂತಿಸುವವನಾಗಿಯೂ, ಹೇಳಲಾಗಿದೆ. ಇದನ್ನು ಪರಮಾತ್ಮನ ಭಕ್ತರಿಗೆ ಹೇಳುವವನು, ಪರಮಾತ್ಮನಲ್ಲಿ ಭಕ್ತಿಯಿಂದ, ಅವನನ್ನು ಸೇರುತ್ತಾನೆ. ಇದರಲ್ಲಿ ಸಂಶಯವಿಲ್ಲ. ಇದನ್ನು ಓದಿ ಕೇಳುವವರು ಪರಮಾತ್ಮನಿಗೆ ಅತ್ಯಂತ ಪ್ರಿಯರಾಗುತ್ತಾರೆ. ಪರಮಾತ್ಮನಿಗೂ ಅರ್ಜುನನಿಗೂ ನಡೆದ ಈ ಧರ್ಮ ಸಂವಾದವನ್ನು ಅಧ್ಯಯನಮಾಡುವ ಜ್ಞಾನಯಜ್ಞದಿಂದ ಪರಮಾತ್ಮನನ್ನು ಆರಾಧಿಸಿದಂತೆ ಆಗುತ್ತದೆ. ಇದನ್ನು ಶ್ರದ್ಧೆಯಿಂದ ಕೇಳುವವನೂ ಸಹ ಭಗವದ್ಭಕ್ತರ ಸಂಗವನ್ನು ಸೇರುತ್ತಾನೆ ಎಂದು ಪರಮಾತ್ಮನು ಭಗವದ್ಗೀತೆಯ ಮಹತ್ವವನ್ನು ತನ್ನ ಗೀತೋಪದೇಶದ ಕೊನೆಯಲ್ಲಿ ಅರ್ಜುನನಿಗೆ ತಿಳಿಸುತ್ತಾನೆ.

ಈ ಹದಿನೆಂಟನೆಯ ಅಧ್ಯಾಯದಲ್ಲಿ ಸರ್ವಶ್ರೇಷ್ಠನಾದ ಪರಮಾತ್ಮನೇ ಕರ್ಮಗಳ ಪ್ರಧಾನಕರ್ತಾ ಎಂಬುದೂ, ತ್ರಿಗುಣಗಳಲ್ಲಿ ಸತ್ತ್ವಗುಣವೇ ಅಂಗೀಕರಿಸತಕ್ಕದ್ದು ಎಂಬುದೂ, ತನ್ನ ಪಾಲಿನ ವಿಹಿತನಿತ್ಯಕರ್ತವ್ಯ ಕರ್ಮಗಳನ್ನೂ ಮತ್ತು ಕಾಮ್ಯಕರ್ಮಗಳನ್ನೂ ಭಗವದಾರಾಧನರೂಪವಾಗಿ ಭಕ್ತಿಯಿಂದ ಮಾಡುವುದರಿಂದ ಪರಮಪುರುಷನ ಪ್ರಾಪ್ತಿ ಉಂಟಾಗುವುದು ಎಂಬುದೂ, ಸಮಗ್ರ ಗೀತಾಶಾಸ್ತ್ರದ ಸಾರಭೂತವಾದ ಭಕ್ತಿ ಮತ್ತು ಶರಣಾಗತಿ ಯೋಗಗಳ ವಿವರಣೆಯೂ ಮತ್ತು ಗೀತಾಶಾಸ್ತ್ರದ ಮಹತ್ವವೂ ಪರಮಾತ್ಮನಿಂದ ತಿಳಿಸಲ್ಪಟ್ಟಿದೆ.

ಪರಮಾತ್ಮನ ಈ ಗೀತೋಪದೇಶವನ್ನೆಲ್ಲಾ ಕೇಳಿದ ಮೇಲೆ "ಕೃಷ್ಣ ನಾನು ಯುದ್ಧ ಮಾಡುವುದಿಲ್ಲ" ಎಂದು ಹೇಳಿ ಯುದ್ಧಭೂಮಿಯಲ್ಲಿ ಬಿಲ್ಲು ಬಾಣಗಳನ್ನು ಕೆಳಗೆ ಬಿಸುಟು ತೆಪ್ಪಗೆ ರಥದಲ್ಲಿ ಕುಳಿತ ಅರ್ಜುನನು , - "ಅಚ್ಯುತ, ನಿನ್ನ ಕೃಪೆಯಿಂದ ನನ್ನ ಮೋಹವೆಲ್ಲಾ ನಾಶವಾಯಿತು. ತತ್ತ್ವಜ್ಞಾನವು ಪ್ರಾಪ್ತವಾಯಿತು. ನಾನು ಈಗ ಸಂದೇಹರಹಿತನಾಗಿ ಇದ್ದೇನೆ. ನೀನು ಹೇಳಿದಂತೆಯೇ ಮಾಡುತ್ತೇನೆ." ಎಂದು ಹೇಳುತ್ತಾನೆ. (ಅನಂತರ ಕೆಳಗೆ ಬಿಸುಟ ಧನುಸ್ಸನ್ನು ತೆಗೆದುಕೊಂಡು ಯುದ್ಧಮಾಡಿ ಜಯಗಳಿಸಿದ್ದನೆಂದು ಶ್ರೀವ್ಯಾಸಮಹರ್ಷಿಗಳು ಮಹಾಭಾರತದಲ್ಲಿ ತಿಳಿಸಿದ್ದಾರೆ.) ಆದ್ದರಿಂದ ಈ ಗೀತೋಪದೇಶವನ್ನು ಕೇಳುವುದು ಮಾತ್ರವಲ್ಲದೆ ಅದನ್ನು ಅನುಸರಿಸಿ ಸದ್ಗತಿ ಪಡೆಯಬೇಕೆಂಬ ಸಾರವಾದ ಉಪದೇಶವೂ ಇಲ್ಲಿ ತಿಳಿಸಲ್ಪಟ್ಟಿದೆ.

# ಮುಕ್ತಾಯ

ಗೀತೋಪದೇಶದ ಪ್ರಾರಂಭದಲ್ಲಿ ''ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನನ್ನ ಮಕ್ಕಳೂ, ಪಾಂಡುವಿನ ಮಕ್ಕಳೂ ಏನು ಮಾಡಿದರು'' ಎಂದು ಧೃತರಾಷ್ಟ್ರನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಸಂಜಯನು ರಣರಂಗದಲ್ಲಿ ಅರ್ಜುನನಿಗೆ ಶ್ರೀ ಕೃಷ್ಣಪರಮಾತ್ಮನು ಉಪದೇಶ ಮಾಡಿದ ಈ ಗೀತಾಶಾಸ್ತ್ರವನ್ನು ತಿಳಿಸುತ್ತಾನೆ. ವ್ಯಾಸ ಮಹರ್ಷಿಗಳ ಅನುಗ್ರಹದಿಂದ ತಾನು ದಿವ್ಯ ಚಕ್ಷುಸ್ಸನ್ನು ಪಡೆದು ಸಾಕ್ಷಾತ್ಕರಿಸಿದ ಭಗವಂತನ ವಿಶ್ವರೂಪವನ್ನೂ, ತಾನು ಕೇಳಿದ, ಶ್ರೀಕೃಷ್ಣಪರಮಾತ್ಮನು ತಾನೇ ಸಾಕ್ಷಾತ್ತಾಗಿ ಅರ್ಜುನನಿಗೆ ಹೇಳಿದ, ಅದ್ಭುತವೂ ಮತ್ತು ಪುಣ್ಯಕರವೂ ಆದ ಈ ಗೀತೋಪದೇಶವನ್ನೂ ಪುನಃ ಪುನಃ ಸ್ಮರಿಸಿ ಸ್ಮರಿಸಿ ಅತ್ಯಂತ ಆನಂದಪಡುತ್ತಿರುವುದಾಗಿ ಹೇಳುತ್ತಾನೆ. ಅನಂತರ

''ಯತ್ರಯೋಗೇಶ್ವರಃಕೃಷ್ಣೋ
ಯತ್ರಪಾರ್ಥೋಧನುರ್ಧರಃ ।
ತತ್ರಶ್ರೀರ್ವಿಜಯೋ ಭೂತಿ
ಧ್ರುವಾನೀತಿರ್ಮತಿರ್ಮಮ'' ॥

ಅಂದರೆ ಯಾರಪಕ್ಷದಲ್ಲಿ ಯೋಗೇಶ್ವರನಾದ ಶ್ರೀಕೃಷ್ಣ ಪರಮಾತ್ಮನಿರುವನೋ, ಯಾರ ಪಕ್ಷದಲ್ಲಿ ಧನುರ್ಧಾರಿಯಾದ ಅರ್ಜುನನಿರುವನೋ ಅಲ್ಲಿ ಲಕ್ಷ್ಮಿಯೂ, ವಿಜಯವೂ, ಐಶ್ವರ್ಯವೂ, ನೀತಿಯೂ, ನ್ಯಾಯವೂ ಎಂದೆಂದಿಗೂ ಸ್ಥಿರವಾಗಿ ಇರುತ್ತದೆ ಎಂಬುದೇ ತನ್ನ ಅಭಿಪ್ರಾಯ ಎಂದು ಸಂಜಯನು ಧೃತರಾಷ್ಟ್ರನಿಗೆ ತಿಳಿಸುತ್ತಾನೆ.

ಇದೇ ಭಗವದ್ಗೀತೆಯ ಮಂಗಳಶ್ಲೋಕ. ಇಲ್ಲಿ ಯೋಗೇಶ್ವರನಾದ ಶ್ರೀಕೃಷ್ಣ ಪರಮಾತ್ಮನನ್ನು ಪರಮಗುರುವಾಗಿ ಸ್ವೀಕರಿಸಿ, ಅವನಲ್ಲಿ ಶರಣಾಗಿ, ಅವನ ಗೀತೋಪದೇಶವನ್ನೆಲ್ಲಾ ಸಾವಧಾನವಾಗಿ ಕೇಳಿ, ಅರಿತು, ಅದನ್ನು ಅನುಷ್ಠಿಸಲು ಸಿದ್ಧನಾಗಿ, ಧನುರ್ಧಾರಿಯಾದ ಅರ್ಜುನನಂತಹ ಶಿಷ್ಯನಿರುವನೋ, ಅಲ್ಲಿ ಸಂಪತ್ತೂ, ನೀತಿಯೂ, ವಿಜಯವೂ ಶಾಶ್ವತವಾಗಿ ನೆಲೆಸುವುದು ಎಂಬುದೇ ಈ ಮಂಗಳ ಶ್ಲೋಕದ ಸಾರಾರ್ಥ. ಅಂದರೆ ಪರಮಾತ್ಮನಲ್ಲಿ ಶರಣಾಗಿ ಅವನ ಗೀತೋಪದೇಶವನ್ನು ಶ್ರದ್ಧೆಯಿಂದ ಅರಿತು ಆಚರಿಸಿದರೆ ಸದ್ಗತಿ ಪ್ರಾಪ್ತವಾಗುತ್ತದೆ ಎಂಬುದೇ ಈ ಮಂಗಳ ಶ್ಲೋಕದ ಸಾರಾರ್ಥ.

ಭಗವದ್ಗೀತೆ ಕೇವಲ ಅರ್ಜುನನಿಗೆ ಮಾತ್ರ ಪರಮಾತ್ಮನು ಬೋಧಿಸಿರುವ ಉಪದೇಶವಲ್ಲ, ಇದು ಸುಖದುಃಖಾದಿದ್ವಂದ್ವಗಳಿಂದ ಕೂಡಿರುವ ಈ ಜಗತ್ತಿನಲ್ಲಿ ಹುಟ್ಟಿ, ಧರ್ಮಾಧರ್ಮಗಳ ಗೊಂದಲಕ್ಕೆ ಸಿಕ್ಕಿಕೊಂಡು, ಕಳವಳಗೊಂಡು, ದಾರಿಕಾಣದೆ, ಪರಿತಪಿಸುತ್ತಿರುವ ಮಾನವರೆಲ್ಲರಿಗೂ ಶ್ರೀಕೃಷ್ಣಪರಮಾತ್ಮನು ನೀಡಿರುವ ಉತ್ತಮವಾದ ಸಂದೇಶವಾಗಿದೆ.

★★★★

## ಶ್ರೀಕೃಷ್ಣಾರ್ಪಣಮಸ್ತು

ವಸುದೇವಸುತಂ ದೇವಂ
ಕಂಸಚಾಣೂರ ಮರ್ದನಂ
ದೇವಕೀ ಪರಮಾನಂದಂ
ಕೃಷ್ಣಂ ವಂದೇ ಜಗದ್ಗುರುಂ ॥

ಶ್ರೀರಾಮಜಯರಾಮಜಯಜಯ ರಾಮ

★★★★

ಶ್ರೀಮತೇರಾಮಾನುಜಾಯನಮಃ

★★★★

# ಗೀತಾರ್ಥ ಸಂಗ್ರಹದ ಕೊನೆಯ ಹತ್ತು ಶ್ಲೋಕಗಳು

## (ಶ್ಲೋಕಗಳು 23 ರಿಂದ 32)

(23) ಕರ್ಮಯೋಗಸ್ತಪಸ್ತೀರ್ಥ
ದಾನಯಜ್ಞಾದಿ ಸೇವನಮ್।
ಜ್ಞಾನಯೋಗೋ ಜಿತ ಸ್ವಾನ್ತೈ
ಪರಿಶುದ್ಧಾತ್ಮನಿ ಸ್ಥಿತಿ:॥

(24) ಭಕ್ತಿಯೋಗ: ಪರೈಕಾನ್ತ
ಪ್ರೀತ್ಯಾ ಧ್ಯಾನಾದಿಷು ಸ್ಥಿತಿ:।
ತ್ರಯಾಣಾಮಪಿ ಯೋಗಾನಾಂ
ತ್ರಿಭಿರನ್ಯೋನ್ಯ ಸಂಗಮ:॥

(25) ನಿತ್ಯನೈಮಿತ್ತಿಕಾನಾಂ ಚ
ಪರಾರಾಧನರೂಪಿಣಾಮ್।
ಆತ್ಮದೃಷ್ಟೇಸ್ತ್ರಯೋಽಪ್ಯೇತೇ
ಯೋಗದ್ವಾರೇಣ ಸಾಧಕಾ:॥

(26) ನಿರಸ್ತನಿಖಿಲಾಜ್ಞಾನೋ
ದೃಷ್ಟ್ವಾತ್ಮಾನಂ ಪರಾನುಗಮ್।
ಪ್ರತಿಲಭ್ಯ ಪರಾಂ ಭಕ್ತಿಂ
ತಯೈವಾಪ್ನೋತಿ ತತ್ಪದಂ॥

(27) ಭಕ್ತಿಯೋಗಸ್ತದರ್ಥೀ ಚೇತ್
ಸಮಗ್ರೈಶ್ವರ್ಯ ಸಾಧಕ:।
ಆತ್ಮಾರ್ಥೀ ಚೇತ್ ತ್ರಯೋಽಪ್ಯೇತೇ
ತತ್ಕೈವಲ್ಯಸ್ಯ ಸಾಧಕಾ:॥

(28) ಐಕಾನ್ತ್ಯಂ ಭಗವತ್ಯೇಷಾಂ
ಸಮಾನಮಧಿಕಾರಿಣಾಂ।
ಯಾವತ್ಪ್ರಾಪ್ತಿ ಪರಾರ್ಥೀ ಚೇತ್
ತದೇವಾತ್ಯನ್ತ ಮಶ್ನುತೇ॥

(29) ಜ್ಞಾನೀ ತು ಪರಮೈಕಾನ್ತೀ
ತದಾಯತ್ತಾತ್ಮಜೀವನಃ।
ತತ್ಸಂಶ್ಲೇಷ ವಿಯೋಗೈಕ
ಸುಖದುಃಖಸ್ತದೇಕಧೀಃ॥

(30) ಭಗವದ್ಧ್ಯಾನ ಯೋಗೋಕ್ತಿ
ವಂದನಸ್ತುತಿಕೀರ್ತನೈಃ।
ಲಬ್ಧಾತ್ಮಾ ತದ್ಗತ ಪ್ರಾಣ
ಮನೋಬುದ್ಧೀಂದ್ರಿಯ ಕ್ರಿಯಃ॥

(31) ನಿಜಕರ್ಮಾದಿ ಭಕ್ತ್ಯಂತಂ
ಕುರ್ಯಾತ್ಪ್ರೀತ್ಯೈವ ಕಾರಿತಃ।
ಉಪಾಯತಾಂ ಪರಿತ್ಯಜ್ಯ
ನ್ಯಸ್ಯೇದ್ದೇವೇತು ತಾಮಭೀಃ ॥

(32) ಏಕಾಂತಾತ್ಯಂತ ದಾಸ್ಯೈಕ
ರತಿಸ್ತತ್ಪದಮಾಪ್ನುಯಾತ್।
ತತ್ಪ್ರಧಾನಮಿದಂ ಶಾಸ್ತ್ರಂ
ಇತಿ ಗೀತಾರ್ಥಸಂಗ್ರಹಃ॥

★★★★

## ಗೀತಾರ್ಥ ಸಂಗ್ರಹದ ಕೊನೆಯ 10 ಶ್ಲೋಕಗಳ ತಾತ್ಪರ್ಯಾರ್ಥ (ಶ್ಲೋಕಗಳು 23 ರಿಂದ 32)

ಈ ಹತ್ತು ಶ್ಲೋಕಗಳಲ್ಲಿ ಶ್ರೀಯಾಮುನಾಚಾರ್ಯರು ಮೊದಲು ಕರ್ಮ, ಜ್ಞಾನ ಮತ್ತು ಭಕ್ತಿಯೋಗಗಳನ್ನು ವಿವರಿಸಿ, ಅವು ಮೂರೂ ಒಂದರೊಂದಿಗೆ ಒಂದು ಸೇರಿ ಕೊಂಡಿವೆ ಎಂಬುದನ್ನೂ ಮತ್ತು ಭಕ್ತಿ ಮತ್ತು ಶರಣಾಗತಿ ಯೋಗಗಳೇ ಪ್ರಧಾನವಾದುದು ಎಂಬುದನ್ನೂ ತಿಳಿಸಿ ಕೊನೆಯಲ್ಲಿ ಜ್ಞಾನಿಯಾದ ಭಕ್ತನ ಲಕ್ಷಣಗಳನ್ನು ತಿಳಿಸಿದ್ದಾರೆ.

ಶ್ಲೋಕ 23 ಕರ್ಮಯೋಗ-ತಪಸ್ಸು, ತೀರ್ಥಯಾತ್ರೆ, ದಾನ, ಯಜ್ಞ ಮುಂತಾದುವುಗಳನ್ನೆಲ್ಲಾ ಆಚರಿಸುವುದೇ ಕರ್ಮಯೋಗವು, ಜ್ಞಾನಯೋಗ - ಮನಸ್ಸನ್ನು ಜಯಿಸಿ ಪರಿಶುದ್ಧವಾದ ಅಂತಃಕರಣವನ್ನುಹೊಂದಿ ಶರೀರವಿಯುಕ್ತನಾದ ಪರಿಶುದ್ಧನಾದ ಆತ್ಮನ ಚಿಂತನೆ ಧ್ಯಾನಾದಿಗಳನ್ನು ಮಾಡುವುದೇ ಜ್ಞಾನಯೋಗವು.

ಶ್ಲೋಕ 24 ಭಕ್ತಿಯೋಗ- ಪರಮಾತ್ಮನೊಬ್ಬನಲ್ಲೇ ಅತ್ಯಂತ ಪ್ರೀತಿ ಹೊಂದಿ ಅವನ ಧ್ಯಾನಾದಿಗಳನ್ನು ಮಾಡುವುದು - ಅಂದರೆ ಅವನೊಬ್ಬನಲ್ಲೇ ಪ್ರೀತಿಯಿಂದ ಕೂಡಿದ ಧ್ಯಾನಾದಿಗಳ ಮೂಲಕ ಮನಸ್ಸನು ನಿಲ್ಲಿಸುವುದು ಭಕ್ತಿಯೋಗವು.

ಈ ಕರ್ಮಜ್ಞಾನಭಕ್ತಿಯೋಗಗಳು ಮೂರೂ ಒಂದರೊಂದಿಗೆ ಒಂದು ಅನ್ಯೋನ್ಯವಾಗಿ ಸೇರಿಕೊಂಡಿವೆ-(ಅಂದರೆ ಕರ್ಮಯೋಗದಲ್ಲಿ ಕರ್ಮವೂ, ಜ್ಞಾನ ಯೋಗದಲ್ಲಿ ಜ್ಞಾನವೂ, ಭಕ್ತಿಯೋಗದಲ್ಲಿ ಭಕ್ತಿಯೂ ಪ್ರಧಾನವಾಗಿರುತ್ತವೆ ಮತ್ತು ಮಿಕ್ಕಎರಡೂ ಅದಕ್ಕೆ ಅಂಗವಾಗಿರುತ್ತವೆ)

ಶ್ಲೋಕ 25 ನಿತ್ಯನೈಮಿತ್ತಿಕಕರ್ಮಗಳನ್ನು ಕರ್ಮಯೋಗವಾಗಿ, ಭಗವದಾರಾಧನವಾಗಿ ಆಚರಿಸಿದರೆ ಅದಕ್ಕೆ ಭಕ್ತಿ ಯೋಗದ ಸಂಬಂಧ ಉಂಟಾಗುತ್ತದೆ. ಅದರಲ್ಲಿ ಅಡಗಿರುವ ಜ್ಞಾನಾಂಶದಿಂದ ಅದಕ್ಕೆ ಜ್ಞಾನಯೋಗದಸಂಬಂಧವೂ ಉಂಟಾಗುತ್ತದೆ. ಹೀಗೆ ಕರ್ಮ, ಜ್ಞಾನ, ಮತ್ತು ಭಕ್ತಿ ಯೋಗಗಳು ಮೂರೂ ಒಂದರೊಂದಿಗೆ ಒಂದು ಸೇರಿ

ಕೊಂಡು ಕಾಲಕ್ರಮೇಣ ಯೋಗಾಭ್ಯಾಸದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಸಾಧಿಸಿಕೊಳ್ಳುತ್ತಾನೆ.

ಶ್ಲೋಕ 26 ಜೀವನು ತನ್ನ ಅಧ್ಯಾತ್ಮಪ್ರವೃತ್ತಿಯಾದಮೇಲೆ ಆತ್ಮನಾದ ತನ್ನನ್ನು ಪರಮಾತ್ಮನಿಗೆ ಶೇಷಭೂತನಾಗಿ (ದಾಸನಾಗಿ) ಅರಿತು, ಪರಮಾತ್ಮನಲ್ಲಿ ಅಧಿಕವಾದ ಭಕ್ತಿ ಹೊಂದಿ ಅಂದರೆ ಪರಮಭಕ್ತಿ ಹೊಂದಿ, ತನ್ನೊಳಗೆ ಪರಮಪದವನ್ನು ಅಂದರೆ ಭಗವತ್ಸಾಕ್ಷಾತ್ಕಾರವನ್ನು ಹೊಂದುವನು.

ಶ್ಲೋಕಗಳು 27-28 ಭಕ್ತಿಯೋಗವು ಐಶ್ವರ್ಯವನ್ನು ಆಸೆಪಟ್ಟವರಿಗೆ ಐಶ್ವರ್ಯವನ್ನು ಸಾಧಿಸಿ ಕೊಡುತ್ತದೆ. ಆತ್ಮಾನುಭವವನ್ನು ಆಸೆಪಟ್ಟರೆ ಅದನ್ನೇ ಅಂದರೆ ಆತ್ಮಸಾಕ್ಷಾತ್ಕಾರರೂಪ ಕೈವಲ್ಯವನ್ನೇ ಸಾಧಿಸಿ ಕೊಡುತ್ತದೆ. ಅವುಗಳನ್ನು ಅಪೇಕ್ಷಿಸದೆ ಮೋಕ್ಷವನ್ನೇ ಅಪೇಕ್ಷಿಸಿದರೆ ಮೋಕ್ಷವನ್ನೇ ಸಾಧಿಸಿ ಕೊಡುತ್ತದೆ.

ಐಶ್ವರ್ಯಾರ್ಥಿ, ಕೈವಲ್ಯಾರ್ಥಿ, ಮತ್ತು ಮೋಕ್ಷಾರ್ಥಿ ಈ ಮೂರು ವಿಧ ಅಧಿಕಾರಿಗಳೂ ಭಗವಂತನೊಬ್ಬನಲ್ಲೇ ಪ್ರೀತಿ ಹೊಂದಿ ಫಲಪ್ರಾಪ್ತಿಯವರೆಗೆ ಬೇರೆ ಏನನ್ನೂ ಅಪೇಕ್ಷಿಸದೇ ಅವನನ್ನೇ ಅಪೇಕ್ಷಿಸಿದರೆ ಅವನನ್ನೇ ಹೊಂದುವರು.

ಶ್ಲೋಕಗಳು 29,30,31,32 ---ಈ ನಾಲ್ಕು ಶ್ಲೋಕಗಳಲ್ಲಿ ಭಗವಂತನನ್ನೇ ಹೊಂದ ಬೇಕೆಂದು ಇಚ್ಛಿಸುವ ಜ್ಞಾನಿಯಾದ ಭಕ್ತನ ಲಕ್ಷಣಗಳು ತಿಳಿಸಲ್ಪಟ್ಟಿವೆ. ಜ್ಞಾನಿಯಾದ ಭಕ್ತನು ಪರಮಾತ್ಮ ನೊಬ್ಬನಲ್ಲೇ ಸಕ್ತವಾದಮನಸ್ಸುಳ್ಳವನೂ, ಭಗವದಧೀನವಾದ ಆತ್ಮವುಳ್ಳವನೂ, ತದಧೀನವಾದ ಜೀವನವುಳ್ಳವನೂ, ಪರಮಾತ್ಮನ ಸಂಶ್ಲೇಷದಲ್ಲಿ ಸುಖವೂ, ಅವನ ವಿಯೋಗದಲ್ಲಿ ದುಃಖವೂ ಉಳ್ಳವನೂ, ಅವನಲ್ಲೇ ನೆಟ್ಟ ಮನಸ್ಸುಳ್ಳವನೂ ಆಗಿರುತ್ತಾನೆ (29)

ಆ ಜ್ಞಾನಿಯಾದ ಭಕ್ತನು ಭಗವಂತನನ್ನು ಧ್ಯಾನಮಾಡುವುದೂ

ಯೋಗಾಭ್ಯಾಸದ ಮೂಲಕ ಭಗವಂತನನ್ನು ಸಾಕ್ಷಾತ್ಕರಿಸುವುದೂ, ಭಗವಂತನ ವಿಷಯವನ್ನು ಶಿಷ್ಯರಿಗೆ ಉಪದೇಶಿಸುವುದೂ, ಭಗವಂತನಿಗೆ ತ್ರಿಕರಣಗಳಿಂದ ನಮಸ್ಕರಿಸುವುದೂ, ಅವನನ್ನು ಸ್ತೋತ್ರ ಮಾಡುವುದೂ, ಅವನ ದಿವ್ಯನಾಮ ಸಂಕೀರ್ತನೆ ಮಾಡುವುದೂ, ಇವುಗಳಿಂದ ಕೂಡಿದ ಆತ್ಮಸ್ವರೂಪವುಳ್ಳವನಾಗಿ ಇರುವನು ಮತ್ತು ಪರಮಾತ್ಮನಲ್ಲೇ ಸಕ್ತವಾದ (ಇಡಲ್ಪಟ್ಟ) ಪ್ರಾಣ, ಮನಸ್ಸು, ಬುದ್ಧಿ, ಇಂದ್ರಿಯ ಕ್ರಿಯಾದಿಗಳನ್ನು ಉಳ್ಳವನಾಗಿ ಇರುವನು.(30)

ಅವನು ತನ್ನ ನಿತ್ಯನೈಮಿತ್ತಿಕಕರ್ಮಗಳಿಂದ ಹಿಡಿದು ಭಕ್ತಿಯೋಗದ ವರೆಗೆ ಮಾಡುವ ಸಮಸ್ತ ಕರ್ಮಗಳನ್ನೆಲ್ಲಾ ಭಗವತ್ಪ್ರೀತಿಯಿಂದಲೇ ಮಾಡುತ್ತಾನೆ. ಅವುಗಳು ಭಗವತ್ಪ್ರಾಪ್ತಿಗೆ ಉಪಾಯಗಳು ಎಂಬ ಬುದ್ಧಿಯನ್ನು ತ್ಯಜಿಸಿ, ಅವುಗಳನ್ನು ಭಗವತ್ಕೈಂಕರ್ಯಗಳಾಗಿ ಮಾಡುತ್ತಾನೆ. ಭಗವಂತನೇ ತನಗೆ ಉಪಾಯ, ಅವನೇ ತನಗೆ ರಕ್ಷಕನೆಂದು ದೃಢವಾಗಿ ನಂಬಿ ಭಯರಹಿತನಾಗಿ ಇರುತ್ತಾನೆ-

ಹೀಗೆ ಅವನು ಭಗವಂತನೇ ತನಗೆ ರಕ್ಷಕನೆಂಬ ಒಂದೇ ನಿಶ್ಚಯಬುದ್ಧಿಹೊಂದಿ, ತಾನು ಜೀವಿಸಿರುವವರೆಗೆ ಸತ್ಕರ್ಮಗಳನ್ನು, ಅವುಗಳು ಭಗವತ್ಪ್ರಾಪ್ತಿಗೆ ಸಾಧನಗಳೆಂಬ ಬುದ್ಧಿಯನ್ನು ಬಿಟ್ಟು, ಅವುಗಳೆಲ್ಲವೂ ಭಗವತ್ಕೈಂಕರ್ಯಗಳೆಂಬ ಬುದ್ಧಿಯಿಂದ ಮಾಡುತ್ತಾ, ನಿರ್ಭಯನಾಗಿ ಇದ್ದು ಕೊಂಡು, ಮೋಕ್ಷವನ್ನು ಅಂದರೆ ಪರಮಾತ್ಮನನ್ನು ಹೊಂದುವನು-ಎಂಬುದು ಭಗವದ್ಗೀತೆಯ ಸಾರಾರ್ಥ-ಅದೇ ಗೀತಾರ್ಥಸಂಗ್ರಹವು

**ಶ್ರೀಮದ್ವರವರಮುನಯೇನಮ:**

**ಶ್ರೀಮತೇರಾಮಾನುಜಾಯನಮಃ**

★★★★

# ಗ್ರಂಥಸೂಚಿ


೧. ಭಗವದ್ಗೀತೈ - (ತಮಿಳು)- ತಿರುವಹೀಂದ್ರಪುರಂ ಶೆಟ್ಲೂರ್ ಭಗವದ್ವಿಷಯ ವಿದ್ವಾನ್ ಶ್ರೀ. ಉ. ವೇ. ನರಸಿಂಹಾಚಾರ್ಯಸ್ವಾಮಿ.

೨. ಶ್ರೀಮದ್ಭಗವದ್ಗೀತೈ - (ತಮಿಳು) ವಿದ್ವಾನ್ ಶ್ರೀ ಕಾರ್ಪಂಕಾಡು ವೆಂಕಟಾಚಾರ್ಯಸ್ವಾಮಿಗಳವರ ತಮಿಳು ಉಪನ್ಯಾಸಗಳ ಸಂಕಲನ.

೩. 'ಭಗವದ್ಗೀತೆ' - ಶ್ರೀ ಸಿ. ಯಂ. ವಿಜಯರಾಘವಾಚಾರ್ಯರು.

೪. ಮಹಾತ್ಮ ಗಾಂಧೀಯವರ ಅನಾಸಕ್ತಿಯೋಗ.

೫. ಶ್ರೀ ವಿನೋಬಾಭಾವೆಯವರ ಗೀತಾ ಪ್ರವಚನ.

೬. The Gitabhashya of Ramanuja by Sri. M. R. Sampath Kumaran.

೭. Sri Ramanuja on the Gita by Sri S.S. Raghavachar.

೮. Githartha Sangraha and Gita Sara (English & Tamil) - By. Sri Uttanur T. Raghavacharya & Sri K. Bhashyam.

೯. The Bhagavad Githa (a simple Paraphrase in English) by Sri. S. Parthasarathy Iyengar.

೧೦. ಶ್ರೀಮದ್ಭಗವದ್ಗೀತಾ, ಶ್ರೀರಾಮಾನುಜಭಾಷ್ಯ ಅನುವಾದ ಸಹಿತ್ - (ಹಿಂದಿ) ಶ್ರೀ ಹರಿಕೃಷ್ಣದಾಸ್ ಗೋಯಂಕ.


—o—